ಸಂಪುಟ: 04 ಸಂಚಿಕೆ: 327 ಪುಟಗಳು: 08 ಶನಿವಾರ 08 ಫೆಬ್ರವರಿ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


**ಮುಂಜಾನೆ ಮಾತು**

ದೇವರು ತಡ ಮಾಡಿದರು ನ್ಯಾಯ ಮಾಡುತ್ತಾನೆ, ಆದರೆ ಅನ್ಯಾಯ ಮಾಡುವುದಿಲ್ಲ, ತಡ ಆಗುವುದರ ಹಿಂದೆ ''ಅದ್ಭುತಗಳು'' ನಡೆಯುತ್ತವೆ, ಕಾದು ನೋಡಬೇಕು ಅಷ್ಟೇ.

## ಮೈಕ್ರೋ ಫೈನಾನ್ಸ್ ಕಿರುಕುಳ

# ಸುಗ್ರೀವಾಜ್ಞೆ ತಿರಸ್ಕಾರ ಕಾನೂನು ಸಮರ







ಸುಗ್ರೀವಾಜ್ಞೆ ತಿರಸ್ಕರಿಸಿದ ರಾಜ್ಯಪಾಲರು

ಕಡಿವಾಣ ಹಾಕಲು ಮುಂದಾದ ಸರ್ಕಾರ

ಮೈಕ್ರೋಫೈನಾನ್ಸ್ ಹಾವಳಿಗೆ ವಿಧಾನಮಂಡಲ ಅಧಿವೇಶನದಲ್ಲೇ ಮಸೂದೆ ಮಂಡಿಸಿ ಚರ್ಚೆ ಮಾಡಿ

### ಮೈಕ್ರೋ ಫೈನಾನ್ಸ್ ಸರ್ಕಾರಕ್ಕೆ ಬಹುದೊಡ್ಡ ಹಿನ್ನಡೆ

### ಸರ್ಕಾರಕ್ಕೆ ಸಲಹೆ, ಸಾಲ ಕೊಟ್ಟವರ ರಕ್ಷಣೆ ಬಗ್ಗೆ ರಾಜ್ಯಪಾಲರು ಆಕ್ಷೇಪ

### ಕಾನೂನು ತತ್ವದ ಉಲ್ಲಂಘನೆ

ಸುಗ್ರೀವಾಜ್ಞೆಯಲ್ಲಿ ನಿಯಮ ಉಲ್ಲಂಘಿಸಿದವರ ವಿರುದ್ಧ ಗರಿಷ್ಠ 10 ವರ್ಷ ಸೆರೆಮನೆವಾಸ ಹಾಗೂ 5 ಲಕ್ಷ ರೂ. ದಂಡ ವಿಧಿಸುವ ಅಂಶ ಸೇರಿಸಲಾಗಿದೆ. ಮೈಕ್ರೋ ಫೈನಾನ್ಸ್‌ನಿಂದ ಗರಿಷ್ಠ 3 ಲಕ್ಷ ಸಾಲ ಪಡೆಯುವ ಮಿತಿ ಇರುವಾಗ, 5 ಲಕ್ಷ ದಂಡ ವಿಧಿಸುವುದು ಸಹಜ ಕಾನೂನು ತತ್ವದ ಉಲ್ಲಂಘನೆಯಾಗುವ ಸಾಧ್ಯತೆ ಇದೆ. ಜೊತೆಗೆ ಕರಡು ಸುಗ್ರೀವಾಜ್ಞೆಯಲ್ಲಿ ಪ್ರಸ್ತಾಪಿತ ದಂಡದ ಮೊತ್ತವನ್ನು ಇದೇ ರೀತಿಯ ಅಪರಾಧಗಳಿಗೆ ಹಾಲಿ ಕಾನೂನಿನಡಿ ವಿಧಿಸುವ ದಂಡದ ಮೊತ್ತಕ್ಕೆ ಹೋಲಿಸಿದರೆ ಅಸಮಂಜಸದಿಂದ ಕೂಡಿದೆ. ಇದು ಸಹಜ ನ್ಯಾಯದ ತತ್ವಕ್ಕೆ ವ್ಯತಿರಿಕ್ತ ಎಂದು ಉಲ್ಲೇಖಿಸಿದ್ದಾರೆ.

1. ಮೈಕ್ರೋ ಫೈನಾನ್ಸ್ ಕಿರುಕುಳ ತಡೆಯಲು ರಾಜ್ಯ ಸರಕಾರ ಕಟ್ಟುನಿಟ್ಟಿನ ಕ್ರಮ
2. ತುಮಕೂರು ಜಿಲ್ಲೆಯಲ್ಲಿ ಮೈಕ್ರೋ ಫೈನಾನ್ಸ್ ಕಿರುಕುಳ ತಡೆಗೆ ಕ್ರಮವಹಿಸಿದ ಜಿಲ್ಲಾಡಳಿತ
3. ಕರ್ನಾಟಕ ಲೇವಾದೇವಿದಾರರ ಅಧಿನಿಯಮ-1961ರಡಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚನೆ

• ಉದಯವಾಹಿನಿ, ಬೆಂಗಳೂರು

ಮೈಕ್ರೋ ಫೈನಾನ್ಸ್ ಕಿರುಕುಳ ತಡೆ ಮಸೂದೆ ಕುರಿತಾದ ರಾಜ್ಯ ಸರ್ಕಾರದ ಸುಗ್ರೀವಾಜ್ಞೆಯನ್ನು ರಾಜ್ಯಪಾಲರು ತಿರಸ್ಕರಿಸಿದ್ದಾರೆ. ಈ ಬಗ್ಗೆ ಸಿಎಂ ಕಚೇರಿ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ. ರಾಜ್ಯ ಸರ್ಕಾರಕ್ಕೆ ಬಹುದೊಡ್ಡ ಹಿನ್ನಡೆಯಾಗಿದೆ. ಹಲವು ಲೋಪದೋಷಗಳನ್ನ ಗುರುತಿಸಿ ಸುಗ್ರೀವಾಜ್ಞೆಗೆ ಅಂಕಿತ ಹಾಕದೇ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ವಾಪಸ್ ಕಳುಹಿಸಿದ್ದಾರೆ. ವಿಧಾನಮಂಡಲ ಅಧಿವೇಶನದಲ್ಲೇ ಮಸೂದೆ ಮಂಡಿಸಿ ಚರ್ಚೆ ಮಾಡಿ ಕಳುಹಿಸಿ ಎಂದು ಸುಗ್ರೀವಾಜ್ಞೆ ತಿರಸ್ಕರಿಸಿದ್ದಾರೆ. ಸುಗ್ರೀವಾಜ್ಞೆ ಮೂಲಕ ಮೈಕ್ರೋ ಫೈನಾನ್ಸ್ ಕಿರುಕುಳಕ್ಕೆ ಬ್ರೇಕ್ ಹಾಕಲು ಮುಂದಾಗಿದ್ದ ಸರ್ಕಾರ ಈಗ ಸುಗ್ರೀವಾಜ್ಞೆ ಕರಡು ಬಿಲ್ ಪರಿಷ್ಕರಣೆ ಮಾಡಿ ಮಸೂದೆ ತರಬೇಕಿದೆ. ಈ ಮೊದಲು ಕೆಲ ದೋಷಗಳನ್ನು ಸರಿಪಡಿಸುವಂತೆ ಸ್ಪಷ್ಟೀಕರಣಕ್ಕೆ ರಾಜ್ಯಪಾಲರು ಸರ್ಕಾರಕ್ಕೆ ಕಳುಹಿಸಿದರು. ಆದಾದ ಬಳಿಕ ಮತ್ತೆ ಸುಗ್ರೀವಾಜ್ಞೆ ಕಳುಹಿಸಿದ್ದ ಸರ್ಕಾರ. ಅಲ್ಲದೇ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಸಿಎಂ ಸಿಎಸ್ ರಾಜ್ಯಪಾಲರನ್ನ ಭೇಟಿ ಮಾಡಿ ವಿವರಣೆ ನೀಡಿದ್ದಾರೆ.

ಆದ್ರೆ, ಆರ್‌ಬಿಐ ನಿಯಮಾವಳಿಗಳಿಗೆ ಅಡ್ಡಿ, ಸಾಲ ಕೊಟ್ಟವರ ರಕ್ಷಣೆ ಬಗ್ಗೆ ರಾಜ್ಯಪಾಲರು ಆಕ್ಷೇಪ ವ್ಯಕ್ತಪಡಿಸಿದ್ದು, ಸುಗ್ರೀವಾಜ್ಞೆ ವಾಪಸ್ ಕಳುಹಿಸಿದ್ದಾರೆ ಎನ್ನಲಾಗಿದೆ.

### ಸ್ವಸಹಾಯ ಸಂಸ್ಥೆಗಳ ಮೇಲೆ ಪ್ರತಿಕೂಲ ಪರಿಣಾಮ

ಈ ಸುಗ್ರೀವಾಜ್ಞೆ ಕಟ್ಟಕಡೆಯ ಬಡವರಿಗೆ ಸಾಲ ನೀಡುವ ಸ್ವಸಹಾಯ ಸಂಸ್ಥೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದೆ. ರಾಜ್ಯದಲ್ಲಿನ ಸ್ವಸಹಾಯ ಸಂಘಗಳ ವಹಿವಾಟು ಮೇಲೆ ಪರಿಣಾಮ ಬೀರಲಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

### ಸಹಜ ನ್ಯಾಯಕ್ಕೆ ವ್ಯತಿರಿಕ್ತ

ಪಡೆದ ಸಾಲದಿಂದ ಮುಕ್ತಗೊಳಿಸಿದರೆ ಕಾನೂನುಬದ್ಧವಾಗಿ ಸಾಲ ನೀಡಿದ ಸಂಸ್ಥೆಗಳು ಸಮಸ್ಯೆ ಎದುರಿಸುವ ಸಾಧ್ಯತೆ ಇದೆ. ಅವರ ಮುಂದೆ ತಾವು ನೀಡಿರುವ ಸಾಲವನ್ನು ವಸೂಲಿ ಮಾಡುವ ಯಾವುದೇ ಆಯ್ಕೆಗಳಿರದೇ ಕಾನೂನು ಹೋರಾಟಕ್ಕೆ ಅನುವು ಮಾಡಿಕೊಡಲಿದೆ. ಇದು ಸಹಜ ನ್ಯಾಯಕ್ಕೆ ವ್ಯತಿರಿಕ್ತವಾಗುವ ಸಾಧ್ಯತೆ ಇದ್ದು, ಮೂಲಭೂತ ಹಕ್ಕಿನ ಉಲ್ಲಂಘನೆಯಾಗುವ ಸಾಧ್ಯತೆ ಬಗ್ಗೆ ರಾಜ್ಯಪಾಲರು ಸ್ಪಷ್ಟನೆ ಕೇಳಿದ್ದಾರೆ.



### ಸಾಲದಾತನ ಮೇಲೂ ಪರಿಣಾಮ

ಈ ಸುಗ್ರೀವಾಜ್ಞೆ ಯಾವ ರೀತಿ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಉಪಟಳವನ್ನು ನಿಯಂತ್ರಿಸಲು ಅನುಕೂಲಕರವಾಗಲಿದೆ ಎಂಬ ಬಗ್ಗೆ ಸ್ಪಷ್ಟೀಕರಣ, ಅಂಕಿ ಅಂಶ, ಕಾನೂನು ಸಲಹೆಗಳನ್ನು ಕಡತದಲ್ಲಿ ಲಗತ್ತಿಸಿಲ್ಲ. ಮುಖ್ಯವಾಗಿ ಈ ಸುಗ್ರೀವಾಜ್ಞೆ ಸಾಲಗಾರರಿಗೆ ಅನುಕೂಲ ಮಾಡಿಕೊಡಲಿದೆ. ಆದರೆ ಸಮಾಜದ ಭಾಗವಾದ ಸಾಲದಾತನ ಮೇಲೂ ಪರಿಣಾಮ ಬೀರಲಿದೆ. ಹೀಗಾಗಿ ಈ ಅಂಶಗಳನ್ನು ವಿಧಾನಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸುವ ಅಗತ್ಯ ಇದೆ. ಬಜೆಟ್ ಅಧಿವೇಶನ ಮುಂದಿನ ತಿಂಗಳಿನಿಂದ ಆರಂಭವಾಗಲಿದ್ದು, ತರಾತುರಿಯಲ್ಲಿ ಸುಗ್ರೀವಾಜ್ಞೆ ಜಾರಿಗೆ ತರುವ ಬದಲು, ಅಧಿವೇಶನದಲ್ಲಿ ವಿಸ್ತೃತವಾಗಿ ಚರ್ಚೆ ನಡೆಸಿ, ಸಂತ್ರಸ್ತರ ಹಿತರಕ್ಷಣೆಗಾಗಿ ಪರಿಣಾಮಕಾರಿ ಕಾನೂನು ತರುವುದು ಒಳಿತು. ಹೀಗಾಗಿ ಕೋರಲಾದ ಸ್ಪಷ್ಟನೆ, ವಿವರಣೆ, ಸಲಹೆಯೊಂದಿಗೆ ಕಡತವನ್ನು ಮರುಸಲ್ಲಿಕೆ ಮಾಡುವಂತೆ ರಾಜ್ಯಪಾಲರು ಸೂಚನೆ ನೀಡಿ, ಸುಗ್ರೀವಾಜ್ಞೆ ಹಿಂದಿರುಗಿಸಿದ್ದಾರೆ.

### ರಾಜ್ಯಪಾಲರು ಸುಗ್ರೀವಾಜ್ಞೆ ವಾಪಸ್ ಕಳುಹಿಸಿದ್ದೇಕೆ

ಮಸೂದೆಯಲ್ಲಿ ಸಾಲ ಪಡೆದವರಿಗೆ ರಕ್ಷಣೆ ಇದೆ. ಆದ್ರೆ, ಸಹಜ ನ್ಯಾಯದ ಅಡಿಯಲ್ಲಿ ಸಾಲ ಕೊಟ್ಟವರಿಗೆ ರಕ್ಷಣೆ ಇಲ್ಲ. ಅಲ್ಲದೇ ಆರ್‌ಬಿಐ ನಿಯಮಗಳು, ಪೊಲೀಸ್ ನಿಯಮಗಳಲ್ಲಿ ವ್ಯತಿರಿಕ್ತ ಪರಿಣಾಮಗಳಿವೆ. ಸಾಲಪಡೆದವರಿಗೆ ರಕ್ಷಣೆ ಇರುವಂತೆ, ಸಾಲ ಕೊಡುವವರಿಗೂ ರಕ್ಷಣೆ ಇರಬೇಕು. ವಿಧಾನ ಮಂಡಲ ಅಧಿವೇಶನ ಹತ್ತಿರದಲ್ಲೇ ಇದೆ. ಅಲ್ಲೇ ಮಸೂದೆ ಮಂಡನೆ ಮಾಡಿ, ಚರ್ಚೆ ಬಳಿಕ ಅಂಗೀಕಾರ ಮಾಡಬಹುದು ಎಂದು ರಾಜ್ಯಪಾಲರು ಸರ್ಕಾರಕ್ಕೆ ಸಲಹೆ ನೀಡಿದ್ದಾರೆ. ಸುದೀರ್ಘ ಅವಧಿಯಲ್ಲಿ ಇದು ಮಾರಕವಾಗಲಿದೆ. ಮೈಕ್ರೋ ಫೈನಾನ್ಸ್ 3 ಲಕ್ಷಕ್ಕಿಂತ ಜಾಸ್ತಿ ಸಾಲ ಕೊಡುವುದಿಲ್ಲ. ನೀವು 5 ಲಕ್ಷ ದಂಡ ಹೇಗೆ ಹಾಕುತ್ತೀರಾ... ಸಾಲ ಪಡೆಯುವವನ ಬಳಿ ಏನೂ ದಾಖಲೆ ತಗೆದುಕೊಳ್ಳಬಾರದು ಎಂದು ಹೇಳಿದ್ದೀರಿ. ಆದರೆ ಇದು ಸರ್ಕಾರಿ ಸಂಸ್ಥೆಗಳ ಸಾಲದ ವೇಳೆ ಅನುಸರಿಸಬೇಕಾದ ಪರಿಸ್ಥಿತಿ ಎದುರಾಗಬಹುದು. ಶಿಕ್ಷೆ ಪ್ರಮಾಣ 10 ವರ್ಷ ವಿಧಿಸಲಾಗಿದೆ, ಶಿಕ್ಷೆ ಪ್ರಮಾಣದಲ್ಲಿ ಯಾವುದೇ ಲಾಜಿಕ್ ಇಲ್ಲ. ಪ್ರಾಮಾಣಿಕವಾಗಿ ಸಾಲ ಕೊಟ್ಟವರಿಗೂ, ಪ್ರಾಮಾಣಿಕವಾಗಿ ಸಾಲ ಮರುಪಾವತಿ ಮಾಡುವವರಿಗೂ ಸಮಸ್ಯೆ ಆಗಲಿದೆ.

## ಬದಲಾವಣೆ ಆಗೋದು ಸಹಜ ಬಿವೈವಿ ಅಸಮಾಧಾನಕ್ಕೆ ಪ್ರತಿಕ್ರಿಯೆ

• ಉದಯವಾಹಿನಿ, ಬಾಗಲಕೋಟೆ

ಬಿ.ಎಸ್. ಯಡಿಯೂರಪ್ಪ ಅವರ ಬಳಿ ಸಹಾಯ ಪಡೆದುಕೊಂಡವರು ಅತೃಪ್ತ ಟೀಮ್‌ನವರ ಆರೋಪಕ್ಕೆ ಹಿರಿಯ ನಾಯಕರು ಏನೂ ಮಾತಾಡ್ತಿಲ್ಲ ಎಂಬ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಬೇಸರ ವಿಚಾರಕ್ಕೆ ಬಿಜೆಪಿ ರಾಜ್ಯ ಉಪಾಧ್ಯಕ್ಷ ಮುರಗೇಶ್ ನಿರಾಣಿ ಪ್ರತಿಕ್ರಿಯಿಸಿದ್ದಾರೆ. 'ತಂದೆಯವರ ಬಗ್ಗೆ ಲಾಭ ಪಡೆದುಕೊಂಡವರು ಅನ್ನೋದು ಅಲ್ಲ ಈಗ ನನಗೆ ಬೀಳಗಿ ಜನತೆ ನನಗೆ ಆಶೀರ್ವಾದವನ್ನೂ ಮಾಡಿದ್ದಾರೆ ಆರಿಸಿಯೂ ತಂದಿದ್ದಾರೆ, ಮನೆಯಲ್ಲೂ ಕೂರಿಸಿದ್ದಾರೆ. ಅದೇ ತರಹ ನನ್ನ ಮಗ ಬಂದಾನ ಅಂದ್ರೆ, ಮಗನ ಕೊಡುಗೆ ಏನು ಅನ್ನೋದು ಬೇಕಲ್ಲ? ವಿಜಯೇಂದ್ರ ಯುವಕ ಇದ್ಯಾನ, ಚೆನ್ನಾಗಿ ಕೆಲಸ ಮಾಡ್ತಿದ್ದಾನೆ. ಹಿರಿಯರ ಅಭಿಪ್ರಾಯ ಮಾರ್ಗದರ್ಶನ ತಗೊಳ್ಳೋದ್ರಲ್ಲಿ ಕೆಲವೊಂದಿಷ್ಟು ಕಡೆ ಎಡವಿರಬಹುದು' ಎಂದರು. '50 ವರ್ಷಗಳ ಯಡಿಯೂರಪ್ಪ ಅವರ ಹೋರಾಟ ಹಾಗೂ ಸಂಘಟನೆಯಲ್ಲಿ ಅನುಭವ ಪಡೆದವನಿದ್ದಾನೆ. ಅವನೂ ಸಹ ಇನ್ನೂ ಹೆಚ್ಚು ಶಕ್ತಿ ಹಾಕಲಿ ಎಂದರು.

## ಮರಗಳ ಕಡಿತಲೆ: ತನಿಖೆಗೆ ಸಚಿವ ಈಶ್ವರ ಖಂಡ್ರೆ ಸೂಚನೆ

• ಉದಯವಾಹಿನಿ, ಹಾಸನ

ಜಿಲ್ಲೆ ಸಕಲೇಶಪುರ ತಾಲ್ಲೂಕಿನ ಯರಗಳ್ಳಿಯಲ್ಲಿ ಮರಗಳ ಕಡಿತಲೆ ಆಗಿದೆ ಎನ್ನಲಾದ ಪ್ರಕರಣದ ಸಮಗ್ರ ತನಿಖೆ ನಡೆಸಿ, ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಸೂಚನೆ ನೀಡಿದ್ದಾರೆ. ಕಚೇರಿಗೆ ಬಂದ ದೂರಿನ ಹಿನ್ನೆಲೆಯಲ್ಲಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಸೂಚನೆ ನೀಡಿರುವ ಸಚಿವ ಖಂಡ್ರೆ, ಅತ್ತಿಹಳ್ಳಿ ಸಮೀಪದ ಯರಗಳ್ಳಿಯಲ್ಲಿ ಮರಗಳನ್ನು ಕತ್ತರಿಸಿ ರಾಶಿ ಹಾಕಿರುವುದು ಜಿಪಿಎಸ್ ಚಿತ್ರದಿಂದ ಸ್ಪಷ್ಟವಾಗುತ್ತಿದೆ. ಈ ಬಗ್ಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ನೇತೃತ್ವದ ತಂಡದಿಂದ ತನಿಖೆ ನಡೆಸಿ ಕ್ರಮ ಕೈಗೊಳ್ಳಲು ಸೂಚಿಸಿದ್ದಾರೆ. ಸರ್ಕಾರಿ, ಅರಣ್ಯ ಅಥವಾ ಪರಿಭಾವಿತ ಅರಣ್ಯದಲ್ಲಿ ಮರ ಕಡಿದಿದ್ದಲ್ಲಿ ಅರಣ್ಯ ಅಪರಾಧ ಪ್ರಕರಣ ದಾಖಲಿಸಿ, ನಿಯಮಾನುಸಾರ ಕ್ರಮ ಜರುಗಿಸಲು, ಪಟ್ಟಾ ಜಮೀನಿನಲ್ಲಿ ಅನುಮತಿ ಪಡೆದು ಮರ ಕಡಿದಿದ್ದರೆ ಇಷ್ಟೊಂದು ಪ್ರಮಾಣದ ಮರ ಕಡಿಯಲು ಅನುಮತಿ ನೀಡಿದ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳಬೇಕು. ಒಂದೊಮ್ಮೆ ಅನುಮತಿಯೇ ಇಲ್ಲದೆ ಅಕ್ರಮವಾಗಿ ಕಡಿತಲೆ ಮಾಡಿದ್ದಲ್ಲಿ ಈ ವಲಯದ ಅರಣ್ಯ ಸಿಬ್ಬಂದಿಯ ನಿರ್ಲಕ್ಷ್ಯವೂ ಸೇರಿದಂತೆ ಸಮಗ್ರ ತನಿಖೆ ನಡೆಸಿ, ಕೈಗೊಳ್ಳಬೇಕು. ಕ್ರಮದ ವಿವರದೊಂದಿಗೆ 3 ದಿನಗಳ ಒಳಗಾಗಿ ವರದಿ ಸಲ್ಲಿಸಲು ಸೂಚಿಸಿದ್ದಾರೆ.

## ಬಣ ಬಡಿದಾಟಕ್ಕೆ ಬ್ರೇಕ್: 15-20 ದಿನಗಳಲ್ಲಿ ಅಂತಿಮ ತೀರ್ಮಾನ

• ಉದಯವಾಹಿನಿ, ಬೆಂಗಳೂರು

ರಾಜ್ಯ ಬಿಜೆಪಿಯಲ್ಲಿನ ಬಣ ಬಡಿದಾಟಕ್ಕೆ ಹೈಕಮಾಂಡ್ ಬ್ರೇಕ್ ಹಾಕಿದಂತಿದೆ. ರಾಜ್ಯ ನಾಯಕರಿಗೆ ಬಿಜೆಪಿ ರಾಜ್ಯ ಉಸ್ತುವಾರಿಗಳು ಖಡಕ್ ಸೂಚನೆ ನೀಡಿದ್ದಾರೆ ಎಂದು ವಿಪಕ್ಷ ನಾಯಕ ಆರ್. ಅಶೋಕ್ ತಿಳಿಸಿದ್ದಾರೆ. ರಾಜ್ಯ ಬಿಜೆಪಿಯಲ್ಲಿನ ಬೆಳವಣಿಗೆ, ಭಿನ್ನಾಭಿಪ್ರಾಯ ಸರಿಯಲ್ಲ. ಕಾಂಗ್ರೆಸ್ ಸರ್ಕಾರದ ದುರಾಡಳಿತದ ವಿರುದ್ಧ ಹೋರಾಡಲು ನಮಗೆ ಒಳ್ಳೆಯ ಅವಕಾಶ ಸಿಕ್ಕಿರುವಾಗ ಸರ್ಕಾರದ ವಿರುದ್ಧ ಒಗ್ಗಟ್ಟಿನಿಂದ ಹೋರಾಟ ನಡೆಸದೇ ನಮ್ಮಲ್ಲೇ ಬಡಿದಾಟ ನಡೆಸುತ್ತಿರುವುದು ಪಕ್ಷದ ಹಿತದೃಷ್ಟಿಯಿಂದ ಒಳ್ಳೆಯ ಬೆಳವಣಿಗೆಯಲ್ಲ.

ಹೀಗಾಗಿ ರಾಜ್ಯ ಉಸ್ತುವಾರಿಗಳು ಖಡಕ್ ಸೂಚನೆ ನೀಡಿದ್ದಾರೆ. ಏನೇ ಮಾತನಾಡಿದರೂ ನಾಲ್ಕು ಗೋಡೆ ಮಧ್ಯೆ ಮಾತನಾಡಬೇಕು. ಉಸ್ತುವಾರಿಗಳು ಹೇಳಿರುವುದಕ್ಕೆ ನಾಯಕರಿಗೂ ಹೇಳುತ್ತಿದ್ದೇನೆ ಎಂದು ತಿಳಿಸಿದ್ದಾರೆ. ವರಿಷ್ಠರು, ಉಸ್ತುವಾರಿಗಳು, ನಮ್ಮ ಅಭಿಪ್ರಾಯಗಳು ಎಲ್ಲವೂ ಒಂದೆ ಆಗಿದೆ. ಯಾರೂ ಕೂಡ ಹಾದಿಬೀದಿಯಲ್ಲಿ ಮಾತನಾಡಬಾರದು. 15-20 ದಿನಗಳಲ್ಲಿ ಹೈಕಮಾಂಡ್ ಅಂತಿಮ ತೀರ್ಮಾನ ಕೈಗೊಳ್ಳಲಿದೆ. ಹೈಕಮಾಂಡ್ ನಿರ್ಧಾರದ ಬಳಿಕ ಎಲ್ಲಾವೂ ನಾರ್ಮಲ್ ಆಗಲಿದೆ ಎಂದು ಹೇಳಿದರು.

## ರಾಜ್ಯಪಾಲರು ಬಿಜೆಪಿ ವಕ್ತಾರರಂತೆ ಕೆಲಸಮಾಡುತ್ತಿದ್ದಾರೆ: ಸಚಿವ

• ಉದಯವಾಹಿನಿ, ಮಂಡ್ಯ

ಮೈಕ್ರೋ ಫೈನಾನ್ಸ್ ಕಿರುಕುಳಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಸರ್ಕಾರ ಜಾರಿಗೆ ತರಲು ಹೊರಟಿದ್ದ ಸುಗ್ರೀವಾಜ್ಞೆಗೆ ರಾಜ್ಯಪಾಲರು ಅಂಕಿತ ಹಾಕದೇ ಕಳುಹಿಸಿರುವ ವಿಚಾರವಾಗಿ ಪ್ರತಿಕ್ರಿಯಿಸಿರುವ ಕೃಷಿ ಸಚಿವ ಚಲುವರಾಯಸ್ವಾಮಿ, ರಾಜ್ಯಪಾಲರು ಸಂವಿಧಾನಿಕ ಹುದ್ದೆಯಲ್ಲಿದ್ದು ನ್ಯಾಯ ಕೊಡುವ ಕೆಲಸ ಮಾಡಬೇಕಿತ್ತು ಎಂದು ಅಸಮಾಧನ ವ್ಯಕ್ತಪಡಿಸಿದ್ದಾರೆ. ಮೈಕ್ರೋ ಫೈನಾನ್ಸ್ ಕಿರುಕುಳಕ್ಕೆ ನೊಂದು ಹಲವರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇಂತಹ ತೊಂದರೆ ತಪ್ಪಿಸಲು ರಾಜ್ಯ ಸರ್ಕಾರ ಕೂಡ ನಿಲುವು ತೆಗೆದುಕೊಂಡಿದೆ. ಸುಗ್ರೀವಾಜ್ಞೆ ಮೂಲಕ ಕಾನೂನು ಜಾರಿಗೆ ತೀರ್ಮಾನ ಕೈಗೊಂಡಿದೆ. ಆದರೆ ರಾಜ್ಯಪಾಲರು ಸುಗ್ರೀವಾಜ್ಞೆಗೆ ಅಂಕಿತ ಹಾಕದೇ ಬಿಜೆಪಿ ವಕ್ತಾರರಂತೆ ನಡೆದುಕೊಂಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

## ಸಿಎಂ ಬದಲಾವಣೆ ಪ್ರಶ್ನೆಯೇ ಕೇಳಬೇಡಿ, ಸಿಡಿಮಿಡಿಗೊಂಡ ಸಚಿವ

• ಉದಯವಾಹಿನಿ, ದಾವಣಗೆರೆ



ಹೈಕಮಾಂಡ್ ನಾಯಕರು ಬಾಯಿ ಮುಚ್ಚಿಕೊಂಡಿರುವಂತೆ ಹೇಳಿದ್ದು, ಹೀಗಾಗಿ ನಾನು ಸಿಎಂ ಸಿದ್ದರಾಮಯ್ಯ ಬದಲಾವಣೆ, ಯಾವ ವಿಚಾರಕ್ಕೂ ಪ್ರತಿಕ್ರಿಯೆ ನೀಡಲ್ಲ ಎಂದು ಸಚಿವ ಮಧು ಬಂಗಾರಪ್ಪ ಮಾಧ್ಯಮದವರ ಎದುರು ಸಿಡಿಮಿಡಿಗೊಂಡ ಪ್ರಸಂಗ ನಡೆದಿದೆ. ರಾಜ್ಯ ಕಾಂಗ್ರೆಸ್ ಆಪರೇಷನ್ ಹಸ್ತ ನಡೆಸುತ್ತಿದೆಯಾ, ಸಿಎಂ ಚೇಂಜ್ ಆಗ್ತಾರಾ ಎಂಬ ಪತ್ರಕರ್ತರ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ನನಗೆ ಬಾಯಿ ಮುಚ್ಚಿಕೊಂಡು ಇರಿ ಎಂದಿದ್ದಾರೆ.ಆದ್ದರಿಂದ ಇಂತಹ ಪ್ರಶ್ನೆಗಳನ್ನೇ ಕೇಳಬೇಡಿ ಎಂದರು. ಸಿಎಂ ವಿರುದ್ಧ ಮುಡಾ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಲು ಕೋರಿ ಸಲ್ಲಿಸಿದ್ದ ಅರ್ಜಿ ವಜಾಗೊಂಡ ಬಗ್ಗೆಯೂ ಮಾತನಾಡಿದ ಸಚಿವರು, ಅನಗತ್ಯವಾಗಿ ಮುಡಾ ವಿವಾದವನ್ನು ಎಳೆದು ತರಲಾಗಿದೆ. ಹೈಕೋರ್ಟ್ ತೀರ್ಪು ಸ್ವಾಗತಿಸುವೆ. ಇನ್ನು ದೂರುದಾರರು ಸುಪ್ರೀಂ ಕೋರ್ಟ್‌ಗೆ ಹೋಗುವುದಾಗಿ ಹೇಳಿದ್ದಾರೆ. ಕಾನೂನಿನಲ್ಲಿ ಅವರಿಗೂ ಅವಕಾಶವಿದೆ. ಅವರಿಗೆ ಹೋಗಬೇಡಿ ಎಂದು ಹೇಳಲು ಬರಲ್ಲ ಎಂದು ತಿಳಿಸಿದರು. ಈ ಹಿಂದೆ ಕ್ಯಾಬಿನೆಟ್ ಸಭೆಯಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ 6 ಸಾವಿರ ಶಿಕ್ಷಕರ ಹುದ್ದೆಗಳ ಭರ್ತಿಗೆ ಅನುಮತಿ ಸಿಕ್ಕಿದೆ.

ಕ್ರಮೇಣವಾಗಿ ಶಿಕ್ಷಕರ ನೇಮಕಾತಿ ಮಾಡುತ್ತೇವೆ ಎಂದು ಇದೇ ವೇಳೆ ಸಚಿವರು ಮಾಹಿತಿ ನೀಡಿದರು.

## ಯಡಿಯೂರಪ್ಪ ಅವರೇ ನಮ್ಮ ಹೈಕಮಾಂಡ್


• ಉದಯವಾಹಿನಿ, ವಿಜಯನಗರ

ಬಿಜೆಪಿ ಹೈಕಮಾಂಡ್ ಬುಲಾವ್ ಹಿನ್ನೆಲೆಯಲ್ಲಿ ದೆಹಲಿಗೆ ತೆರಳಲು ಸಿದ್ಧತೆ ನಡೆಸಿರುವ ಮಾಜಿ ಸಚಿವ ಶ್ರೀರಾಮುಲು, ಬಿ.ಎಸ್.ಯಡಿಯೂರಪ್ಪನವರೇ ನಮ್ಮ ಹೈಕಮಾಂಡ್ ಎಂದಿದ್ದಾರೆ. ಅವರು ತೆಗೆದುಕೊಳ್ಳುವ ನಿರ್ಧಾರವೇ ಅಂತಿಮ ಅದಕ್ಕೆ ನಾವು ಬದ್ಧ ಎಂದರು. ರಾಜ್ಯಾಧ್ಯಕ್ಷರನ್ನು ಬದಲಿಸುವುದಾದರೆ ನನಗೆ ಅವಕಾಶ ಕೊಡಿ ಎಂದು ಹೈಕಮಾಂಡ್ ಬಳಿ ವಿನಂತಿಸಿಕೊಂಡಿದ್ದೇನೆ. ಅಂತಿಮವಾಗಿ ಪಕ್ಷ ಕೈಗೊಳ್ಳುವ ತೀರ್ಮಾನಕ್ಕೆ ಬದ್ಧ ಎಂದರು. ಅಸಮಾಧಾನಿತರೆಲ್ಲರೂ ದೆಹಲಿಯಲ್ಲಿ ವರಿಷ್ಠರ ಜೊತೆ ಮಾತುಕತೆ ನಡೆಸಿದ್ದಾರೆ. ಹೀಗಾಗಿ ಎಲ್ಲಾವೂ ಬಗೆಹರಿಯುವ ವಿಶ್ವಾಸವಿದೆ ಎಂದು ತಿಳಿಸಿದರು. ಇದೇ ವೇಳೆ ಶಾಸಕ ಜನಾರ್ಧನ ರೆಡ್ಡಿ ವಿಚಾರವಾಗಿ ಮಾತನಾಡಿದ ಶ್ರೀರಾಮುಲು, ಜನಾರ್ಧನ ರೆಡ್ಡಿ ಜೊತೆ ಮತ್ತೆ ಒಂದಾಗಲು ಸಾಧ್ಯವಿಲ್ಲ. ಬೇರೆ ವಿಷಯವಾಗಿದ್ದರೆ ಸಂಧಾನವಾಗಬಹುದಿತ್ತೇನೋ. ಆದರೆ ಇದು ಬೇರೆಯೇ ಇದೆ ಎಂದು ಹೇಳಿದರು.

## ಪೋಕ್ಸ್ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಮಂಜೂರು!

### ಬಿಎಸ್‌ವೈಗೆ ಬಿಗ್ ರಿಲೀಫ್

• ಉದಯವಾಹಿನಿ, ಧಾರವಾಡ




ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರು ಪ್ರಕರಣವನ್ನು ರದ್ದು ಕೋರಿ ಹೈಕೋರ್ಟ್ ಗೆ ಅರ್ಜಿ ಸಲ್ಲಿಸಿದ್ದರು. ಇದೀಗ ಈ ಒಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಧಾರವಾಡ ಹೈಕೋರ್ಟ್ ಪೀಠವು ತೀರ್ಪು ಪ್ರಕಟಿಸಿದ್ದು, ನ್ಯಾ.ಎಂ ನಾಗಪ್ರಸನ್ನ ಅವರು ಬಿ ಎಸ್ ಯಡಿಯೂರಪ್ಪ ಅವರಿಗೆ ನಿರೀಕ್ಷಣಾ ಜಾಮೀನು ಮಂಜೂರು ನೀಡಿ ಆದೇಶ ಹೊರಡಿಸಿದರು. ವಿಚಾರಣೆ ಆರಂಭವಾದ ಬಳಿಕ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ನ್ಯಾ. ಎಂ ನಾಗಪ್ರಸನ್ನ ಅವರು ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ಅವರಿಗೆ ನಿರೀಕ್ಷಣಾ ಜಾಮೀನು ನೀಡಿದ್ದಾರೆ ಹೀಗಾಗಿ ಯಡಿಯೂರಪ್ಪ ಅವರು ಬಂಧನದ ಭೀತಿಯಿಂದ ಪಾರಾಗಿದ್ದಾರೆ ಎಂದು ತಿಳಿದುಬಂದಿದೆ. ಸದ್ಯಕ್ಕೆ ಅವರಿಗೆ ಪೋಕ್ಸ್ ಪ್ರಕರಣದಲ್ಲಿ ಇದೊಂದು ಬಿಗ್ ರಿಲೀಫ್ ಸಿಕ್ಕಂತಾಗಿದೆ. ಆದರೆ ಯಡಿಯೂರಪ್ಪ ವಿರುದ್ಧದ ಕೇಸ್ ರದ್ದತಿಗೆ ಹೈಕೋರ್ಟ್ ನಿರಾಕರಿಸಿದೆ. ಈ ಒಂದು ಪ್ರಕರಣದಲ್ಲಿ ಬಿಎಸ್ ಯಡಿಯೂರಪ್ಪ ಗೆ ತಾತ್ಕಾಲಿಕ ರಿಲೀಫ್ ಸಿಕ್ಕಿದೆ. ಆದರೆ ಯಡಿಯೂರಪ್ಪ ವಿರುದ್ಧದ ಕೇಸ್ ರದ್ದು ಮಾಡಲು ಹೈಕೋರ್ಟ್ ನಕಾರ. ಆರೋಪ ಪಟ್ಟಿ ರದ್ದುಪಡಿಸಲು ಹೈಕೋರ್ಟ್ ನಕಾರ. ಹಾಗಾಗಿ ಬಿ ಎಸ್ ಯಡಿಯೂರಪ್ಪ ಹೈಕೋರ್ಟ್ ವಿಚಾರಣೆಗೆ ಒಳಪಡಲಿದ್ದಾರೆ.

# ಗ್ಯಾರಂಟಿಗಳ ಭ್ರಮೆಯಲ್ಲಿದ್ದ ಎಎಪಿ, 27 ವರ್ಷಗಳ ನಂತರ ಬಿಜೆಪಿ ಅಧಿಕಾರಕೆ

● ರಾಜ್ಯದ ಚುಕ್ಕಾಣಿ ಹಿಡಿದ ಆಮ್ ಆದ್ಮಿ ಪಾರ್ಟಿಗೆ ತಕ್ಕ ಉತ್ತರವನ್ನು ನೀಡಿದ್ದಾರೆ ● ಬಿಜೆಪಿ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬರುವ ವಿಶ್ವಾಸ

• ಉದಯವಾಹಿನಿ, ಬೆಂಗಳೂರು



ದೆಹಲಿ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಏರುವ ವಿಶ್ವಾಸವಿದೆ. ದೆಹಲಿ ರಾಜ್ಯದ ಚುನಾವಣೆ ನಿನ್ನೆ ನಡೆದಿದೆ. 9-10 ಸಮೀಕ್ಷೆಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದಂತೆ 27 ವರ್ಷಗಳ ನಂತರ ದೆಹಲಿ ರಾಜ್ಯದಲ್ಲಿ ಬಿಜೆಪಿ ಮತ್ತೊಮ್ಮೆ ಅಧಿಕಾರಕ್ಕೆ ಬರಲಿದೆ.

ಗ್ಯಾರಂಟಿಗಳ ಭ್ರಮೆಯಲ್ಲಿದ್ದ ಆಮ್ ಆದ್ಮಿ ಪಾರ್ಟಿಗೆ ತಕ್ಕ ಪಾಠವನ್ನು ಆ ರಾಜ್ಯದ ಜನರು ಕಲಿಸುತ್ತಾರೆ. ಭ್ರಷ್ಟಾಚಾರದ ವಿರುದ್ಧ ಆಂದೋಲನ ಮಾಡಿ, ರಾಜ್ಯದ ಚುಕ್ಕಾಣಿ ಹಿಡಿದ ಆಮ್ ಆದ್ಮಿ ಪಾರ್ಟಿಗೆ ತಕ್ಕ ಉತ್ತರವನ್ನು ನೀಡಿದ್ದಾರೆ. ಬಿಜೆಪಿ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬರುವ ವಿಶ್ವಾಸ ನಮಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ ವೈ ವಿಜಯೇಂದ್ರ ಅವರು ಹೇಳಿದರು.

ಈ ಕುರಿತು ಮಾಧ್ಯಮಗಳ ಜೊತೆಗೆ ಮಾತನಾಡಿದ ವಿಜಯೇಂದ್ರ ಅವರು, ಕೇಂದ್ರದ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಅತ್ಯುತ್ತಮ ಬಜೆಟ್ ಅನ್ನು ಮಂಡನೆ ಮಾಡಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿಜೀ ಅವರ ವಿಕಸಿತ ಭಾರತದ ಕನಸು ನನಸಾಗುವ ನಿಟ್ಟಿನಲ್ಲಿ ಅಭಿವೃದ್ಧಿಗೆ ಪೂರಕವಾದ, ಬಡವರು, ರೈತರು, ಯುವಕರು, ಮಹಿಳೆಯರ ಪರವಾಗಿ ಒಂದು ಅತ್ಯುತ್ತಮ ಬಜೆಟ್ ಅನ್ನು ನೀಡಿದ್ದಾರೆ ಎಂದು ಮೆಚ್ಚುಗೆ ಸೂಚಿಸಿದರು. 12 ಲಕ್ಷದವರೆಗೆ ಆದಾಯ ತೆರಿಗೆ ಕಟ್ಟುವಂತಿಲ್ಲ ಎಂಬ ನಿರ್ಧಾರದಿಂದ ಮಧ್ಯಮ ವರ್ಗದವರಿಗೆ ಬಹಳಷ್ಟು ಅನುಕೂಲವಾಗಿದೆ, ಜನರ ಬಹುವರ್ಷಗಳ ನಿರೀಕ್ಷೆಗೆ ತಕ್ಕಂತೆ ಬಜೆಟ್ ಮಂಡಿಸಿದ್ದು, ಪ್ರತಿಯೊಬ್ಬರೂ ಸಂತಸ ಪಡುವ ವಿಚಾರ ಎಂದರು. ಸಿದ್ದರಾಮಯ್ಯನವರಿಂದ ಕೇಂದ್ರದ ಬಜೆಟ್ ಬಗ್ಗೆ ಒಳ್ಳೆಯ ಮಾತು ಕೇಳಲು ಸಾಧ್ಯವಿಲ್ಲ; ಸಹಜವಾಗಿ ಅವರು ಟೀಕೆಗಳನ್ನು ಮಾಡಿದ್ದಾರೆ. ಕರ್ನಾಟಕವೂ ಸೇರಿದಂತೆ ದೇಶದ ಪ್ರತಿಯೊಂದು ರಾಜ್ಯದಲ್ಲೂ ಸಹ ಈ ಬಜೆಟ್ ಬಗ್ಗೆ ಮೆಚ್ಚುಗೆ ವ್ಯಕ್ತವಾಗಿದೆ ಎಂದು ನುಡಿದರು. ಜನರ ರಕ್ಷಣೆಗೆ ಬರಬೇಕಾದ ರಾಜ್ಯ ಸರಕಾರವು ದೌರ್ಜನ್ಯ ಎಸಗುವ ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಗೆ ಸಂಜೆ 5 ಗಂಟೆತನಕ ಹೋಗಲು ಗ್ರೀನ್ ಸಿಗ್ನಲ್ ಕೊಟ್ಟಿದೆ. ಬೆಳಿಗ್ಗೆ 10ರಿಂದ 5ಗಂಟೆವರೆಗೆ ಹೋಗಿ ಎಂಬ ಮಾತನ್ನು ರಾಜ್ಯ ಸರಕಾರ ಹೇಳುತ್ತಿರುವುದು ದುರ್ದೈವ ಎಂದು ಟೀಕಿಸಿದರು. ಒಂದು ಕಡೆ ತಮ್ಮ ಗ್ಯಾರಂಟಿಗಳಿಂದ ರಾಜ್ಯದಲ್ಲಿ ಜನರು ಸಮೃದ್ಧರಾಗಿದ್ದಾರೆ. ಆಲ್ ಈಸ್ ವೆಲ್ ಎಂದು ಹೇಳಿಕೊಳ್ಳುತ್ತಾರೆ. ಮತ್ತೊಂದು ಕಡೆ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ದೌರ್ಜನ್ಯ ಮತ್ತು ಭಯಾಟೆಯಿಂದ ರಾಜ್ಯದಲ್ಲಿ ಬಡವರು, ಮಹಿಳೆಯರು, ಕೂಲಿ ಕಾರ್ಮಿಕರು ತತ್ತರಿಸಿ ಹೋಗಿದ್ದಾರೆ ಎಂದರು.

### ಸ್ವಸಹಾಯ ಸಂಸ್ಥೆಗಳ ಮೇಲೆ ಪ್ರತಿಕೂಲ ಪರಿಣಾಮ

ಮೈಕ್ರೋ ಫೈನಾನ್ಸ್ ಸಂಸ್ಥೆಗಳ ವ್ಯೂಹಕ್ಕೆ ಬಡವರು ಸಿಲುಕಿದ್ದಾರೆ. ರಾಜ್ಯ ಸರಕಾರವು ದೌರ್ಜನ್ಯಕ್ಕೆ ಅವಕಾಶ ಕೊಡುವುದನ್ನು ಬದಿಗಿಟ್ಟು ಮುಗ್ಧ ಬಡಜನರ- ರೈತರ ರಕ್ಷಣೆಗೆ ಧಾವಿಸಲು ಅವರು ಆಗ್ರಹಿಸಿದರು. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರದ ಅಭಿವೃದ್ಧಿ ಅನುದಾನ ಇಲ್ಲದೇ ಶಾಸಕರು ಅಭಿವೃದ್ಧಿರಹಿತ ಕ್ಷೇತ್ರದೊಂದಿಗೆ ಕೈಕಟ್ಟಿ ಕುಳಿತಿರುವ ದಾರುಣ ಪರಿಸ್ಥಿತಿ ಇದೆ. ರೈತರ ಗೋಳು ಸರಕಾರ ಕೇಳುತ್ತಿಲ್ಲ; ಹಗಲು ದರೋಡೆ, ಕೊಲೆ, ಅತ್ಯಾಚಾರ ಪ್ರಕರಣಗಳು ದಿನೇದಿನೇ ಹೆಚ್ಚಾಗುತ್ತಿದೆ. ಇದಲ್ಲದೇ ಕಾನೂನು- ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ ಎಂದು ಆರೋಪಿಸಿದರು.

### ಹಣ ಮರುಪಾವತಿ ಮಾಡಲಾಗದೆ ಪ್ರಾಣ ಕಳಕೊಳ್ಳುತ್ತಿದ್ದಾರೆ

ರಾಜ್ಯದಲ್ಲಿ ಚುನಾಯಿತ ಸರಕಾರ, ಮುಖ್ಯಮಂತ್ರಿಗಳು ಇದ್ದಾರಾ ಎಂದು ಜನರು ಪ್ರಶ್ನಿಸುವಂತಾಗಿದೆ. ಸರಕಾರ ರಾಜ್ಯದ ಅಭಿವೃದ್ಧಿ ಸೇರಿ ಎಲ್ಲವನ್ನೂ ಮರೆತಿದೆ. ಸರಕಾರದ ವಿರುದ್ಧ ಬೀದಿಗಿಳಿದು ಹೋರಾಟ ಮಾಡುವ ಪರಿಸ್ಥಿತಿ ನಿರ್ಮಾಣ ಮಾಡಿಕೊಂಡಿದೆ ಎಂದು ಆಕ್ಷೇಪಿಸಿದರು. ಕರ್ನಾಟಕದಲ್ಲಿ ಮೈಕ್ರೋ ಫೈನಾನ್ಸ್ ಹಾವಳಿಯ ಕುರಿತು ಬಹಳಷ್ಟು ಚರ್ಚೆ ಆಗುತ್ತಿದೆ. ಹಲವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೈಕ್ರೋ ಫೈನಾನ್ಸ್ ಹಾವಳಿ ಮತ್ತು ವಸೂಲಾತಿ ದೌರ್ಜನ್ಯದಿಂದ ಭಯಭೀತರಾಗಿ ಹಣ ಮರುಪಾವತಿ ಮಾಡಲು ಸಾಧ್ಯವಾಗದೆ ಪ್ರಾಣ ಕಳಕೊಳ್ಳುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹8,651 /Gram24ct ₹7,930/Gram22ct | ಬೆಳ್ಳಿ: ₹99.50/Gram

ಅಂತರಾಳದಿಂದ.. EDITORIAL

# ಅಕ್ರಮ ವಲಸಿಗರ ಗಡೀಪಾರು ಅಪಾಯದ ಬಗ್ಗೆ ಅರಿವು ಬೇಕು

ಅಗತ್ಯ ದಾಖಲೆಗಳು ಇಲ್ಲದೆ ಅಮೆರಿಕ ಪ್ರವೇಶಿಸಿದ್ದ ಭಾರತೀಯರನ್ನು ಅಲ್ಲಿಂದ ಗಡೀಪಾರು ಮಾಡಿದ ದೃಶ್ಯಗಳು, ಆ ಭಾರತೀಯರು ಸ್ವದೇಶದ ವಿಮಾನ ನಿಲ್ದಾಣಕ್ಕೆ ಬಂದಿಳಿದ ದೃಶ್ಯಗಳು ವಲಸೆಗೆ ಸಂಬಂಧಿಸಿದ ಕಾನೂನುಗಳನ್ನು ಅಮೆರಿಕದ ಈಗಿನ ಆಡಳಿತವು ಎಷ್ಟು ಕಟ್ಟುನಿಟ್ಟಾಗಿ ಜಾರಿಗೆ ತರುತ್ತಿದೆ ಎಂಬುದನ್ನು ಸೂಚಿಸುತ್ತಿವೆ. ಬಹಳ ಅಪಾಯಕಾರಿಯಾದ ಹಾಗೂ ಅಕ್ರಮವಾದ ಮಾರ್ಗವನ್ನು ಬಳಸಿ ಇನ್ನೊಂದು ದೇಶಕ್ಕೆ ತೆರಳಿ ಅಲ್ಲಿ ಇಲ್ಲಿಗಿಂತ ಹೆಚ್ಚು ಉತ್ತಮವಾದ ಜೀವನವನ್ನು ಕಂಡುಕೊಳ್ಳಬಹುದು ಎಂದು ಕೆಲವರು ಇಂದಿಗೂ ಭಾವಿಸುತ್ತಿದ್ದಾರೆ ಎಂಬುದನ್ನು ಈ ಪ್ರಸಂಗವು ಹೇಳುತ್ತಿದೆ. ಅಮೆರಿಕದ ಸೇನಾ ವಿಮಾನದಲ್ಲಿ ಅಮೃತಸರಕ್ಕೆ ಬಂದಿಳಿದ ಬಹುತೇಕರು ಅಕ್ರಮ ಹಾಗೂ ಸಕ್ರಮ ವಲಸೆಯ ದೊಡ್ಡ ಇತಿಹಾಸವನ್ನು ಹೊಂದಿರುವ ರಾಜ್ಯಗಳಿಗೆ ಸೇರಿದವರು.

> **ಅಕ್ರಮ ವಲಸಿಗರ ವಿರುದ್ಧ ಅಮೆರಿಕವು ತನ್ನ ಕಾರ್ಯಾಚರಣೆಯನ್ನು ಕೆಲವು ವರ್ಷಗಳಿಂದ ಚುರುಕುಗೊಳಿಸುತ್ತಿದ ಎಂಬುದು ಸ್ಪಷ್ಟವಾಗಿತ್ತು. ಕಳೆದ ವರ್ಷ ಕೂಡ ಅಮೆರಿಕದ ಅಧಿಕಾರಿಗಳು ಕೆಲವು ಅಕ್ರಮ ವಲಸಿಗರನ್ನು ಅವರ ದೇಶಗಳಿಗೆ ಕಳುಹಿಸಿದ್ದರು. ಅವರಲ್ಲಿ ಒಂದಿಷ್ಟು ಮಂದಿ ಭಾರತೀಯರೂ ಇದ್ದರು. ಆದರೆ ಈಗ ಅಲ್ಲಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಅಕ್ರಮ ವಲಸಿಗರನ್ನು ವಾಪಸ್ ಕಳುಹಿಸುವ ಕಾರ್ಯಾಚರಣೆಗಳಿಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ಟ್ರಂಪ್ ಅವರು ಈ ಕಾರ್ಯಾಚರಣೆಯನ್ನು ದೊಡ್ಡ ಮಟ್ಟದಲ್ಲಿ ನಡೆಸುತ್ತಿದ್ದಾರೆ.**

ಅವರು ಭಾರತ ತೊರೆಯುವ ಸಂದರ್ಭದಲ್ಲಿ ಇಲ್ಲಿ ಹಸಿವಿನಿಂದ ನರಳುತ್ತಿದ್ದರು ಎಂದು ಹೇಳುವುದಕ್ಕೆ ಆಧಾರಗಳಿಲ್ಲ. ಅವರಲ್ಲಿ ಕೆಲವರು ಭಾರತದಿಂದ ಅಮೆರಿಕಕ್ಕೆ ತೆರಳುವುದಕ್ಕೆ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿರುವ ಸಾಧ್ಯತೆಯೂ ಇದೆ. ಅಕ್ರಮ ವಲಸಿಗರನ್ನು ಹೊತ್ತ ಇನ್ನೂ ಕೆಲವು ವಿಮಾನಗಳು ಭಾರತಕ್ಕೆ ಬರುವ ನಿರೀಕ್ಷೆ ಇದೆ. ಭಾರತೀಯ ಪ್ರಜೆಗಳ ಕೈಗೆ ಕೋಳ ತೊಡಿಸಿ, ಅವರನ್ನು ಸೇನಾ ವಿಮಾನದಲ್ಲಿ ಸಾಮೂಹಿಕವಾಗಿ ಗಡೀಪಾರು ಮಾಡುತ್ತಿರುವುದರಲ್ಲಿ ರಾಷ್ಟ್ರಕ್ಕೆ ಅವಮಾನವಾಗುವ ಆಯಾಮವೂ ಇದೆ. ಅದು ಎಲ್ಲರಿಗೂ ಗೊತ್ತಾಗುವಂತೆ ಮಾಡುತ್ತಿದ್ದಾರೆ. ಏಕೆಂದರೆ ಅಕ್ರಮ ವಲಸಿಗರ ವಿರುದ್ಧದ ತಮ್ಮ ನಿಲುವನ್ನು ಸ್ಪಷ್ಟವಾಗಿ ತೋರಿಸುವ ಮೂಲಕ ಅವರು ರಾಜಕೀಯ ಸಂದೇಶವೊಂದನ್ನು ರವಾನಿಸಬೇಕಿದೆ. ವಲಸೆ ನೀತಿಗಳನ್ನು ಬಿಗಿಗೊಳಿಸುವುದು ಹಾಗೂ ಅಕ್ರಮ ವಲಸಿಗರನ್ನು ದೇಶದಿಂದ ಹೊರಹಾಕುವ ನೀತಿಯ ಭಾಗವಾಗಿ ಈಗಿನ ಗಡೀಪಾರು ಪ್ರಕ್ರಿಯೆಗಳು ನಡೆದಿವೆ ಎಂದು ನವದೆಹಲಿಯಲ್ಲಿ ಇರುವ ಅಮೆರಿಕದ ರಾಯಭಾರ ಕಚೇರಿಯು ಸ್ಪಷ್ಟಪಡಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕಕ್ಕೆ ಭೇಟಿ ನೀಡುವ ಮೊದಲು ಈ ಗಡೀಪಾರು ಪ್ರಕ್ರಿಯೆ ನಡೆದಿದೆ. ಮೋದಿ ಅವರ ಭೇಟಿಯ ಸಂದರ್ಭದಲ್ಲಿ ವಲಸೆ ಕುರಿತೂ ಚರ್ಚೆ ಆಗುವ ನಿರೀಕ್ಷೆ ಇದೆ. ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಈಚೆಗೆ ಅಮೆರಿಕಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿಯೂ ಈ ವಿಚಾರವು ಚರ್ಚೆಗೆ ಬಂದಿದೆ. ಅಕ್ರಮ ವಲಸಿಗರನ್ನು ಕಾನೂನಿಗೆ ಅನುಗುಣವಾಗಿ ವಾಪಸ್ ಕರೆಸಿಕೊಳ್ಳುವ ವಿಚಾರದಲ್ಲಿ ಭಾರತವು ಮುಕ್ತವಾಗಿದೆ ಎಂದು ಜೈಶಂಕರ್ ಅವರು ಅಮೆರಿಕದ ಅಧಿಕಾರಿಗಳಿಗೆ ಹೇಳಿದ್ದರು. ದಕ್ಷಿಣ ಅಮೆರಿಕದ ಕೆಲವು ದೇಶಗಳು ಅಕ್ರಮ ವಲಸಿಗರನ್ನು ವಾಪಸ್ ಕರೆಸಿಕೊಳ್ಳುವ ವಿಚಾರದಲ್ಲಿ ಆರಂಭದಲ್ಲಿ ತೋರಿದ ಸಂಘರ್ಷದ ಧೋರಣೆಯನ್ನು ಭಾರತ ತಳೆಯದೇ ಇರುವುದು ಒಳ್ಳೆಯ ನಡೆ, ಅಮೆರಿಕದಲ್ಲಿ ಇರುವ ಅಕ್ರಮ ವಲಸಿಗರಲ್ಲಿ ಭಾರತೀಯರ ಪಾಲು ಹೆಚ್ಚಿದೆ. ಭಾರತದಿಂದ ಅಕ್ರಮವಾಗಿ ಅಮೆರಿಕಕ್ಕೆ ಹೋಗಿರುವವರ ಸಂಖ್ಯೆಯು 7.50 ಲಕ್ಷಕ್ಕಿಂತ ಹೆಚ್ಚು ಎಂದು ಅಂದಾಜಿಸಲಾಗಿದೆ. ಭಾರತದ ಇಷ್ಟೊಂದು ಜನ ಬೇರೊಂದು ದೇಶದಲ್ಲಿ ಅಲ್ಲಿನ ಕಾನೂನಿನ ಕೈಗಳಿಂದ ತಪ್ಪಿಸಿಕೊಂಡು ವಾಸ ಮಾಡುತ್ತಿರುವುದು ಭಾರತಕ್ಕೆ ಒಳ್ಳೆಯ ಹೆಸರು ತರುವುದಿಲ್ಲ. ಅವರ ಪೂರ್ವಾಪರ ಪರಿಶೀಲಿಸಿ ಅವರನ್ನು ಮರಳಿ ಕರೆಸಿಕೊಳ್ಳುವ ಹೊಣೆಯು ಭಾರತದ ಮೇಲೆ ಇದೆ. ಅಕ್ರಮ ವಲಸಿಗರನ್ನು ಈಗ ವಾಪಸ್ ಕಳುಹಿಸಿರುವುದು ಅದೇ ಬಗೆಯಲ್ಲಿ ಬೇರೆ ದೇಶಗಳಿಗೆ ಅಕ್ರಮವಾಗಿ ವಲಸೆ ಹೋಗುವ ಆಲೋಚನೆ ಹೊಂದಿರುವವರಿಗೆ ಒಂದು ಎಚ್ಚರಿಕೆಯ ಗಂಟೆಯಾಗಬಹುದು. ಅಕ್ರಮ ವಲಸೆಯನ್ನು ಕೊನೆಗೊಳಿಸಬೇಕಿದೆ. ದೇಶದ ಹಲವು ರಾಜ್ಯಗಳಲ್ಲಿ ಆಸ್ತಿತ್ವದಲ್ಲಿ ಇರುವ ಅಕ್ರಮ ವಲಸೆ ಜಾಲವನ್ನು ಇನ್ನಿಲ್ಲದಂತೆ ಮಾಡುವ ಹೊಣೆ ಸರ್ಕಾರಗಳ ಮೇಲಿದೆ. ಬೇರೆ ದೇಶಗಳಿಗೆಗೆ ಅಕ್ರಮವಾಗಿ ಪ್ರವೇಶಿಸುವುದರಲ್ಲಿ ಇರುವ ಅಪಾಯಗಳ ಬಗ್ಗೆ ಜನರಿಗೆ ಮಾಹಿತಿ ಒದಗಿಸಬೇಕಿದೆ.

# ಉಪವಾಸ..!



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ



ಉಪವಾಸ ಎಂದರೆ ಯಾವುದಾದರೂ ಧಾರ್ಮಿಕ ಕಾರಣದಿಂದ ದೇವರ ಹೆಸರಿನಲ್ಲಿ ನಿತ್ಯದ ಊಟದ ಪದಾರ್ಥಗಳನ್ನು ಬಿಟ್ಟು ಬೇರೆ ವಿಶೇಷ ಪದಾರ್ಥಗಳನ್ನು ತಿನ್ನುವುದು. ಇದು ಎಲ್ಲರಿಗೂ ತಿಳಿದ ವಿಷಯವೇ. ಹ್ಞಾ...! ಆದರೆ, ಸ್ವಲ್ಪ ತಾಳಿ,...! ಇಲ್ಲೇ ಇರುವುದು ಮೂಲ ಸಮಸ್ಯೆ. ಇದು ಉಪವಾಸ ದ ಅರ್ಥ ಅಲ್ಲವೇ ಅಲ್ಲ. ಉಪವಾಸದ ಅರ್ಥ ಆಹಾರ ಸೇವಿಸದೇ ಇರುವುದು ಎಂದು ಕೆಲವರಿಗೆ ಗೊತ್ತು. ಆದರೆ, ಇದು ಕೂಡ ಉಪವಾಸ ಪದದ ಸರಿಯಾದ ಅರ್ಥವಲ್ಲ! ಉಪವಾಸ ಪದದ ಸರಿಯಾದ ಅರ್ಥವೆಂದರೆ ದೇವರ ಸಾನ್ನಿಧ್ಯದಲ್ಲಿ ವಾಸವಿರುವುದು. ಅಂದರೆ, ಉಪವಾಸ ಮಾಡುವುದು ಇದರ ಅರ್ಥ ಆ ಸಮಯದಲ್ಲಿ ಬೇರೆ ಯಾವ ಕೆಲಸಗಳನ್ನು – ಊಟ, ತಿಂಡಿ, ಮಾಡದೇ ದೇವರ ಸಾನಿಧ್ಯದಲ್ಲಿ ಕುಳಿತು ದೇವರ ನಾಮ ಸ್ಮರಣೆ, ಜಪ, ತಪ, ಪೂಜೆ, ಭಜನೆ, ಆರತಿ, ಕೀರ್ತನೆ, ಇತ್ಯಾದಿಗಳಲ್ಲಿ ಸಮಯ ಕಳೆಯುವುದು ಎಂದರ್ಥ.



ಈ ರೀತಿಯ ಉಪವಾಸವನ್ನು ಬಹುಶಃ ಯಾರೂ ಮಾಡುವುದಿಲ್ಲ. ಉಪವಾಸ ಎಂದರೆ ನಿತ್ಯದ ಊಟ ತಿಂಡಿಯ ಬದಲು ಬೇರೆ ಪದಾರ್ಥಗಳನ್ನು ತಿನ್ನುವುದು ಎಂದಷ್ಟೇ ಹೆಚ್ಚಿನ ಜನರಿಗೆ ತಿಳಿದಿರುವುದು. ಸಬ್ಬಕ್ಕಿ, ಊದಲು, ನೆಲಗಡಲೆ, ಆಲೂಗಡ್ಡೆ, ಇತ್ಯಾದಿಗಳಿಂದ ಮಾಡಿದ ಪದಾರ್ಥಗಳನ್ನು ಯಥೇಚ್ಛವಾಗಿ ತಿನ್ನುತ್ತಾರೆ. ಹೆಚ್ಚಿನ ಪದಾರ್ಥಗಳಲ್ಲಿ ಸಕ್ಕರೆ ಪ್ರಮಾಣ ಅಧಿಕವಾಗಿರುತ್ತದೆ. ಇದು ಉಪವಾಸದ ಮೂಲ ಉದ್ದೇಶದ ತದ್ವಿರುದ್ಧವಾಗಿದೆ. ದೇಶದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಈ ಉಪವಾಸವನ್ನು ಆಚರಿಸುತ್ತಾರೆ. ಆದರೆ, ಇದು ಉಪವಾಸ ಅಲ್ಲವೇ ಅಲ್ಲ. ಉಪವಾಸಕ್ಕೆ ಕೇವಲ ಧಾರ್ಮಿಕ ಅಥವಾ ಆಧ್ಯಾತ್ಮಿಕ ಆಯಾಮವಲ್ಲದೆ ಆರೋಗ್ಯ, ಸಾಮಾಜಿಕ, ರಾಜಕೀಯ, ಇತ್ಯಾದಿ ಆಯಾಮಗಳೂ ಕೂಡ ಇವೆ. ಅನೇಕ ಸಹಸ್ರಮಾನಗಳ ಹಿಂದೆ ನಮ್ಮ ಪೂರ್ವಜರು ಹಾಕಿಕೊಟ್ಟ ಉಪವಾಸದ ನಿಯಮ ಹಾಗೂ ಉದ್ದೇಶ ಕೇವಲ ಧಾರ್ಮಿಕವಾಗಿರದೆ ಅದರ ಹಿಂದೆ ನಿಜವಾದ ಉದ್ದೇಶ ಆರೋಗ್ಯಕ್ಕೆ ಸಂಬಂಧಿಸಿದ್ದಾಗಿತ್ತು. ಧಾರ್ಮಿಕ ಆಯಾಮವನ್ನು ಬದಿಗೆಟ್ಟರೆ ಉಪವಾಸದ ಇನ್ನೊಂದು ಅರ್ಥ ಅಥವಾ ಉದ್ದೇಶ – ಆಹಾರವನ್ನು ನಿರ್ದಿಷ್ಟ ಸಮಯ ಹಾಗೂ ಉದ್ದೇಶಕ್ಕಾಗಿ ತ್ಯಜಿಸುವುದು ಎಂದರ್ಥ. ಕಾರಣ ಯಾವುದೇ ಇರಲಿ, ವಾಸ್ತವವಾಗಿ ಉಪವಾಸದ ಸಮಯದಲ್ಲಿ, ನೀರನ್ನು ಹೊರತುಪಡಿಸಿ ಬೇರೆ ಇನ್ನೇನನ್ನು ಸೇವಿಸಬಾರದು. ಈ ರೀತಿಯ ಉಪವಾಸವನ್ನು ಕಾಲಕಾಲಕ್ಕೆ ಆಚರಿಸುವುದರಿಂದ ಅನೇಕ ಆರೋಗ್ಯ ಲಾಭಗಳು ಇವೆ! ಹೌದು, ಆದ್ದರಿಂದಲೇ ಲಂಘನಂ ಪರಮೌಷಧಂ ಎಂದು ಕೂಡ ಹೇಳಲಾಗಿದೆ. ಇಂದು ಈ ಆರೋಗ್ಯ ಲಾಭಗಳ ಬಗ್ಗೆ ಸ್ವಲ್ಪ ತಿಳಿದುಕೊಳ್ಳೋಣ.



ಜಪಾನಿನ ಜೀವಕೋಶ ಶಾಸ್ತ್ರಜ್ಞ, ಯೋಶಿನೋರಿ ಓಸುಮಿ ತಮ್ಮ ಸಂಶೋಧನೆಗಳಿಂದ ಕ್ಯಾನ್ಸರನ್ನು ತಡೆಗಟ್ಟುವಲ್ಲಿ ಹಾಗೂ ನಿಯಂತ್ರಿಸುವಲ್ಲಿ ಉಪವಾಸದ ಮಹತ್ವವನ್ನು ಸಾರಿದರು. ತಿಂಗಳಿಗೆ ಎರಡು ಬಾರಿ 12 ರಿಂದ 16 ಗಂಟೆಗಳ ನಿರಾಹರ ಉಪವಾಸ ಮಾಡುವುದರಿಂದ ಶರೀರದಲ್ಲಿ ನಿರ್ಮಾಣವಾಗುವ ಕ್ಯಾನ್ಸರ್ ಕೋಶಗಳು ನಾಶವಾಗುತ್ತವೆ ಎಂದು ತೋರಿಸಿಕೊಟ್ಟರು. ಈ ಸಂಶೋಧನೆಗಾಗಿ ಅವರಿಗೆ 2016ರಲ್ಲಿ ನೊಬೆಲ್ ಪ್ರಶಸ್ತಿ ದೊರೆಯಿತು..

ಈ ಸಂಗತಿಯನ್ನು ನಮ್ಮ ಪೂರ್ವಜರು ಸಾವಿರಾರು ವರ್ಷಗಳ ಹಿಂದೆಯೇ ಅರಿತುಕೊಂಡಿದ್ದರು. ಇದೇ ಕಾರಣದಿಂದ ಏಕಾದಶಿಯ ವ್ರತವನ್ನು ಪ್ರತಿ 15 ದಿನಗಳಿಗೊಮ್ಮೆ ಮಾಡುವ ಪರಿಪಾಠವನ್ನು ಹಾಕಿಕೊಟ್ಟರು. ಅಂದಿನ ಕಾಲದಲ್ಲಿ ಜನರಿಗೆ ವೈಜ್ಞಾನಿಕ ವಿವರಣೆಗಳು ಅರ್ಥವಾಗುತ್ತಿರಲಿಲ್ಲ ಹಾಗೂ ಜನ ಅದಕ್ಕೆ ಮಹತ್ವ ಕೊಡುತ್ತಿರಲಿಲ್ಲ. ಆದರೆ, ದೇವರು, ಧರ್ಮದ ಕಾರಣಗಳಿಗಾಗಿ ಜನ ಏನು ಬೇಕಾದರೂ ಮಾಡುತ್ತಿದ್ದರು. ಆದ್ದರಿಂದ, ಅಂದಿನ ಬುದ್ಧಿಜೀವಿಗಳು ದೇವರ ಹೆಸರಿನಲ್ಲಿ ಏಕಾದಶಿಯ ಉಪವಾಸ ವ್ರತವನ್ನು ಆಚರಿಸುವ ರೂಢಿಯನ್ನು ಹಾಕಿಕೊಟ್ಟರು. ಪಾಶ್ಚಾತ್ಯರ ಹಾಗೂ ಆಧುನಿಕ ಜೀವನಶೈಲಿಯ ಪ್ರಭಾವಕ್ಕೆ ಮೋಹಿತರಾದ ನಾವು ಭಾರತೀಯರು ಏಕಾದಶಿ ವ್ರತಕ್ಕೆ ಯಾವ ಅರ್ಥವೂ ಇಲ್ಲ ಎಂದುಕೊಂಡು ಏಕಾದಶಿ ಉಪವಾಸವನ್ನು ಬಿಟ್ಟುಬಿಟ್ಟೆವು. ಅದನ್ನು ಆಚರಿಸುವವರು ಕೂಡ ತಪ್ಪಾಗಿ ಆಚರಿಸುತ್ತಾರೆ. ಏಕೆಂದರೆ, ಏಕಾದಶಿಯಂದು ವಿಧವಿಧ ಪದಾರ್ಥಗಳನ್ನು ಮಾಡಿಕೊಂಡು ತಿನ್ನುತ್ತಿರುತ್ತಾರೆ. ಇಂಥ ಏಕಾದಶಿ ಮಾಡುವುದರಿಂದ ಯಾವ ಪುಣ್ಯವೂ ದೊರೆಯುವುದಿಲ್ಲ ಹಾಗೂ ಆರೋಗ್ಯಕ್ಕೂ ಲಾಭವಿಲ್ಲ.

**ಉಪವಾಸವನ್ನು ಹೇಗೆ ಮಾಡಬೇಕು?:** 1. ಉಪವಾಸ ಮಾಡಲು ಇಚ್ಛಿಸುವವರು ತಮ್ಮ ಸಾಮರ್ಥ್ಯಕ್ಕನುಗುಣವಾಗಿ 12, 16 ಅಥವಾ 24 ಗಂಟೆಗಳ ಉಪವಾಸವನ್ನು ಮಾಡಬಹುದು. ಒಂದೇ ಬಾರಿ ಅದಕ್ಕಿಂತಲೂ ಹೆಚ್ಚು ಉಪವಾಸದ ಅಗತ್ಯವಿಲ್ಲ. ಮೊದಲು 12 ಗಂಟೆಗಳ ಉಪವಾಸದಿಂದ ಆರಂಭಿಸಿ ಕ್ರಮೇಣ ಯಾವುದೇಯನ್ನು 24 ಗಂಟೆಗಳವರೆಗೆ ವೃದ್ಧಿಸಲು ರೂಢಿ ಮಾಡಿಕೊಳ್ಳಬೇಕು.

2. ಸಂಪೂರ್ಣ ನಿರಾಹರ ಉಪವಾಸ ಶ್ರೇಷ್ಠವಾದದ್ದು. ಅಂದರೆ, ಒಂದು ಕಾಳು ಆಹಾರವನ್ನು ಕೂಡ ಸೇವಿಸಬಾರದು. ಆದರೆ, ಎರಡೆರಡು ಗಂಟೆಗಳಿಗೊಮ್ಮೆ ನೀರನ್ನು ಸೇವಿಸಬೇಕು. 3. ಸಂಪೂರ್ಣ ನಿರಾಹಾರ ಉಪವಾಸ ಸಾಧ್ಯವಿಲ್ಲದಿದ್ದರೆ ಕೇವಲ ಹಣ್ಣು ಅಥವಾ ಹಸಿ ತರಕಾರಿಗಳನ್ನು ಸಾಧ್ಯವಿದ್ದಷ್ಟು ಕಡಿಮೆ ಪ್ರಮಾಣದಲ್ಲಿ ಸೇವಿಸಬೇಕು. ತಿನ್ನಲು ಸಾಧ್ಯವಿಲ್ಲದಿದ್ದರೆ ಮನೆಯಲ್ಲಿ ತಯಾರಿಸಿದ ಹಣ್ಣು ಅಥವಾ ತರಕಾರಿ ರಸವನ್ನು ಸೇವಿಸಬಹುದು, ಆದರೆ, ಸಕ್ಕರೆ, ಉಪ್ಪು ಇತ್ಯಾದಿಗಳನ್ನು ಬೆರೆಸಬಾರದು.

4. ಉಪವಾಸ ಸಮಯದಲ್ಲಿ ಸಾಮಾನ್ಯ ಚಟುವಟಿಕೆಗಳನ್ನು ಮುಂದುವರೆಸಬೇಕು ಆದರೆ ಹೆಚ್ಚು ಶ್ರಮ ಅಥವಾ ಕಷ್ಟ ಪಡಬಾರದು.



5. ಈ ಸಮಯದಲ್ಲಿ ದೇವರ ಧ್ಯಾನ, ಭಜನೆ ಅಥವಾ ಇತರ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಕೊಳ್ಳುವುದು ಹೆಚ್ಚು ಪ್ರಯೋಜನಕಾರಿಯಾಗಿದೆ.

6. ಉಪವಾಸವನ್ನು ತಿಂಗಳಲ್ಲಿ ಕನಿಷ್ಠ ಎರಡು ಬಾರಿ ಅಂದರೆ ಎರಡು ವಾರಕ್ಕೊಮ್ಮೆ ಮಾಡಬೇಕು. ಸಾಧ್ಯವಿರುವವರು 10 ದಿನಗಳಿಗೊಮ್ಮೆ ಅಥವಾ ವಾರಕ್ಕೊಮ್ಮೆ ಕೂಡ ಮಾಡಬಹುದು. ಇದಕ್ಕಿಂತಲೂ ಹೆಚ್ಚು ಉಪವಾಸ ಮಾಡುವುದು ಒಳ್ಳೆಯದಲ್ಲ/ಅಗತ್ಯವಿಲ್ಲ.

**ಯಾರು ಉಪವಾಸ ಮಾಡಬಾರದು?**

ವಯಸ್ಕರು, ಅಶಕ್ತರು, ಗರ್ಭಿಣಿಯರು, ಹಾಲುಣಿಸುವ ತಾಯಂದಿರು. ಮಧುಮೇಹ, ಹೃದಯ ರೋಗ, ಕಡಿಮೆ ರಕ್ತದೊತ್ತಡ ಅಥವಾ ಗಂಭೀರ ಕಾಯಿಲೆ ಇರುವವರು ತಜ್ಞ ವೈದ್ಯರ ಸಲಹೆ ಮೇರೆಗೆ ಉಪವಾಸ ಮಾಡಬೇಕು.

### ಉಪವಾಸ ಮಾಡುವುದರಿಂದ,....

- ಶರೀರದ ಎಲ್ಲಾ ಅಂಗಾಂಗಗಳಿಗೂ ವಿಶ್ರಾಂತಿ ದೊರೆಯುತ್ತದೆ. ನಾವು ಪ್ರತಿನಿತ್ಯ ಆಹಾರ ಸೇವಿಸುತ್ತಾ ಇದ್ದರೆ ಅಂಗಾಂಗಗಳಿಗೆ ಸತತವಾಗಿ ಕೆಲಸ ಮಾಡಬೇಕಾಗುತ್ತದೆ. ಅದರಿಂದ ದೇಹದ ಅಂಗಾಂಗಗಳು ಕೂಡ ಆಯಾಸ ಹೊಂದುತ್ತವೆ. ಅವುಗಳಿಗೆ ಚೇತರಿಸಿಕೊಳ್ಳಲು ಅವಕಾಶವೇ ಸಿಗುವುದಿಲ್ಲ.
- ದೇಹ ಮತ್ತು ಮನಸ್ಸನ್ನು ನಿಗ್ರಹಿಸಲು ನೆರವಾಗುತ್ತದೆ. ಆತ್ಮವಿಶ್ವಾಸವು ಹೆಚ್ಚುತ್ತದೆ. ಮನಸ್ಸಿಗೆ ನೆಮ್ಮದಿ ದೊರೆಯುತ್ತದೆ.
- ಉಪವಾಸದ ನಂತರ ದೇಹ ಮತ್ತು ಮನಸ್ಸಿಗೆ ಹಗುರತನ ಮತ್ತು ತಾಜಾತನದ ಅನುಭವವಾಗುತ್ತದೆ.
- ದೇಹದಲ್ಲಿ ಶೇಖರಣೆಯಾದ ಕಲ್ಮಶ ಹಾಗೂ ವಿಷ ಪದಾರ್ಥಗಳನ್ನು ದೇಹದಿಂದ ಹೊರಹಾಕಲು ವಿಸರ್ಜಕ ಅಂಗಾಂಗಳಿಗೆ ಅವಕಾಶ ದೊರೆಯುತ್ತದೆ.
- ದೇಹದ ತೂಕವನ್ನು ನಿಯಂತ್ರಣದಲ್ಲಿ ಇಡಲು ಸಹಾಯವಾಗುತ್ತದೆ.
- ದೈನಂದಿನ ಚಟುವಟಿಕೆಗಳು, ಮಾನಸಿಕ ಒತ್ತಡ, ಮಾಲಿನ್ಯ, ಸೂಕ್ತವಲ್ಲದ ಪದಾರ್ಥಗಳ ಸೇವನೆ, ಇತ್ಯಾದಿಗಳಿಂದ ದೇಹಕ್ಕೆ ಉಂಟಾದ ಹಾನಿಯನ್ನು ಸರಿಪಡಿಸಲು ಪ್ರಯೋಜನಕಾರಿ.
- ರಕ್ತದಲ್ಲಿ ಸಕ್ಕರೆಯ ಮಟ್ಟ ಕಡಿಮೆಯಾಗಿ ಅನೇಕ ತರಹದ ಸೋಂಕುಗಳು ಹಾಗೂ ಜ್ವರ ನಿಯಂತ್ರಣವಾಗುತ್ತದೆ.
- ಮಧುಮೇಹ, ಥೈರಾಯಿಡ್, ಕೊಲೆಸ್ಟ್ರಾಲ್, ಅಧಿಕ ರಕ್ತದೊತ್ತಡ, ಹೃದಯ ರೋಗಗಳು, ಇತ್ಯಾದಿ ಸಮಸ್ಯೆಗಳನ್ನು ತಡೆಗಟ್ಟಲು ಹಾಗೂ ನಿಯಂತ್ರಿಸಲು ಸಹಾಯಕವಾಗುತ್ತದೆ.
- ಯಕೃತ್ತು ಮೂತ್ರಪಿಂಡ ಚರ್ಮರೋಗಗಳು ಇತ್ಯಾದಿಯೇ ಅನೇಕ ಗಂಭೀರ ಕಾಯಿಲೆಗಳಲ್ಲಿ ಉಪಯುಕ್ತ.
- ನಿಯಮಿತ ಉಪವಾಸದಿಂದ ಆಯುಷ್ಯ ವೃದ್ಧಿಯಾಗುತ್ತದೆ.
- ಕ್ಯಾನ್ಸರನ್ನು ತಡೆಗಟ್ಟಲು ಹಾಗೂ ಹಿಮ್ಮೆಟ್ಟಿಸಲು ಕೂಡ ಪ್ರಯೋಜನಕಾರಿ.

# ದಾಸವಾಣಿ ಕರ್ನಾಟಕದಿಂದ ಪುರಂದರ ನಮನ

• ಉದಯವಾಹಿನಿ,ಬೆಂಗಳೂರು



ಉದಯವಾಹಿನಿ ಚಿತ್ರ

**ಸಾಧಕೋತ್ತಮರಿಗೆ ಹಲವು ಪ್ರಶಸ್ತಿ ಪ್ರದಾನ**

ದಾಸವಾಣಿ ಕರ್ನಾಟಕ ವಾರ್ಷಿಕೋತ್ಸವದ ಅಂಗವಾಗಿ ಪುರಂದರ ನಮನ ಕಾರ್ಯಕ್ರಮವನ್ನು ಬೆಂಗಳೂರು ಬಸವನಗುಡಿ ಗೋವರ್ಧನ ಕ್ಷೇತ್ರ ಪುತ್ತಿಗೆ ಮಠದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮಕ್ಕೆ ಖ್ಯಾತ ಹರಿದಾಸ ಸಾಹಿತ್ಯ ವಿದ್ವಾಂಸ ಡಾ ಹ.ರಾ.ನಾಗರಾಜ ಆಚಾರ್ಯ, ಗಾಯಕ ಹುಸೇನ್ ಸಾಬ್ ಕನಕಗಿರಿ, ನಂದಿ ವಾಹಿನಿ ಸಂಸ್ಥಾಪಕ ಜೇರಿಗೆ ಲೋಕೇಶ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. 2025 ನೇ ಸಾಲಿನ ವಾರ್ಷಿಕ ದಾಸ ಪುರಂದರ ಪ್ರಶಸ್ತಿಯನ್ನು ದಾಸ ಸಾಹಿತ್ಯ ಕ್ಷೇತ್ರದಲ್ಲಿ ಅನನ್ಯ ಸಾಧನೆ ಮಾಡಿರುವ ಡಾ. ಶೀಲಾ ದಾಸ್, ಅಂಕಣಕಾರ ಡಾ.ಗುರುರಾಜ ಪೋಶೆಟ್ಟಿಹಳ್ಳಿ, ಸಂಗೀತ ಮತ್ತು ನೃತ್ಯ ಕ್ಷೇತ್ರದಲ್ಲಿ ವಿದುಷಿ ಅಪರ್ಣ ಆನಂದ್, ಅಂತಯೇ ಮಂಗಳಾಂಗ ಹರಿವಿಠ್ಠಲ ಪ್ರಶಸ್ತಿಯನ್ನು ದಾಸ ಸಾಹಿತ್ಯ ಕ್ಷೇತ್ರದಲ್ಲಿ ಡಾ ವಾರುಣಿ ಜಯತೀರ್ಥ, ಡಾ ಶಾಂತಾ ರಘೋತ್ತಮಾಚಾರ್,ಸಂಗೀತ ಕ್ಷೇತ್ರದಲ್ಲಿ ವಿದುಷಿ ಸುಮಲತ ಮಂಜುನಾಥ, ನಿರಂತರ ಹರಿದಾಸ ಗಾಯನ ಸೇವಾ ಪುರಸ್ಕಾರ, ಜಿ . ಎಸ್. ಕೃಷ್ಣಮೂರ್ತಿ, ಮೋಹನ್ ಕುಮಾರ್, ರವರಗಳಿಗೆ ಮತ್ತು ಮಹಾ ಪೋಷಕ ರತ್ನ ಪ್ರಶಸ್ತಿಯನ್ನು ಮಹನೀಯರು ಗಳಿಗೆ ನೀಡಿ ಗೌರವಿಸಲಾಯಿತು ಎಂದು ಕಾರ್ಯಕ್ರಮದ ಆಯೋಜಕರಾದ ದಾಸವಾಣಿ ಕರ್ನಾಟಕ ಸಂಸ್ಥಾಪಕ ಜಯರಾಜ್ ಕುಲಕರ್ಣಿ ಮತ್ತು ವಿದುಷಿ ಮಾನಸ ಕುಲಕರ್ಣಿ ತಿಳಿಸಿರುತ್ತಾರೆ. ಶ್ರೀ ವಿ.ರಾಮಮೂರ್ತಿ, ಶ್ರೀಮತಿ ಚಂದ್ರಿಕಾ ಶ್ರೀಹರಿ, ಶ್ರೀಮತಿ ಅನಿತಾ ಗದಗಕರ್, ಯೋಗಾಚಾರ್ಯ ಶ್ರೀ. ಪಿ ಸಿ. ಮುಕುಂದ ರಾವ್ ಮೊದಲಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪ್ರಾಸ್ತಾವಿಕ ನುಡಿಗಳನಾಡಿದ ದಾಸವಾಣಿ ಕರ್ನಾಟಕದ ಸಂಸ್ಥಾಪಕ ಜಯರಾಜ್ ಕುಲಕರ್ಣಿ ದಾಸವಾಣಿ ಕರ್ನಾಟಕವು ಸುಮಾರು ಏಳು ವರ್ಷದಿಂದ ಫೇಸ್ಬುಕ್ ಸಮವಾದ ಮುಖಾಂತರ ಹರಿದಾಸ ಸಾಹಿತ್ಯವನ್ನು ಮನೆ ಮನೆಗೆ ತಲುಪಿಸುವ ಕಾರ್ಯವನ್ನು ಮಾಡುತ್ತಿದ್ದಾರೆ ದಾಸವಾಣಿ ಕರ್ನಾಟಕ ಸಮೂಹದಲ್ಲಿ ಸುಮಾರು 40,000 ಜನ ಗಾಯಕರು ಗಾಯಕ ಗಾಯಕಿಯರಿದ್ದು ಆಕಾಶವಾಣಿ ಟಿಟಿಡಿ ಗ್ರೇಡ್ ಕಲಾವಿದರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ ಪ್ರತಿಯೊಬ್ಬ ಹರಿದಾಸರ ಕೃತಿಗಳನ್ನು ಪರಿಚಯಿಸಿ ಕೃತಿಗಳನ್ನು ಕೊಟ್ಟು ಅವುಗಳಿಗೆ ರಾಗವನ್ನು ಹಾಕಿಸಿ ಕಲಾವಿದರಿಗೆ ವೇದಿಕೆ ಮೇಲೆ ಹಾಡಲು ಅವಕಾಶ ಮಾಡಿಕೊಡುತ್ತಾರೆ ಹಾಗೂ ಪ್ರತಿ ವರ್ಷ ದಾಸವಾಣಿ ಕರ್ನಾಟಕವು ವಾರ್ಷಿಕೋತ್ಸವ ಮತ್ತು ಪುರಂದರ ನಮನ ಕಾರ್ಯಕ್ರಮವನ್ನು ಹಾಗೂ ಶ್ರೀ ವಿಜಯದಾಸರ ಆರಾಧನೆಯನ್ನು ಮಾಡಿ ವಿಶ್ವದಾದ್ಯಂತ ಮಕ್ಕಳಿಂದ ಹಿಡಿದು ಹಿರಿಯರವರೆಗೆ ಹರಿದಾಸ ಕೃತಿಗಳ ಗಾಯನ ಸ್ಪರ್ಧೆಯನ್ನು ಏರ್ಪಡಿಸಿ ಪ್ರತಿಯೊಬ್ಬರಿಗೂ ಪ್ರಶಸ್ತಿ ನೀಡುವ ಮೂಲಕ ಪ್ರೋತ್ಸಾಹ ನೀಡಿ, ವಿಶೇಷವಾಗಿ ಮಕ್ಕಳಿಗೆ ಪ್ರೋತ್ಸಾಹ, ದಾಸ ಸಾಹಿತ್ಯದಲ್ಲಿ ಪಿಎಚ್ಡಿಯನ್ನು ಮಾಡಿ ಸಾಧನೆ ಮಾಡಿದವರಿಗೆ ಮತ್ತು ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ದಾಸ ಪುರಂದರ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು.ದಾಸವಾಣಿ ಕರ್ನಾಟಕದಲ್ಲಿ ಭಾಗವಹಿಸಿ ದಾಸರ ಕೃತಿಗಳನ್ನು ಹಾಡುವ ಅನೇಕ ಗಾಯಕ ಗಾಯಕಿಯರಿಗೆ ನಂದಿ ವಾಹಿನಿ ಸ್ಟುಡಿಯೋದಲ್ಲಿ ಚಿತ್ರೀಕರಣವನ್ನು ಮಾಡಿ ನಂದಿ ವಾಹಿನಿ ಎಂಟರ್ಟೈನ್ಮೆಂಟ್ ಪ್ರಸಾರ ಮಾಡುತ್ತಾ ಬಂದಿದ್ದಾರೆ ಎಂದು ತಿಳಿಸಿದರು.

# ಊಂಜಲ್ ಸಂಗೀತೋತ್ಸವ



• ಉದಯವಾಹಿನಿ,ಬೆಂಗಳೂರು

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ಫೆಬ್ರವರಿ 8, ಶನಿವಾರ ಸಂಜೆ 6–00ಕ್ಕೆ ಊಂಜಲ್ ಸಂಗೀತೋತ್ಸವ ಗಾಯನ : ವಿದ್ವಾನ್ ವಿ. ಚಿಂತಲಪಲ್ಲಿ ಶ್ರೀನಿವಾಸ್, ಪಿಟೀಲು : ವಿದ್ವಾನ್ ಎಂ.ಎಸ್. ಗೋವಿಂದಸ್ವಾಮಿ, ಮೃದಂಗ : ವಿದ್ವಾನ್ ಶ್ರೀನಿವಾಸ್ ಅನಂತರಾಮಯ್ಯ. ಸ್ಥಳ : ಶ್ರೀ ವೆಂಕಟೇಶ್ವರಸ್ವಾಮಿ ದೇವಸ್ಥಾನ (ಟಿಟಿಡಿ), 16ನೇ ಅಡ್ಡರಸ್ತೆ, ವಯ್ಯಾಲಿಕಾವಲ್, ಬೆಂಗಳೂರು.

# ರಾಮಾಯಣ



**ಕೈ ಕೇಯಾ ದೇವಿಗೆ ಮಂಥರೆಯ ದುಬೋಧನೆ**

• ಹಿಂದಿನ ಸಂಚಿಕೆಯಿಂದ 78 ನೆಯ ಅಧ್ಯಾಯ

ಲಕ್ಷ್ಮಣನು ರಾಮನಿಗೆ ಅಂತರಂಗಶುದ್ಧನಾಗಿ ಅನುಕೂಲನಾಗಿದ್ದಾನೆ. ಆತನು ಶ್ರೀರಾಮನಿಗೆ ಅನುಕೂಲನಾಗಿರುವ ಹಾಗೆಯೇ ಶತ್ರುಘ್ನನು ಭರತನಿಗೆ ಅನುಕೂಲನಾಗಿದ್ದಾನೆ. ಜನನ ಕ್ರಮದಿಂದ ನೋಡಿದರೆ ಶ್ರೀರಾಮನಿಗಾದ ಮೇಲೆ ಭರತನಿಗೆ ರಾಜ್ಯಾಭಿಷೇಕವಾಗಬೇಕು. ಆದ್ದರಿಂದ ಉತ್ತರಾಧಿಕಾರಿಯಾದ ಭರತನಿಗೆ ರಾಮನಿಂದ ಭಯವುಂಟು. ಕ್ಷತ್ರಿಯಧರ್ಮದಲ್ಲಿ ಚತುರನಾಗಿ ಕಾಲೋಚಿತವಾದ ಕಾವ್ಯಗಳನ್ನು ಮಾಡುವುದರಲ್ಲಿ ರಾಮನು ಸಮರ್ಥನಾದ್ದರಿಂದ ನಾನು ಭರತನ ಗತಿಯನ್ನು ಚಿಂತಿಸಿ ನಡುಗುತ್ತಲಿರುವೆನು, ನಾಳೆ ಪುಷ್ಯನಕ್ಷತ್ರದಲ್ಲಿ ಶ್ರೀರಾಮನಿಗೆ ಪಟ್ಟಾಭಿಷೇಕವಾದರೆ ಆತನ ತಾಯಿಯಾದ ಕೌಳಿಯು ಎಷ್ಟು ಪುಣ್ಯ ಮಾಡಿದವಳೊ ನಿಷ್ಕಂಟಕವಾಗಿ ಮಹತ್ತಾದ ಅಭಿವೃದ್ಧಿಯನ್ನು ಪಡೆದು ಅತಿಹರ್ಷದಿಂದಿರುವ ಆ ದೇವಿಯನ್ನನುಸರಿಸಿಕೊಂಡು ನೀನು ದಾಸಿಯ ಹಾಗಿರಬೇಕಾಗುತ್ತದೆ. ನಿನ್ನ ಸೊಸೆಯು ಕೌಸಲಾದೇವಿಗೆ ದಾಸಿಯಾಗಿ ಭರತನ ಮನೆಯಲ್ಲಿ ದಮರಿಸಬೇಕಾಗುವುದು. ನಿನ್ನ ಮಗನಾದ ಭರತನು ಶ್ರೀರಾಮನ ಊಳಿಗದವನಾಗಿರಬೇಕಾಗುತ್ತದೆ. ಹೀಗೆ ನನಗೆ ಬಂದ ದುಃಖವನ್ನರಿಯದೆ ನೀನು ಹೇಗೆ ಸಂತೋಷಪಡುತ್ತಿದ್ದೀಯೆ ಎಂದು ನುಡಿದಳು ಕೈ ಕೇಯಾದೇವಿಯು ಮಂಥರೆಯ ಮಾತಿಗೊಳಗಾಗದೆ ಶ್ರೀರಾಮನ ಸದ್ಗುಣಗಳನ್ನು ಕೊಂಡಾಡುತ್ತ ಅವಳನ್ನು ನೋಡಿ ಮಂತಕರಾದ ವಸಿಷ್ಠರೇ ಮೊದಲಾದ ಗುರುಗಳಿಂದ ಹಿತೋಪದೇಶವನ್ನು ಹೊಂದಿದವನು, ಸಮಸ್ತ ಧರ್ಮರಹಸ್ಯಗಳನ್ನೂ ಬಲ್ಲವನು. ಮಹಾ ಸತ್ಯವಂತ, ಮಾಡಿದ ಉಪಕಾರವನ್ನು ಮರೆಯದವನ್ನು, ಸಮಸ್ತ ಲೋಕಕ್ಕೂ ಹಿತನಾದವನ್ನು ದಶರಥರಾಜುನ ಜೇಷ್ಠಪುತ್ರನು, ಯುವರಾಜಪಟ್ಟಕ್ಕೆ ಯೋಗ್ಯ. ಆತನು ಪಟ್ಟಾಭಿಷಿಕ್ತನಾಗಿ ದೀರ್ಘಾಯುಷ್ಯಂತನಾಗಿ ಸುಖದಿಂದ ತನ್ನ ತಮ್ಮಂದಿರಾದ ಭರತಾದಿಗಳನ್ನು ಮಕ್ಕಳ ಹಾಗೆ ರಕ್ಷಿಸುವನು. ಮಂಥರೆ ನೀನು ಯಾವ ಕಾರಣದಿಂದ ಶ್ರೀರಾಮನ ಪಟ್ಟಾಭಿಷೇಕವಾರ್ತೆಯನ್ನು ಕೇಳಿ ದುಃಖಪಡುತ್ತಿದ್ದೀಯೆ ನನ್ನ ಮಗನಾದ ಭರತನು ನೂರು ವರ್ಷದ ಮೇಲಾದರೂ ತನ್ನ ತಂದೆಯ ರಾಜ್ಯಕ್ಕೆ ಒಡೆಯನಾಗುವನು. ಸಂಶಯವಿಲ್ಲ. ಇದರಿಂದ ನನಗೂ ಶ್ರೇಯಸ್ಸಾಗುವುದು. ಹೀಗಿರುವಲ್ಲಿ ನೀನು ಯಾವ ಕಾರಣದಿಂದ ವೇದನೆ ಪಡುತ್ತಿದ್ದೀಯೆ ನನಗೆ ನನ್ನ ಮಗನಾದ ಭರತನ ಮೇಲೆ ಎಷ್ಟು ವಾತ್ಸಲ್ಯವುಂಟೋ ಅದಕ್ಕಿಂತಲೂ ಇಮ್ಮಡಿಯಾದ ವಾತ್ಸಲ್ಯವು ಶ್ರೀರಾಮನಲ್ಲುಂಟು. ಆತನು ತನ್ನ ತಾಯಿಯಾದ ಕೌಸಲ್ಯಾದೇವಿಗಿಂತಲೂ ಅಧಿಕವಾಗಿ ನನಗೆ ಸೇವಾಸತ್ಕಾರಗಳನ್ನು ಮಾಡುತ್ತಿದ್ದಾನೆ. ಆದ್ದರಿಂದ ಆತನಿಗೆ ಪಟ್ಟಾಭಿಷೇಕವಾಗುವುದು ನನ್ನ ಮಗನಾದ ಭರತನಿಗೆ ಪಟ್ಟಾಭಿಷೇಕವಾದ ಹಾಗೆಯೇ, ಶ್ರೀರಾಮನು ತನ್ನ ತಮ್ಮಂದಿರಾದ ಭರತಾದಿಗಳನ್ನು ತನಗೆ ಸಮನಾಗಿಯೇ ನೋಡಿಕೊಳ್ಳುವನು ಎಂದು ನುಡಿದಳು. ಆ ಮಾತನ್ನು ಕೇಳಿ ಮಂಥರೆಯು ಅತ್ಯಂತ ವ್ಯಾಕುಲಿತಚಿತ್ತೆಯಾಗಿ ತನ್ನ ಅಂತರಂಗದಲ್ಲಿದ್ದ ಕೋಪಾಗ್ನಿ ಜ್ವಾಲೆಯಿಂದ ಬಿಸುಸುಯ್ದು ಕೈಕೇಯಾದೇವಿಯನ್ನು ನೋಡಿ ಎಲೇ ಕೈಕೇಯಾ, ನೀನು ಅತ್ಯಂತ ಮೂರ್ಖತನದಿಂದ ಮುಂದೆ ಬರುವ ಅಪಾಯವನ್ನು ಯೋಚಿಸದೆ ಮುಂದೆ ಆಗಲುಳ್ಳ ಅನೇಕವಾದ ಉಪದ್ರವಗಳಿಂದ ದುಃಖವೆಂಬ ಸಮುದ್ರದಲ್ಲಿ ಮುಳುಗುತ್ತೀಯೆ.

ಮುಂದುವರಿಯುವುದು...

# ಭಾರತರತ್ನ ಡಾ: ಜಾಕೀರ್ ಹುಸೇನ್ 128ನೇ ವರ್ಷದ ಜನ್ಮಜಯಂತಿ



**ಕಲಾ ಸಾಹಿತ್ಯ**


ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

• ಉದಯವಾಹಿನಿ, ವಿಶೇಷ

ಡಾ: ಜಾಕೀರ್ ಹುಸೇನ್ ರವರು 1897 ಫೆಬ್ರವರಿ 8 ರಂದು ಹೈದರಾಬಾದ್ ನಲ್ಲಿ ಜನಿಸಿದರು. ಇವರು ಒಂಬತ್ತು ವಯಸ್ಸು ಇದ್ದಾಗ ವಕೀಲರಾಗಿದ್ದ ತಂದೆಯವರು ತೀರಿಹೋಗಿ ಅವರ ನಂತರ ಮನೆಯಲ್ಲಿ ವಿದ್ಯಾಭ್ಯಾಸ ನಡೆಸಿ 1913 ರಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆ ಯಾದರು. ಬಳಿಕ ಮುಸ್ಲಿಂ ವಿಶ್ವವಿದ್ಯಾನಿಲಯದಿಂದ ಬಿ ಎ ಪದವಿ ಪಡೆದರು. ಬಾಲ್ಯದಿಂದಲೂ ಜ್ಞಾನದಾಹಿಗಳಾಗಿದ್ದು ಸದಾ ಗ್ರಂಥ ಅಧ್ಯಯನದಲ್ಲಿ ತೊಡಗಿರುತ್ತಿದ್ದರು.ಇವರಿಗೆ ವಾಗ್ಮಿತೆ ಸಹಜವಾಗಿ ಸಿದ್ಧಿಸಿತ್ತು. ಕಷ್ಟದಲ್ಲಿರುವ ಸಹ ವಿದ್ಯಾರ್ಥಿಗಳಿಗೆ ಸಹಾಯಹಸ್ತ ನೀಡುವುದು ಇವರ ಸದ್ಗುಣವಾಗಿತ್ತು. ಡಾ: ಜಾಕೀರ್ ಹುಸೇನ್ ರವರು ಎಂ ಎ ಪದವಿಗಳಿಸಿದರು.ನಂತರ ಜರ್ಮನಿಯಲ್ಲಿ ಮೂರು ವರ್ಷಗಳ ಕಾಲ ವ್ಯಾಸಂಗ ನಡೆಸಿ ಅರ್ಥಶಾಸ್ತ್ರ ವಿಭಾಗದಲ್ಲಿ ಪಿಎಚ್. ಡಿ ಪದವಿ ಪಡೆದು ಭಾರತಕ್ಕೆ ಹಿಂದಿರುಗಿದರು.

ಕೆಲವು ಸ್ನೇಹಿತರೊಂದಿಗೆ ಕೂಡಿಕೊಂಡು ಜಾಮಿಯಾ ಇಸ್ಲಾಮಿಯಾ ಎಂಬ ಶಿಕ್ಷಣ ಸಂಸ್ಥೆಯನ್ನು 1920 ರಲ್ಲಿ ಸ್ಥಾಪಿಸಿದರು. ಬಳಿಕ ಅವರು ಸದರಿ ಸಂಸ್ಥೆಯಲ್ಲಿ ಉಪಕುಲಪತಿಗಳಾಗಿ ಸುಮಾರು 22 ವರ್ಷಗಳ ಕಾಲ ಸೇವೆ ಸಲ್ಲಿಸಿದರು.

1948 ರಲ್ಲಿ ಡಾ: ಜಾಕೀರ್ ಹುಸೇನ್ ರವರು ಆಲಿಘರ್ ವಿಶ್ವವಿದ್ಯಾಲಯದ ಉಪಕುಲಪತಿಗಳಾದರು. ನಂತರ ಇಂಡಿಯನ್ ನ್ಯಾಷನಲ್ ಕಮಿಟಿಯ ಅಧ್ಯಕ್ಷರಾಗಿದ್ದು ಮುಂದೆ ಆ ಸಂಸ್ಥೆಯ ವಿಶ್ವಾಧ್ಯಕ್ಷರಾದರು. ವಿಶ್ವವಿದ್ಯಾಲಯ ಗ್ರಾಂಟ್ ಕಮಿಟಿಯ ಸದಸ್ಯರಾಗಿ 1957 ರವರೆಗೆ ಕಾರ್ಯನಿರ್ವಹಿಸಿದರು.



ಡಾ: ಜಾಕೀರ್ ಹುಸೇನ್ ಅವರು ಶ್ರೇಷ್ಠ ಶಿಕ್ಷಣ ತಜ್ಞರಾಗಿದ್ದು ಅವರ ಭಾಷಣ ಮತ್ತು ಬರಹಗಳಲ್ಲಿ ಅವರ ಉನ್ನತ ಶೈಕ್ಷಣಿಕ ಚಿಂತನೆಗಳು ಅಭಿವ್ಯಕ್ತಗೊಂಡಿವೆ. ಇವರು ಮೂಲ ರಾಷ್ಟ್ರೀಯ ಶಿಕ್ಷಣವನ್ನು ಪ್ರತಿಪಾದಿಸಿ ಅದನ್ನು ಜಾರಿಗೆ ತಂದರು.

1956 ರಲ್ಲಿ ರಾಜ್ಯಸಭಾ ಸದಸ್ಯರಾಗಿದ್ದ ಇವರು 1957 ರಲ್ಲಿ ಬಿಹಾರದ ರಾಜ್ಯಪಾಲರಾಗಿ ನೇಮಕಗೊಂಡರು.1962 ರಲ್ಲಿ ಭಾರತದ ಉಪರಾಷ್ಟ್ರಪತಿಯಾಗಿ ಆಯ್ಕೆಯಾದರು.ನಂತರ 1967 ರಲ್ಲಿ ಡಾ: ಜಾಕೀರ್ ಹುಸೇನ್ ರವರು ಭಾರತದ ಮೂರನೇ ರಾಷ್ಟ್ರಪತಿಗಳಾದರು.

ಭಾರತದ ಅತ್ಯುನ್ನತ ಸ್ಥಾನದ ಘನತೆ ಗೌರವಗಳನ್ನು ಕಾಯ್ದುಕೊಂಡು ಅತ್ಯಂತ ಸಮರ್ಥವಾಗಿ ತಮ್ಮ ಹೊಣೆಗಾರಿಕೆಯನ್ನು ನಿರ್ವಹಿಸಿದರು. ಆದರೆ ದುರಾದೃಷ್ಟವಶಾತ್ 1969 ಮೇ 03 ರಂದು ರಾಷ್ಟ್ರಪತಿ ಹುದ್ದೆಯಲ್ಲಿ ಇದ್ದಾಗಲೇ ಹೃದಯಾಘಾತದಿಂದ ತೀರಿಕೊಂಡರು ಆಗ ಅವರಿಗೆ 72 ವರ್ಷ ವಯಸ್ಸಾಗಿತ್ತು.

ಸಾಹಿತ್ಯದಲ್ಲಿ ವಿಶೇಷವಾದ ಒಲವನ್ನು ಹೊಂದಿದ್ದು ಸಮರ್ಥ ಲೇಖಕರೂ ಸಹ ಆಗಿದ್ದು ಅನೇಕ ಕೃತಿಗಳನ್ನು ರಚಿಸಿದ್ದಾರೆ.ದೇಶದ ಹಲವು ವಿಶ್ವವಿದ್ಯಾಲಯಗಳ ಘಟಿಕೋತ್ಸವಗಳಲ್ಲಿ ಇವರು ನೀಡಿದ ಭಾಷಣಗಳ ಸಂಗ್ರಹವನ್ನು ದಿ ಡೈನಾಮಿಕ್ ಯುನಿವರ್ಸಿಟಿ ಎಂಬ ಹೆಸರಿನಲ್ಲಿ ಪ್ರಕಟಿಸಲಾಗಿದೆ. ಡಾ: ಜಾಕೀರ್ ಹುಸೇನ್ ರವರಿಗೆ ದೆಹಲಿ, ಕಲ್ಕತ್ತಾ ,ಆಲಿಘರ್, ಅಲಹಾಬಾದ್ ಮತ್ತು ಕೈರೋ ವಿಶ್ವವಿದ್ಯಾಲಯಗಳು ಗೌರವ ಡಿ.ಲಿಟ್ ಪ್ರಶಸ್ತಿ ನೀಡಿ ಸನ್ಮಾನಿಸಿವೆ.1954 ರಲ್ಲಿ ಪದ್ಮವಿಭೂಷಣ ಪ್ರಶಸ್ತಿ ದೊರೆತರೆ,1963 ರಲ್ಲಿ ಭಾರತ ರತ್ನ ಪ್ರಶಸ್ತಿ ದೊರೆಯಿತು. ಇಂತಹ ಶಿಕ್ಷಣತಜ್ಞ, ಮಾನವತಾವಾದಿ,ಮುಸ್ಲಿಂ ಸಂಪ್ರದಾಯವಾದಿಗಳಾ ಗಿದ್ದರೂ ಜಾತ್ಯಾತೀತ ತತ್ವದಲ್ಲಿ ಅಪಾರವಾದ ನಂಬಿಕೆ ಹೊಂದಿದ್ದರು. ಧರ್ಮನಿರಪೇಕ್ಷತೆಯ ಭಾರತದ ಪ್ರಗತಿಗೆ ಸಾಧನವೆಂದು ಸಾರಿದರು. ಭಿನ್ನತೆಯಲ್ಲಿ ಏಕತೆಯನ್ನು ಸಾಧಿಸಿದ ಭಾರತೀಯ ಸಂಸ್ಕೃತಿಯನ್ನು ಅವರು ಬಹುವಾಗಿ ಮೆಚ್ಚಿದ್ದರು. ಡಾ:ಜಾಕೀರ್ ಹುಸೇನ್ ರವರು ಒಬ್ಬ ಸರ್ವ ಸಮರ್ಥರಾಗಿ ರಾಷ್ಟ್ರಪತಿ ಹುದ್ದೆಯನ್ನು ಅಲಂಕರಿಸಿ ರಾಷ್ಟ್ರಕ್ಕೆ ಆಕರ್ಷಕ ಮತ್ತು ಆದರ್ಶರಾಗಿ ಇರುವವರ ಪೈಕಿ ಒಬ್ಬರಾಗಿ ಶ್ರೇಷ್ಠತೆಯಲ್ಲಿ ಕಾಣಿಸಿಕೊಂಡಿದ್ದರು. ಇಂದು ಸನ್ಮಾನ್ಯರ 128 ನೇ ವರ್ಷದ ಜನ್ಮ ಜಯಂತಿಯ ಆಚರಿಸುವ ಮೂಲಕ ಅವರ ಆದರ್ಶ ಗಳನ್ನು ಪಾಲಿಸೋಣ

**ಸುಮಾರು 22 ವರ್ಷಗಳ ಕಾಲ ಸೇವೆ ಸಲ್ಲಿಕೆ**

# ದಿನಕ್ಕೊಂದು ಮುಕ್ತಕ -82

**ಸಾಮಾಜಿಕ ಕಳಕಳಿ**



ಹೆಚ್.ಎಸ್.ಪ್ರತಿಮಾ ಹಾಸನ್
ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ



• ಉದಯವಾಹಿನಿ, ವಿಶೇಷ

**ಕನ್ನಡಕೆ ಕೈಯೆತ್ತು ಗೌರಿ ಶಿಖರದ ಹಾಗೆ**
**ಕನ್ನಡಕೆ ಕೊರಳೆತ್ತು ಪಾಂಚಜನ್ಯ**
**ಕನ್ನಡವ ನೆನೆಯುತ್ತ ಕನ್ನಡಾಂಬೆಗೆ ನಮಿಸು**
**ಕನ್ನಡವೆ ಚೆನ್ನುಡಿಯು ಲಕ್ಷ್ಮಿ ದೇವಿ......**

ಭಾವಾರ್ಥ: ನಮ್ಮ ಕನ್ನಡ ನಮ್ಮ ಆಸ್ತಿ. ಅದನ್ನು ಉಳಿಸಿಕೊಳ್ಳುವ ಕೆಲಸ ನಮ್ಮಿಂದಲೇ ಆಗಬೇಕೇ ಹೊರತು ಬೇರೆಯವರು ಅದನ್ನು ಉಳಿಸಲು ಬರುವುದಿಲ್ಲ. ಕನ್ನಡಕ್ಕೆ ಕೈ ಎತ್ತು ಗೌರಿ ಶಿಖರದ ಹಾಗೆ ಕನ್ನಡಕ್ಕೆ ಕೊರಳೆತ್ತು ಪಾಂಚಜನ್ಯದ ರೀತಿಯಲ್ಲಿ ಎಂಬಂತೆ ಕನ್ನಡವನ್ನೇ ಉಸಿರಾಗಿಸಿಕೊಂಡು ಕನ್ನಡವನ್ನೇ ಬೆಳೆಸಲು ಹೋರಾಟವನ್ನು ಮಾಡಬೇಕಾಗುತ್ತದೆ. ಕನ್ನಡವ ನೆನೆಸುತಲಿ ಕನ್ನಡಾಂಬೆಗೆ ನಮಿಸುತ್ತಲಿ ತಾಯಿಯ ಋಣ ತೀರಿಸಲಾಗದೆಂದು ನನ್ನ ಕನ್ನಡ ನನಗೆ ಹೆಮ್ಮೆ ಎಂದು ಹೇಳುತ್ತಾ ಸಾಗುವ ದಾರಿಯಲ್ಲಿ ಕನ್ನಡಾಂಬೆಯನ್ನು ನಮಿಸುತ್ತಾ ಕನ್ನಡವೇ ಚೆನ್ನುಡಿಯು ಎಂದು ಹೇಳುತ್ತಾ ಎಲ್ಲೆಡೆಯೂ ಪ್ರೀತಿ ವಿಶ್ವಾಸದಲ್ಲಿ ಬಾಳಬೇಕಾಗಿದೆ. ಪ್ರತಿ ಮನೆ ಮನೆಗಳಲ್ಲೂ ಕನ್ನಡದ ಕಹಳೆಯನ್ನು ಕೂಗ ಬೇಕಾಗಿದೆ. ಕನ್ನಡವೇ ಸತ್ಯ, ಕನ್ನಡವೇ ನಿತ್ಯ, ಕನ್ನಡವೇ ನಮ್ಮಮ್ಮ, ಅವಳೇ ನಮ್ಮ ಉಸಿರಮ್ಮ ಎಂದು ಜೀವನದಲ್ಲಿ ಸಾಗ ಬೇಕಾಗುತ್ತದೆ.

# ಶಿಕ್ಷಣದ ಜತೆಗೆ ಸಾಂಸ್ಕೃತಿಕ ರಾಯಭಾರಿಗಳಾಗಿ: ಶಿಕ್ಷಣ ಸಚಿವ

## ಶಿಕ್ಷಣದ ಜತೆಗೆ ಕಲೆ, ನಮ್ಮ ಶ್ರೀಮಂತ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಕೆಲಸ ಮಾಡಬೇಕು

• ಉದಯವಾಹಿನಿ, ಚಿತ್ರದುರ್ಗ


ಉದಯವಾಹಿನಿ ಚಿತ್ರ

ವಿದ್ಯಾರ್ಥಿಗಳು ತಮ್ಮ ಶಿಕ್ಷಣದ ಜತೆಗೆ ದೇಶದ, ರಾಜ್ಯದ ಸಾಂಸ್ಕೃತಿಕ ರಾಯಬಾರಿಗಳಾಗಿ ಕಲೆ, ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಕೊಂಡ್ಯೊಯುವ ಕೆಲಸ ಮಾಡಬೇಕು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ವಿದ್ಯಾರ್ಥಿಗಳಿಗೆ ಕರೆ ನೀಡಿದರು. ನಗರದ ಮುರುಘರಾಜೇಂದ್ರ ಬೃಹನ್ಮಠದ ಅನುಭವ ಮಂಟಪದಲ್ಲಿ ಶಾಲಾ ಶಿಕ್ಷಣ, ಸಾಕ್ಷರತಾ ಇಲಾಖೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಎರಡು ದಿನಗಳ ರಾಜ್ಯ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮಕ್ಕೆ ಸರ್ಕಾರದಿಂದ ಹೆಚ್ಚಿನ ಅನುದಾನ ಕೊಡುವುದಿಲ್ಲ. ಈ ಕುರಿತು ಮುಖ್ಯಮಂತ್ರಿಗಳ ಜತೆ ಚರ್ಚಿಸಿದ್ದು, ಶಿಕ್ಷಣಕ್ಕೆ ಪೂರಕವಾಗಿ ಕಲೆ ಮತ್ತು ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ನಿಟ್ಟಿನಲ್ಲಿ ಪ್ರತಿಭಾ ಕಾರಂಜಿ, ಕಲೋತ್ಸವ ಕಾರ್ಯಕ್ರಮಕ್ಕೆ ಹೆಚ್ಚಿನ ಅನುದಾನಕ್ಕಾಗಿ ಪ್ರಸ್ತಾವ ಸಲ್ಲಿಸಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಅನುದಾನ ದೊರೆಯುವ ಸಾಧ್ಯತೆ ಇದೆ ಎಂದು ಸಚಿವರು ವಿಶ್ವಾಸ ವ್ಯಕ್ತಪಡಿಸಿದರು.

> ಅತಿ ಹೆಚ್ಚು ಸಂಸ್ಕೃತಿ, ಕಲೆ, ವಿಭಿನ್ನವಾದ ಭಾಷೆ ಇದ್ದರೂ ಒಂದೇ ನೆಲದಲ್ಲಿ ಬಾಳುವ ದೇಶ ಭಾರತ. ಶಿಕ್ಷಣದ ಜತೆಗೆ ಕಲೆ, ನಮ್ಮ ಶ್ರೀಮಂತ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಕೊಂಡ್ಯೊಯುವ ಕೆಲಸ ಮಾಡಬೇಕು. ಪ್ರತಿಭಾ ಕಾರಂಜಿ, ಕಲೋತ್ಸವ ಕಾರ್ಯಕ್ರಮಗಳು ಇದಕ್ಕೆ ಸಹಕಾರಿಯಾಗಿವೆ – ಮಧು ಬಂಗಾರಪ್ಪ, ಶಿಕ್ಷಣ ಸಚಿವ


ವಿಧಾನ ಪರಿಷತ್ ಸದಸ್ಯ ಡಿ.ಟಿ.ಶ್ರೀನಿವಾಸ್ ಮಾತ ನಾಡಿ, ವೈವಿದ್ಯಮಯದಲ್ಲಿ ಏಕತೆ ಕಾಪಾಡಲಿಕ್ಕೆ ಸಂವಿಧಾನ ಅವಕಾಶ ಕಲ್ಪಿಸಿಕೊಟ್ಟಿದೆ. ಮಕ್ಕಳ ಪ್ರತಿಭೆ ಅನಾವರಣಕ್ಕೆ ಪ್ರತಿಭಾ ಕಾರಂಜಿ, ಕಲೋತ್ಸವ ಉತ್ತಮ ವೇದಿಕೆಯಾಗಿದೆ ಎಂದರು. ಹೊಸದುರ್ಗ ಶಾಸಕ ಬಿ.ಜಿ.ಗೋವಿಂದಪ್ಪ ಅವರು ಮಾತನಾಡಿ, ರಾಜ್ಯದ ವಿವಿಧ ಭಾಗಗಳಿಂದ ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಲು ಕೋಟೆಯ ನಾಡು ಚಿತ್ರದುರ್ಗ ಜಿಲ್ಲೆಗೆ ಆಗಮಿಸಿರುವುದು ಸಂತಸ ತಂದಿದೆ. ಮಕ್ಕಳು ತಮ್ಮ ಪ್ರತಿಭೆ ಪ್ರದರ್ಶಿಸಲು ಇಂತಹ ಕಾರ್ಯಕ್ರಮಗಳು ಉತ್ತಮ ವೇದಿಕೆಯಾಗಿವೆ ಎಂದರು. ಮುರುಘಾಮಠದ ಆಡಳಿತ ಮಂಡಳಿ ಸದಸ್ಯ ಡಾ.ಬಸವಕುಮಾರ ಸ್ವಾಮೀಜಿ ಮಾತನಾಡಿ, ಪ್ರತಿಯೊಂದು ಮಗುವಿಗೆ ಸಾಂಸ್ಕೃತಿಕ ಜಗತ್ತು ಇದೆ. ಪ್ರತಿಭೆ ಅನಾವರಣ ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯಾದರೆ ಉಳಿದ ಎಲ್ಲಾ ಕ್ಷೇತ್ರಗಳು ಸಹ ಸುಧಾರಣೆ ಆಗಲು ಸಾಧ್ಯವಾಗಲಿದೆ. ಪ್ರತಿಭಾವಂತರಿಗೆ ಅವಕಾಶ ಬೇಕು. ರಾಜ್ಯದ ಸುಮಾರು 25 ಸಾವಿರ ಮಕ್ಕಳಿಗೆ ನೀಟ್, ಸಿಇಟಿ ಸೇರಿದಂತೆ ವೃತ್ತಿಪರ ಕೋರ್ಸ್‌ಗಳಿಗೆ ಉಚಿತವಾಗಿ ತರಬೇತಿ ನೀಡುವ ಕಾರ್ಯಕ್ರಮವನ್ನು 2 ರಿಂದ 3 ಲಕ್ಷ ವಿದ್ಯಾರ್ಥಿಗಳಿಗೆ ಅವಕಾಶ ನೀಡಬೇಕು. ಉನ್ನತ ಶಿಕ್ಷಣದಲ್ಲಿ ಸರ್ಕಾರಿ ಶಾಲೆ ಮಕ್ಕಳಿಗೆ ಹೆಚ್ಚಿನ ಸೀಟು ಹಂಚಿಕೆಯಾಗುವಂತಾಗಬೇಕು ಎಂದು ಸಲಹೆ ನೀಡಿದರು.

### ಹೊಸದಾಗಿ 15 ಸಾವಿರ ಶಿಕ್ಷಕರ ನೇಮಕಕ್ಕೆ ಕ್ರಮ

ಶಿಕ್ಷಣ ಇಲಾಖೆಗೆ ಈಗಾಗಲೇ 13 ಸಾವಿರ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಲಾಗಿದ್ದು, ಹೊಸದಾಗಿ 15 ಸಾವಿರ ಶಿಕ್ಷಕರ ನೇಮಕಕ್ಕೆ ಕ್ರಮ ಕೈಗೊಳ್ಳಲಾಗುವುದು. ಇದರ ಜೊತೆಗೆ ಅನುದಾನಿತ ಶಾಲೆಗೆ ಶಿಕ್ಷಕರ ನೇಮಕಾತಿ ಪ್ರಕ್ರಿಯೆಗೆ ಚಾಲನೆ ದೊರೆಯಲಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಖಾಲಿ ಇರುವ ಶಿಕ್ಷಕ ಹುದ್ದೆಗಳಲ್ಲಿ ಶೇ.80 ರಷ್ಟು ಶಿಕ್ಷಕರನ್ನು ಆದಷ್ಟು ಶೀಘ್ರ ನೇಮಕಾತಿ ಮಾಡಿ, ಶಿಕ್ಷಣವನ್ನು ಮೇಲ್ದರ್ಜೆಗೆ ಕೊಂಡ್ಯೊಯುವ ಕೆಲಸ ಮಾಡಲಾಗುವುದು ಎಂದು ತಿಳಿಸಿದ ಅವರು, ದ್ವಿತೀಯ ಪಿಯು ಪೂರೈಸಿದ ಮಕ್ಕಳು ನೀಟ್, ಸಿಇಟಿ ಪರೀಕ್ಷೆಗಾಗಿ ಕೋಚಿಂಗ್ ತರಗತಿಗಳಿಗೆ ಹೋಗಬೇಕಾಗುತ್ತದೆ. ಕೋಚಿಂಗ್ಗಾಗಿ ಸುಮಾರು 4 ರಿಂದ 5 ಲಕ್ಷದವರೆಗೆ ಶುಲ್ಕ ಪಾವತಿಸಬೇಕಾಗುತ್ತದೆ. ಈ ಹಿನ್ನಲೆಯಲ್ಲಿ ದೇಶದಲ್ಲಿಯೇ ಪ್ರಥಮ ಬಾರಿಗೆ ನಮ್ಮ ರಾಜ್ಯದಲ್ಲಿ ಸುಮಾರು 25 ಸಾವಿರ ಮಕ್ಕಳಿಗೆ ನೀಟ್, ಸಿಇಟಿ ಸೇರಿದಂತೆ ವೃತ್ತಿಪರ ಕೋರ್ಸ್‌ಗಳಿಗೆ ಉಚಿತವಾಗಿ ತರಬೇತಿ ನೀಡುವ ಕಾರ್ಯಕ್ರಮವನ್ನು ಈಗಾಗಲೇ ಅನುಷ್ಠಾನಗೊಳಿಸಲಾಗಿದೆ ಎಂದರು.

# ಗ್ರಾ.ಪಂ. ಪಿಡಿಓ, ಮುಖ್ಯ ಶಿಕ್ಷಕ ವಿಠ್ಠಲ್ ಜೀರಗಾಳಿ ಅಮಾನತು

• ವರದಿ, ವುಂತಗಲ್ ಮಂಜು
• ಉದಯವಾಹಿನಿ ವರದಿ


ಉದಯವಾಹಿನಿ ಚಿತ್ರ
ಶ್ರೀ ಎನ್ ಶಿವರಾಜ್ ಗ್ರಾಪಂ. ಅಭಿವೃದ್ಧಿ ಅಧಿಕಾರಿ | ಮುಖ್ಯ ಶಿಕ್ಷಕ ವಿಠಲ್ ಜೀರಗಾಳಿ

**ಮಕ್ಕಳ ಕಸ ವಿಲೇವಾರಿ ಘಟನೆ**

**ಕಾರಟಗಿ:** ಅಕ್ಷರ ಕಲಿಯಬೇಕಾದ ಮಕ್ಕಳನ್ನು ಕಸ ವಿಲೇವಾರಿಗೆ ಬಳಸಿಕೊಂಡ ಘಟನೆ ಕಾರಟಗಿ ತಾಲ್ಲೂಕಿನ ಸಿದ್ದಾಪುರ ಹೋಬಳಿಯ ಉಳೆನೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳು ದಿನಾಂಕ 25/01/ 2025 ರಂದು ಬೆಳಗ್ಗೆ 9: ಘಂಟೆ 30 ನಿಮಿಷಕ್ಕೆ ಶಾಲಾ ಆವರಣದ ಕಸವನ್ನು ತುಂಬಿ ಗ್ರಾಮ ಪಂಚಾಯಿತಿಯ ಮುಂಭಾಗದಲ್ಲಿ ವಿಲೇವಾರಿ ಮಾಡಿ ಸುರಿದಿರುವ ಘಟನೆ ನಡೆದಿತ್ತು. ಈ ಕುರಿತು ಸಾಮಾಜಿಕ ಜಾಲ ತಾಣಗಳಲ್ಲಿ ಹಾಗೂ ವಿವಿಧ ಪತ್ರಿಕೆಗಳಲ್ಲಿ ಮಕ್ಕಳ ಹಕ್ಕುಗಳಿಗೆ ಧಕ್ಕೆ ಉಂಟಾಗಿದೆ ಎಂದು ವರದಿ ಬಿತ್ತರಿಸಲಾಗಿತ್ತು ಎಚ್ಚೆತ್ತುಕೊಂಡ ಅಧಿಕಾರಿಗಳು ಉಳೆನೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿದ ತಾಲ್ಲೂಕ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀಮತಿ ಲಕ್ಷ್ಮೀದೇವಿ ಹಿಂದಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಮಂಜುನಾಥ್ರವರು ಉಳೆನೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಪಿಡಿಓ ಶಿವರಾಜ್ ಮತ್ತು ಶಾಲಾ ಮುಖ್ಯೋಪಾಧ್ಯಾಯರಾದ ವಿಠ್ಠಲ್ ಜೀರಗಾಳಿ ರವರ ಕರ್ತವ್ಯ ಲೋಪದ ಬಗ್ಗೆ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಮೇಲಾಧಿಕಾರಿಗಳಿಗೆ ಸೂಚನೆ ನೀಡಿದ ಮೇರೆಗೆ ದಿನಾಂಕ 03.02.2025 ರಂದು ಪ್ರಾಥಮಿಕ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀಶೈಲ ಬಿರಾದರ್ ಮತ್ತು ಕೊಪ್ಪಳ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡಿಯ ಇವರು ಪಿಡಿಓ ಮತ್ತು ಮುಖ್ಯ ಶಿಕ್ಷಕ ರವರನ್ನು ಅಮಾನತ್ ಮಾಡಿ ಆದೇಶ ಹೊರಡಿಸಿದ್ದಾರೆ.

ಕರ್ನಾಟಕ ನಾಗರಿಕ ಸೇವಾ ನಿಯಮಗಳು 1957ರ ನಿಯಮ 10 (ಡಿ) ರನ್ವಯ ಇಲಾಖಾ ವಿಚಾರಣೆ ಕಾಯ್ದಿರಿಸಿ ತಕ್ಷಣವೇ ಜಾರಿಗೆ ಬರುವಂತೆ, ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿದೆ.

**ಪಾಲಕರ ಒತ್ತಾಯ**

ಕಸ ವಿಲೇವಾರಿ ಮಾಡಲು ಶಾಲಾ ಮಕ್ಕಳನ್ನು ದುರುಪಯೋಗ ಪಡಿಸಿಕೊಂಡಿರುವ ವ್ಯಕ್ತಿಯ ವಿರುದ್ಧ ಕ್ರಮ ಜರಗಿಸಲು ಅಧಿಕಾರಿಗಳಲ್ಲಿ ಪಾಲಕರು ಮತ್ತು ಸಾರ್ವಜನಿಕರು ಆಗ್ರಹಿಸಿದ್ದರು. ಸ್ವತಃ ಶಾಲಾ ಮಕ್ಕಳನ್ನು ಕಸ ವಿಲೇವಾರಿಗೆ ಬಳಸಿಕೊಂಡಿರುವ ವ್ಯಕ್ತಿಯೇ ತಪ್ಪು ಮಾಡಿರುವುದು ನಾನು ನನ್ನ ಮೇಲೆ ಅಧಿಕಾರಿಗಳು ಯಾವುದೇ ರೀತಿಯ ಕ್ರಮ ಜರುಗಿಸಬಹುದು ಎಂದು ತಪ್ಪೊಪ್ಪಿಗೆ ಹೇಳಿಕೆ ನೀಡಿದರು ಅಧಿಕಾರಿಗಳು ಆ ವ್ಯಕ್ತಿಯ ವಿರುದ್ಧ ಯಾವುದೇ ರೀತಿಯ ಕ್ರಮ ಜರುಗಿಸಿಲ್ಲ ಯಾಕೆ ಎನ್ನುವುದೇ ಅನುಮಾನ ಮೂಡುತ್ತಿದೆ ಕ್ರಮ ಜರುಗಿಸದೆ ಇದ್ದರೆ ಶಾಲಾ ಮಕ್ಕಳನ್ನು ಪದೇ ಪದೇ ದುರುಪಯೋಗ ಪಡಿಸಿಕೊಳ್ಳುವ ಅವಕಾಶವಿದೆ ಎಂದು ಸಾರ್ವಜನಿಕರು ಪಾಲಕರು ಆತಂಕ ವ್ಯಕ್ತ ಪಡಿಸುತ್ತಿದ್ದಾರೆ

# ರಾಷ್ಟ್ರೀಯ ಬ್ಯಾಂಕ್ ರಚನೆಗೆ ವೆಂಕಟೇಶ್ವರ ರೆಡ್ಡಿ ಕರೆ

• ಉದಯವಾಹಿನಿ, ಬಳ್ಳಾರಿ


ಉದಯವಾಹಿನಿ ಚಿತ್ರ

ಈ ತಿಂಗಳ ಅಂತ್ಯದಲ್ಲಿ ಒಂದು ರಾಜ್ಯ ಒಂದು ಗ್ರಾಮೀಣ ಬ್ಯಾಂಕ್ ಗಳ ರಚನೆ ಕಾರ್ಯ ಆಗಲಿದೆ. ಇದರಿಂದ ಗ್ರಾಮೀಣ ಬ್ಯಾಂಕ್ ಗಳ 12 ಪ್ರಯೋಜಿತ ಬ್ಯಾಂಕ್‌ಗಳು ಇದ್ದು. ಈಗ ಅವುಗಳ ಅವಶ್ಯಕತೆ ಇಲ್ಲ. ಅದಕ್ಕಾಗಿ ರಾಷ್ಟ್ರೀಯ ಗ್ರಾಮಿಣ ಬ್ಯಾಂಕ್ ಆಗಬೇಕಿದೆಂದು ಅಖಿಲ ಭಾರತ ರೂರಲ್ ಬ್ಯಾಂಕ್ ಎಂಪ್ಲಾಯಿಸ್ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಎಸ್. ವೆಂಕಟೇಶ್ ರೆಡ್ಡಿ ಹೇಳಿದ್ದಾರೆ. ನಗರದಲ್ಲಿ ಮಾಧ್ಯಮ ಗೋಷ್ಟಿ ನಡೆಸಿ. ಬಳ್ಳಾರಿಯ ಕಮ್ಮ ಭವನದಲ್ಲಿ ನಾಳೆಯಿಂದ ಎರಡು ದಿನಗಳ ಕಾಲ ಅಸೋಸಿಯೇಷನ್ ನ 15 ವಾರ್ಷಿಕ ಸಮ್ಮೇಳನ ನಡೆಯಲಿದೆ. ಕಳೆದ ಬಾರಿ 2021 ರಲ್ಲಿ ಗುಹಾತಿಯಲ್ಲಿ ನಡೆದಿತ್ತು. ಇದಕ್ಕೂ ಮೊದಲು 1989 ನಲ್ಲಿ ಕರ್ನಾಟಕದಲ್ಲಿ ನಡೆದಿತ್ತು. ನಂತರ ಈಗ ನಡೆಯುತ್ತಿದೆ. ಒಂದು ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಆಗಮಿಸಲಿದ್ದಾರೆ. ಇಂದು ಬೆಳಿಗ್ಗ 10 ಗಂಟೆ ನಂತರ ಬಹಿರಂಗ ಸಭೆ ನಡೆಯಲಿದೆ. ನಂತರ ಮಹಿಳಾ ಸಮಾವೇಶ ನಡೆಯಲಿದೆ ಇದರಲ್ಲಿ ಮೂರು ಮೂರಕ್ಕೂ ಹೆಚ್ಚು ಜನ ಭಾಗವಹಿಸಲಿದ್ದಾರೆಂದು ತಿಳಿಸಿದರು. ಗ್ರಾಮಿಣ ಬ್ಯಾಂಕ್ ಆರಂಭಗೊಂಡು 50 ವರ್ಷ ಗಳಾಗಿದೆ. ದೇಶ ದಲ್ಲಿ ಒಟ್ಟಾರೆ 43 ಗ್ರಾಮೀಣ ಬ್ಯಾಂಕ್ ಗಳು ಇವೆ. ಅವುಗಳನ್ನು ಒಂದು ರಾಜ್ಯಕ್ಕೆ ಒಂದರಂತೆ ಮಾಡುತ್ತಿದೆ. ಕರ್ನಾಟಕದಲ್ಲಿ ಎರೆಡು ಗ್ರಾಮೀಣ ಬ್ಯಾಂಕುಗಳು ಇದ್ದು ಅವು ಎರೆಡು ಸಮ್ಮಿಶ್ರಗೊಂಡು ಕರ್ನಾಟಕ ಗ್ರಾಮೀಣ ಬ್ಯಾಂಕ್ ರಚನೆಯಾಗಲಿದೆಂದು ತಿಳಿಸಿದರು. ವಾಣಿಜ್ಯ ಬ್ಯಾಂಕ್ ಗಳ ಸಿಬ್ಬಂದಿಗೆ ನೀಡುವ ಸೌಲಭ್ಯಗಳನ್ನು ನೀಡಬೇಕು.ನಿವೃತ್ತ ವೇತನನವನ್ನು ಸೂಕ್ತವಾಗಿ ಅನುಷ್ಟಾನಕ್ಕೆ ತರಬೇಕಿದೆಂದರು. ಗ್ರಾಮೀಣ ಬ್ಯಾಂಕ್ ನಿವೃತ್ತ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಗಣಪತಿ ಹೆಗಡೆ ಮಾತನಾಡಿ. ದೇಶದಲ್ಲಿ ಗ್ರಾಮೀಣ ಬ್ಯಾಂಕಿನ 22 ಸಾವಿರ ಶಾಖೆಗಳಿವೆ. ಎಸ್ ಬಿಐ ನಂತರ ನಮ್ಮದೇ ದೊಡ್ಡ ಬ್ಯಾಂಕ್ 1129000 ಕೋಟಿ ರೂ ವ್ಯವಹಾರ ಇದೆಂದರು.

**ಸಿಬ್ಬಂದಿ ಕೊರತೆ ಇದೆ:** ಗ್ರಾಮೀಣ ಬ್ಯಾಂಕುಗಳಲ್ಲಿ ಸಿಬ್ಬಂದಿ ಕೊರತೆ ಇದೆ. 40 ಕೋಟಿ ಗ್ರಾಹಕರು ಇದ್ದಾರೆ. ಇದರಿಂದ ಉತ್ತಮ ಸೇವಾ ಸಂಕಷ್ಟವಾಗುತ್ತಿದೆ. 25 ಸಾವಿರ ಸಿಬ್ಬಂದಿ ಹುದ್ದೆ ಖಾಲಿ ಇದೆ. 15 ಸಾವಿರ ಸಿಬ್ಬಂದಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಳೆದ ಹಲವು ವರ್ಷಗಳಿಂದ ಇವರನ್ನು ಮಿತ್ರ ಕಮಿಟಿ ವರದಿಯಂತೆ ಖಾಯಂ ಮಾಡಲು ಒತ್ತಾಯಿಸುತ್ತಿದೆ.

# ನಿರ್ಗತಿಕರ ಅನ್ನದಾತ ನಿಜಪ್ಪ ಹಿರೇಮನಿ ದಂಪತಿಗಳ ಸೇವೆ ಅವಿಸ್ಮರಣೀಯ

• ಉದಯವಾಹಿನಿ, ಅಥಣಿ


ಉದಯವಾಹಿನಿ ಚಿತ್ರ

ವಿಶೇಷ ಮಕ್ಕಳ ಸೇವೆ ದೇವರ ಎಂಬ ಧ್ಯೇಯದೊಂದಿಗೆ ತನ್ನ ಸ್ವಂತ ಮಕ್ಕಳಿಗಿಂತ ಹೆಚ್ಚಾಗಿ ಪೊಷಿಸುತ್ತಾ ಅವರ ಸೇವೆ ಮಾಡುತ್ತಾ ಪ್ರತಿದಿನವೂ ನಿರ್ಗತಿಕರಿಗೆ ಅವರಿರುವ ಸ್ಥಳಕ್ಕೆ ಹೋಗಿ ಅನ್ನ ನೀಡುವ ಮೂಲಕ ಸಾಮಾಜಿಕ ಸೇವೆ ಮಾಡುತ್ತಾ ಬಂದಿದ್ದು ಇವರ ಸೇವೆ ಇತರರಿಗೂ ಪ್ರೇರಣೆಯಾಗಲಿ ಎಂದು ಮುಖಂಡರಾದ ಶ್ಯಾಮ ಪೂಜಾರಿ ಹೇಳಿದರು. ಅವರು ಪಟ್ಟಣದ ಸತ್ತಿ ರಸ್ತೆಗೆ ಹೊಂದಿಕೊಂಡಿರುವ ರಾಯಲ್ ಹಾಲ್ ನಲ್ಲಿ ಕೃಪಾ ಆರೋಗ್ಯ, ಸಮಾಜ ಸೇವಾ ಸಂಸ್ಥೆಯಿಂದ ಹಮ್ಮಿಕೊಂಡಿದ್ದ ಹೊಸ ವರ್ಷದ ಉಡುಗೊರೆ ನೀಡುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತ ನಾಡುತ್ತಿದ್ದರು. ಸತತ ಹದಿನಾಲ್ಕು ವರ್ಷಗಳ ಕಾಲ ತಮ್ಮನ್ನು ತಾವು ಸಮಾಜಕ್ಕೆ ಅರ್ಪಿಸಿಕೊಂಡು ಹಲವಾರು ಸಮಾಜಕ್ಕೆ ಕೊಡುಗೆಗಳನ್ನು ಕೊಟ್ಟಿರುವ ಅನ್ನದಾತ ನಿಜಪ್ಪ ಹರೇಮನಿ ದಂಪತಿಗಳ ಕಾರ್ಯ ಶ್ಲಾಘನೀಯವಾದದ್ದು. ಈ ಸಂಸ್ಥೆಯಲ್ಲಿ ದೇವರ ಮಕ್ಕಳ ಆರೋಗ್ಯ ಪೊಷಣೆ ಆಗುತ್ತಿದೆ ಪ್ರತಿದಿನ ನೂರಾರು ಜನರಿಗೆ ಅನ್ನ ದಾಸೋಹ ಶಾಲಾ ಕಾಲೇಜುಗಳಲ್ಲಿ ಎವಿ ಏಡ್ಸ ರೋಗದ ಜನ ಜಾಗೃತಿ ಮೂಡಿಸುವುದು ಬೀದಿ ಬದಿಗಳಲ್ಲಿ ಬಿದ್ದಿರುವ ಮಾನಸಿಕ ಅಸ್ವಸ್ಥರನ್ನು ತಮ್ಮ ಸಂಸ್ಥೆಗೆ ಕರೆದುಕೊಂಡು ಬಂದು ಸ್ವಚ್ಚಗೊಳಿಸಿ ವೈದ್ಯಕೀಯ ಸೌಲಭ್ಯ ನೀಡಿ ಐದಾರು ದಿನ ತಮ್ಮ ಆಶ್ರಯದಲ್ಲಿ ಇಟ್ಟುಕೊಂಡು ಆತ್ಮ ಸಮಾಲೋಚನೆ ಮಾಡಿ ಪುನಃ ಅವರವರ ಮನೆಗೆ ಹೋಗುವುದಕ್ಕಾಗಿ ಉತ್ತೆಜಿಸುವುದು ಜಾತ್ರಾ ಮಹೋತ್ಸವಗಳಲ್ಲಿ, ದೇವದಾಸಿ ಪದ್ಧತಿಯ ನಿರ್ಮೂಲನೆ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡಿದ್ದಾರೆ. ಆದರೆ ಈ ಸಂಸ್ಥೆ ಪ್ರಾರಂಭವಾಗಿ ಹದಿನೈದು ವರ್ಷಗಳು ಕಳೆದರು ಸ್ವಂತ ಸ್ಥಳ ಕಟ್ಟಡ ಇಲ್ಲದೆ ಇರುವುದು ವಿಪರ್ಯಾಸ ವಾಗಿದೆ ಸರ್ಕಾರ ಅಥವಾ ದಾನಿಗಳು ಇತ್ತ ಕಡೆ ಗಮನ ಹರಿಸಿದರೆ ಇನ್ನೂ ಹೆಚ್ಚಿನ ಸಮಾಜ ಸೇವೆ ಮಾಡಲು ನಿಜಪ್ಪ ಹಿರೇಮನಿ ದಂಪತಿಗಳು ಅಣಿಯಾಗುತ್ತಾರೆ ಎಂದರು.

> ಜಗತ್ತಿನಲ್ಲಿ ವೈದ್ಯ ವಿಜ್ಞಾನಕ್ಕೆ ಸವಾಲಾಗಿರುವ ಸೋಂಕು ಎಂದರೆ ಎವಿ ಏಡ್ಸ್ ಅತ್ಯಂತ ವಿನಾಶಕಾರಿಕ ರೋಗಗಳಲ್ಲಿ ಇದು ಒಂದು ಸೋಂಕಿತರನ್ನು ಕೀಳರಿಮೆಯಿಂದ ಕಾಣಬಾರದು ಅವರಿಗೆ ಬೆಂಬಲ ನೀಡುವ ಮೂಲಕ ಅವರು ಅನುಭವಿಸುತ್ತಿರುವ ತಾರತಮ್ಯವನ್ನು ತೊಡೆದು ಹಾಕಬೇಕಾಗಿದೆ ಅಸುರಕ್ಷಿತ ಲೈಂಗಿಕ ಕ್ರಿಯೆಯಲ್ಲಿ ಯಾರು ತೊಡಗಬಾರದು ಏಡ್ಸ್ ರೋಗಿಗಳು ಒಂಟಿಯಲ್ಲ ಅವರೊಂದಿಗೆ ನಾವೆಲ್ಲರು ಇದ್ದೇವೆ ಎಂದು ಎಂಬ ಬಾವನೆ ಅವರಲ್ಲಿ ಮೂಡಿಸಬೇಕಾಗಿದೆ ಈ ಸೋಂಕಿನ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕಾಗಿದೆ ಏಡ್ಸ್ ಬಗ್ಗೆ ಭಯ ಬೇಡ ಜಾಗೃತಿ ಇರಲಿ – ಡಾ. ಶ್ರೀವತ್ಸ ಕುಲಕರ್ಣಿ

# ಅಕ್ರಮ ಮರಳು ಗಣಿಗಾರಿಕೆ: ಬೆಂಕಿ ಹಚ್ಚಿ ದೋಣಿ ನಾಶ

• ಉದಯವಾಹಿನಿ, ಹುಲಸೂರ


ಉದಯವಾಹಿನಿ ಚಿತ್ರ

ಮಾಂಜ್ರಾ ನದಿಯಲ್ಲಿ ಅಕ್ರಮ ಮರಳು ಗಣಿಗಾರಿಕೆಗೆ ಬಳಸುತ್ತಿದ್ದ ಯಂತ್ರಚಾಲಿತ ದೋಣಿಯನ್ನು ಜಪ್ತಿ ಮಾಡಿ, ಅದಕ್ಕೆ ಬೆಂಕಿ ಹಚ್ಚಿ ಅಧಿಕಾರಿಗಳು ನಾಶಪಡಿಸಿದ್ದಾರೆ.


**ಮರಳು ಅಕ್ರಮ ಗಣಿಗಾರಿಕೆ:** ಬೀಳದ ಕಡಿವಾಣ' ಶೀರ್ಷಿಕೆ ಅಡಿ ಫೆ. 5ರಂದು ವರದಿ ಪ್ರಕಟಿಸಿತ್ತು. ವರದಿ ಬೆನ್ನಲ್ಲೇ ಸಿಪಿಐ ಗುರುನಾಥ ಬಿರಾದಾರ, ಉಪ ತಹಶೀಲ್ದಾರ್‌ಸುನೀಲಕುಮಾರ ಸಜ್ಜನ, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಕಿರಿಯ ವಿಜ್ಞಾನಿ ಧನರಾಜ ಅವರ ನೇತೃತ್ವದ ತಂಡ ಗುರುವಾರ ಮಾಂಜ್ರಾ ನದಿಗೆ ಭೇಟಿ ಕೊಟ್ಟು, ಯಂತ್ರಚಾಲಿತ ದೋಣಿ ಜಪ್ತಿ ಮಾಡಿ, ಅದಕ್ಕೆ ಬೆಂಕಿ ಹಚ್ಚಿ ನಾಶಗೊಳಿಸಿದ್ದಾರೆ.

ಸಿಪಿಐ ಗುರುನಾಥ ಬಿರಾದಾರ ಮಾತನಾಡಿ, ವರದಿ ಹಾಗೂ ಗ್ರಾಮಸ್ಥರ ದೂರಿನ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಯಾರಾ ದರೂ ಅಕ್ರಮ ಮರಳು ಗಣಿಗಾರಿಕೆಯಲ್ಲಿ ತೊಡಗಿಸಿಕೊಂಡರೆ ಅಂತಹವರ ಬಗ್ಗೆ, ಮಾಹಿತಿ ನೀಡಿ, ಪೊಲೀಸರಿಗೆ ಸಹಕಾರ ಕೊಡಬೇಕು.

ಎಂದು ಕೋರಿದ್ದಾರೆ. ಭೂ ವಿಜ್ಞಾನಿ ಧನರಾಜ್ ಬಲ್ಲೂರಕರ, ಪಿಎಸ್ಐ ಶಿವಕುಮಾರ ಬಳತೆ, ಎಎಸ್ಐ ಚಂದ್ರಶೇಖರ್, ಸಿಬ್ಬಂದಿ ಮಹಾಂತೇಶ್, ಶ್ರೀಶೈಲ ಗಿರಿ ಹಾಜರಿದ್ದರು.

# ಸಹಕಾರ ತತ್ವಕ್ಕೆ ರಾಜಕೀಯ ಲೇಪನ ಸರಿಯಲ್ಲ

• ಉದಯವಾಹಿನಿ, ಹೊಸದುರ್ಗ


ಉದಯವಾಹಿನಿ ಚಿತ್ರ

ಸಹಕಾರ ಸಂಘಗಳು ಪ್ರಸ್ತುತ ಸಹಕಾರ ತತ್ವದ ಆಶಯವನ್ನು ಮರೆತಂತಿದೆ. ಸಹಕಾರ ತತ್ವಕ್ಕೆ ರಾಜಕೀಯ ಲೇಪನವಾಗುತ್ತಿರುವುದು ಮತ್ತು ರಾಜಕೀಯ ವ್ಯಕ್ತಿಗಳು ಸಹಕಾರ ತತ್ವದಲ್ಲಿ ಆಯ್ಕೆಯಾಗುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ ಎಂದು ಶಾಂತವೀರ ಸ್ವಾಮೀಜಿ ಆತಂಕ ವ್ಯಕ್ತಪಡಿಸಿದರು.


ಪಟ್ಟಣದ ಕುಂಚಿಟಿಗ ಮಠದ ಆವರಣದಲ್ಲಿ ಗುರುವಾರ ನಡೆದ ವಿಜಯರಾಯ ಸಂಗಮೇಶ್ವರ ಪತ್ತಿನ ಸಹಕಾರ ಸಂಘದ ನೂತನ ಪದಾಧಿಕಾರಿಗಳಿಗೆ ಅಭಿನಂದನೆ ಹಾಗೂ ನಿರ್ಗಮಿತ ಪದಾಧಿಕಾರಿಗಳಿಗೆ ಅಭಿನಂದನಾ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು. ಪ್ರಾಮಾಣಿಕರು, ಮಾನವೀಯತೆ ಉಳ್ಳವರು ಸಹಕಾರದ ಸಂಘಗಳಲ್ಲಿ ಕರ್ತವ್ಯ ನಿರ್ವಹಿಸಿದರೆ ಬಡವರ ಕಣ್ಣೀರು ಒರೆಸಲು ಸಾಧ್ಯ. ಇಲ್ಲವಾದರೆ ತಮ್ಮ ಹಿಂಬಾಲಕರಿಗೆ ಕುಟುಂಬದವರಿಗೆ ತಮ್ಮ ಪಕ್ಷದವರಿಗೆ ಸಾಲ ನೀಡಿದರೆ ಅದು ಸಹಕಾರಿ ತತ್ವಕ್ಕೆ ಮಾಡಿದ ಅಪಚಾರವಾಗುತ್ತದೆ. ಸಹಕಾರಿ ಸಂಘಗಳ ಲಾಭಾಂಶಕ್ಕಿಂತ ಎಷ್ಟು ಬಡವರಿಗೆ ಸಹಾಯ ಮಾಡಿದ್ದೇವೆ ಎಂಬ ಆತ್ಮವಲೋಕನ ಅತ್ಯವಶ್ಯಕ. ನೂತನವಾಗಿ ಆಯ್ಕೆಯಾಗಿರುವ ನಿರ್ದೇಶಕರು, ಪದಾಧಿಕಾರಿಗಳು ಸಹಕಾರಿಗಳ ಸಮಸ್ಯೆಗಳನ್ನು ಅರಿತು ಅವರ ಸಂಕಷ್ಟಕ್ಕೆ ಸ್ಪಂದಿಸಲು ಎಂದು ಸಲಹೆ ನೀಡಿದರು.

> ಬಡವರಿಗೆ, ಅಸಹಾಯಕರಿಗೆ, ಅಬಲರಿಗೆ ಆರ್ಥಿಕ ಚೈತನ್ಯ ನೀಡುವ ಸಬಲೀಕರಣ ಮಾಡುವ ಮೂಲಕ ಆರ್ಥಿಕ ಪ್ರಗತಿಗೆ ಸಹಕಾರಿ ಸಂಘಗಳು ಮುಂದಾಗಬೇಕು. ಸಹಕಾರ ತಮ್ಮ ಹುಟ್ಟಿಕೊಂಡಿದ್ದೆ ಬಡತನ ಮುಕ್ತ ಸಮಾಜವನ್ನು ಕಟ್ಟುವ ಆಶಯದಿಂದ. ಆದರೆ ಇಂದಿನ ಪತ್ತಿನ ಸಹಕಾರ ಸಂಘಗಳು ಕೇವಲ ಉಳ್ಳವರಿಗೆ ರಿಯಲ್ ಎಸ್ಟೇಟ್ ಮಾಡುವ ಉದ್ಯಮಿಗಳಿಗೆ ಸಾಲ ನೀಡುವ ಮೂಲಕ ಲಾಭಾಂಶವನ್ನು ಹೆಚ್ಚಿಸಿಕೊಳ್ಳುತ್ತಿವೆ ಎಂದು ಬೇಸರಿಸಿದರು.

# ಪುರಸಭೆ ನಗರಸಭೆ ಮೇಲ್ದರ್ಜೆಗೇರಿಸಲು ಪ್ರಸ್ತಾವನೆ

## ಕೇಂದ್ರ ಪುರಸ್ಕೃತ ಅಮೃತ್ 2.0 ಪಟ್ಟಣಕ್ಕೆ ಕುಡಿಯುವ ನೀರು ವಿತರಣಾ ಯೋಜನೆ ಹಂತ 1 ಕಾಮಗಾರಿಗೆ ಭೂಮಿಪೂಜೆ

• ಉದಯವಾಹಿನಿ, ಮುದ್ದೇಬಿಹಾಳ


ಉದಯವಾಹಿನಿ ಚಿತ್ರ

ಸರ್ಕಾರದ ಯೋಜನೆ ಅಂದರೆ ಏನು ಬೇಕಾದರೂ ನಡೆಯುತ್ತೆ ಅನ್ನೋ ಮನೋಭಾವ ಹೋಗಬೇಕು. ಯೋಜನೆಗಳು ಯಶಸ್ವಿಯಾಗಬೇಕಾದರೆ ಸಾರ್ವನಿಕರ ಸಹಕಾರ ಅಗತ್ಯ. ಇಲಾಖೆಯವರು ಜನರೊಂದಿಗೆ ಸಮನ್ವಯತೆ ಸಾಧಿಸಬೇಕು. ಯೋಜನೆಗಳ ಸದುಪಯೋಗದ ಜವಾಬ್ದಾರಿ ಜನರದ್ದಾಗಿರಬೇಕು ಎಂದು ಶಾಸಕ, ಕರ್ನಾಟಕ ಸಾಬೂನು, ಮಾರ್ಜಕ ನಿಗಮದ ಅಧ್ಯಕ್ಷ ಸಿ.ಎಸ್.ನಾಡಗೌಡ ಹೇಳಿದರು.

ಪಟ್ಟಣದ ಪುರಸಭೆ ಎದುರು ವಿಜಯಪುರದ ಜಲಮಂಡಳಿ, ಪುರಸಭೆ ಸಂಯುಕ್ತ ಆಶ್ರಯದಲ್ಲಿ ಗುರುವಾರ ನಡೆದ ಕೇಂದ್ರ ಪುರಸ್ಕೃತ ಅಮೃತ 2.0 ಯೋಜನೆಯಡಿ ಮುದ್ದೇಬಿಹಾಳ ಪಟ್ಟಣಕ್ಕೆ ಕುಡಿಯುವ ನೀರು ವಿತರಣಾ ವ್ಯವಸ್ಥೆ ಕಲ್ಪಿಸುವ 30 ಕೋಟಿ ಅನುದಾನದ 24x7 ಯೋಜನೆಯ ಹಂತ–1 ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಹಲವು ವರ್ಷಗಳ ಹಿಂದೆ ಪಟ್ಟಣದ ಹೋಟೆಲುಗಳಲ್ಲಿ ಕೆರೆಯ ನೀರನ್ನು ಬಳಸುವ ಪರಿಸ್ಥಿತಿ ಇತ್ತು. ದೇಶಮುಖರು ಸಚಿವ ರಾಗಿದ್ದಾಗ ಕುಡಿಯುವ ನೀರಿನ ಯೋಜನೆ ಪ್ರಾರಂಭಿಸಿದರೂ ಪೂರ್ಣಗೊಳ್ಳಲಿಲ್ಲ. ಹಿಂದಿನ ದಿನಗಳಲ್ಲಿ ಲಕ್ಷಗಳ ಲೆಕ್ಕದಲ್ಲಿ ಮೊದಲನೇ ಹಂತ ಜಾರಿಗೊಂಡಿತು. ಈಗ ಯೋಜನಾ ವೆಚ್ಚ ಕೋಟಿ ಲೆಕ್ಕಕ್ಕೇರಿದೆ. 2ನೇ ಹಂತದ 24x7 ಯೋಜನೆಗೆ 30 ಕೋಟಿ ಸಿಕ್ಕಿದ್ದು ಇನ್ನೂ 17.45 ಕೋಟಿ ಸಿಗಲಿದೆ. 3ನೇ ಹಂತಕ್ಕಾಗಿ 15 ಕೋಟಿ ಕೇಳಿದ್ದೇವೆ. ಒಟ್ಟಾರೆ ಕುಡಿಯುವ ನೀರಿಗಾಗಿ ಪಟ್ಟಣಕ್ಕೆ 53–58 ಕೋಟಿ ಅನುದಾನ ಬಳಕೆಯಾಗಲಿದೆ ಎಂದರು. ಮುದ್ದೇಬಿಹಾಳ ಪಟ್ಟಣಜಿಲ್ಲೆಯಲ್ಲೇ ವೇಗವಾಗಿ ಬೆಳೆಯುತ್ತಿದ್ದು ನಗರವಾಗಿ ಗುತಿಸಿಕೊಳ್ಳುವುದರಿಂದ ಈಗಿರುವ ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಿದ್ದೇವೆ. ಅಕ್ಕಪಕ್ಕದ ಶಿರೋಳ, ಮುದ್ನಾಳ, ಹಡಲಗೇರಿ ಇನ್ನಿತರ ಸೇರಿಸಿಕೊಳ್ಳಲಿದ್ದೇವೆ ಎಂದರು. ಪುರಸಭೆ ಸದಸ್ಯೆ ಸಂಗಮ್ಮ ದೇವರಳ್ಳಿ ಮಾತನಾಡಿ ಗುತ್ತಿಗೆದಾರರು ರಸ್ತೆ ವಿರೂಪ ಗೊಳಿಸದೆ ಕೆಲಸ ಮಾಡಬೇಕು. ರಸ್ತೆ ಅಗೆಯುವ ಅವಶ್ಯಕತೆ ಎದುರಾದಲ್ಲಿ ಮತ್ತೆ ಮೊದಲಿನಂತೆ ರಸ್ತೆ ದುರಸ್ತಿಗೊಳಿಸಬೇಕು ಎಂದರು. ಪುರಸಭೆ ಅಧ್ಯಕ್ಷ ಮಹಿಬೂಬ ಗೊಳಸಂಗಿ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷೆ ಪ್ರೀತಿ ದೇನಾಳ, ಸ್ಥಾಯಿ ಸಮಿತಿ ಅಧ್ಯಕ್ಷ ಯಲ್ಲಪ್ಪ ನಾಯಕಮಕ್ಕಳ, ಗಣ್ಯರಾದ ಸಿ.ಪಿ.ಸಜ್ಜನ, ಸತೀಶಕುಮಾರ ಓಸ್ವಾಲ್, ಸಿ. ಎಲ್.ಬಿರಾದಾರ, ಗುರುಲಿಂಗಪ್ಪಗೌಡ ಪಾಟೀಲ, ಅಬ್ದುಲ್‌ಗಫೂರ ಮಕಾನದಾರ, ಗುರು ತಾರನಾಳ, ಕಾಮರಾಜ ಬಿರಾದಾರ, ಪ್ರಭುದೇವ ಕಲಬುರ್ಗಿ, ಪುರಸಭೆಯ ಚುನಾಯಿತ, ನಾಮನಿರ್ದೇಶಿತ ಸದಸ್ಯರು ವೇದಿಕೆಯಲ್ಲಿದ್ದರು. ಪಿಂಟು ಸಾಲಿಮನಿ ಸ್ವಾಗತಿಸಿದರು. ಶ್ರೀಶೈಲ ಹೂಗಾರ ನಿರೂಪಿಸಿ ವಂದಿಸಿದರು. ಇದಕ್ಕೂ ಮುನ್ನ ಮಾಧ್ಯಮದವರು ಶಾಸಕರ ಬಳಿ ತೆರಳಿ 30 ಕೋಟಿ ಕಾಮಗಾರಿಯ ಭೂಮಿ ಪೂಜಾ ಕಾರ್ಯಕ್ರಮಕ್ಕೆ ಮಾಧ್ಯಮದವರನ್ನು ಆಹ್ವಾನಿಸುವಲ್ಲಿ, ಆಮಂತ್ರಣ ಪತ್ರಿಕೆ ನೀಡುವಲ್ಲಿ ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ನಡವಳಿಕೆಯನ್ನು ಖಂಡಿಸಿದರು. ಇದರಿಂದ ಅಸಮಾಧಾನಗೊಂಡ ಶಾಸಕರು ಸಂಬಂಧಿಸಿದ ಅಧಿಕಾರಿಗಳನ್ನು ಕರೆದು ತರಾಟೆಗೆ ತೆಗೆದುಕೊಂಡರು. ಇನ್ನೊಮ್ಮೆ ಇಂಥ ಲೋಪ ನಡೆಯದಂತೆ ನೋಡಿಕೊಳ್ಳುವುದಾಗಿ ತಿಳಿಸಿ ಘಟನೆಗೆ ವಿಷಾಧಿಸಿದರು. ಕಾರ್ಯಕ್ರಮದಲ್ಲಿ ಜನರ ಕೊರತೆ ಕಂಡು ಶಾಸಕರು ಅಧಿಕಾರಿಗಳ ವೈಫಲ್ಯವನ್ನೂ ಟೀಕಿಸಿದರು.

> ಕಾರ್ಯಕ್ರಮದ ಕೊನೇ ಹಂತದಲ್ಲಿ ಶಾಸಕರು ದಿಢೀರ್ ಅಸ್ವಸ್ಥರಾದರು. ತಕ್ಷಣ ವೈದ್ಯರನ್ನು ಕರೆಸಿ ಪ್ರಾಥಮಿಕ ಚಿಕಿತ್ಸೆ ಕೊಡಿಸಲಾಯಿತು. ಸುಧಾರಿಸಿದ ನಂತರ ಕಾರ್‌ನಲ್ಲಿ ಹುಡ್ಕೋ ಸ್ವಗೃಹಕ್ಕೆ ಕರೆದೊಯ್ಯಲಾಯಿತು. ಶಾಸಕರು ಬುಧವಾರ ಅಯ್ಯನಗುಡಿ ಉತ್ಸವದ ಹೋಮ ಹವನದಲ್ಲಿ, ರಾತ್ರಿ ಒಂದೂವರೆ ಗಂಟೆಯವರೆಗೂ ಖಾಸಗಿ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದರಿಂದ ವಿಶ್ರಾಂತಿ ಇಲ್ಲದೆ ಹೀಗಾಗಿದೆ ಎಂದು ಶಾಸಕರ ಆಪ್ತರು ತಿಳಿಸಿದರು.

### 18 ತಿಂಗಳ ಕಾಲಾವಧಿ

ವಿಜಯಪುರದ ಕರ್ನಾಟಕ ನಗರ ನೀರು ಸರಬರಾಜು, ಒಳ ಚರಂಡಿ ಮಂಡಳಿಯ ಕಾರ್ಯಪಾಲಕ ಅಭಿಯಂತರ ಗೋವಿಂದ ಎಸ್ ಅವರು ಮಾತನಾಡಿ ಈಗಿನ ಕೆಲಸವನ್ನು ಸಿವೆಟ್ ಕಂಪನಿ ಗುತ್ತಿಗೆ ಹಿಡಿದಿದ್ದು ಕೆಲಸ ಪೂರ್ಣಗೊಳಿಸಲು 18 ತಿಂಗಳ ಕಾಲಾವಧಿ ಇದೆ. ಪ್ರತಿ ಮನೆಯನಲ್ಲಿಗೆ ಮೀಟರ್ ಕೂಡಿಸಿ ನೀರು ಹರಿಸಲಾಗುತ್ತದೆ. ಮಂಡಳಿಯೇ ಅದನ್ನು ನಿರ್ವಹಣೆ ಮಾಡುತ್ತದೆ ಎಂದು ಯೋಜನೆಯ ಸ್ಥೂಲ ಪರಿಚಯ ಮಾಡಿಕೊಟ್ಟರು.

## ಮಿನಿ ನ್ಯೂಸ್

### ಬೀದರ್ ಜಿಲ್ಲೆಯಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಿ ಉದ್ಯೋಗ ಅಭಿವೃದ್ಧಿಪಡಿಸಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೀದರ್

ನವದೆಹಲಿಯಲ್ಲಿ ಕೇಂದ್ರ ಬೃಹತ್ ಉದ್ಯಮ, ಉಕ್ಕು ಸಚಿವರಾದ ಎಚ್.ಡಿ. ಕುಮಾರಸ್ವಾಮಿಯವರನ್ನು ಬೀದರ ಜಿಲ್ಲಾ ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ ಅವರ ನೇತೃತ್ವದಲ್ಲಿ ಬಸವಕಲ್ಯಾಣ ಶಾಸಕರಾದ ಶರಣು ಸಲಗರ, ಮಾಜಿ ಸಚಿವರಾದ ಬಂಡೆಪ್ಪ ಖಾಸೆಂಪುರ್ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪೀರಪ್ಪ ಔರಾದೆ, ಕಿರಣ್ ಪಾಟೀಲ, ರಾಜ್ಯ ಪ್ರಶಿಕ್ಷಣ ಸಂಚಾಲಕರಾದ ರಾಜಶೇಖರ್ ನಾಗಮೂರ್ತಿ ಅವರುಗಳು ಭೇಟಿ ಮಾಡಿ ಕೇಂದ್ರ ಸಚಿವರಿಗೆ ಮನವಿ ಸಲ್ಲಿಸಿ ಬೀದರ ಜಿಲ್ಲೆಯಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಿ ಯುವಕರಿಗೆ ಉದ್ಯೋಗ ಕಲ್ಪಿಸಿ ಹಿಂದುಳಿದ ಜಿಲ್ಲೆಯ ಅಭಿವೃದ್ಧಿಗೆ ಸಹಕರಿಸಬೇಕೆಂದು ಮನವಿ ಮಾಡಿದರು.

### ಶಿಕ್ಷಕ ಹುದ್ದೆ ಆಕಾಂಕ್ಷಿಗಳಿಗೆ ಶೀಘ್ರವೇ 16 ಸಾವಿರ ಶಿಕ್ಷಕರ ನೇಮಕಾತಿ

• ಉದಯವಾಹಿನಿ, ದಾವಣಗೆರೆ

ಶಿಕ್ಷಕ ಹುದ್ದೆ ಆಕಾಂಕ್ಷಿಗಳಿಎ ಶಿಕ್ಷಣ ಸಚಿವ ಮಧು ಬಂಗಾರಪ್ಪ ಭರ್ಜರಿ ಸಿಹಿಸುದ್ದಿಯೊಂದನ್ನು ನೀಡಿದ್ದು ಶೀಘ್ರವೇ ಕಲ್ಯಾಣ ಕರ್ನಾಟಕದ 6,000 ಸೇರಿದಂತೆ 16,000 ಶಿಕ್ಷಕರ ನೇಮಕಾತಿ ಮಾಡಿಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ.ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ 13 ಸಾವಿರ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಿದ್ದೇವೆ.

ಶೀಘ್ರವಾಗಿ ಕಲ್ಯಾಣ ಕರ್ನಾಟಕದ 6 ಸಾವಿರ ಸೇರಿದಂತೆ ರಾಜ್ಯದಲ್ಲಿ 16 ಸಾವಿರ ಶಿಕ್ಷಕರ ನೇಮಕಾತಿಯನ್ನು ಮಾಡಿಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ. ಇನ್ನು ನಮ್ಮ ಶಾಲೆ ನಮ್ಮ ಜವಾಬ್ದಾರಿ ಯೋಜನೆಗೆ ಅಭೂತಪೂರ್ವ ಪ್ರತಿಕ್ರಿಯೆ ವ್ಯಕ್ತವಾಗಿದೆ. ಇದಕ್ಕಾಗಿ 39 ಸಾವಿರ ವಾಟ್ಸಪ್ ಗ್ರೂಪ್ ಗಳನ್ನು ಮಾಡಿದ್ದೇವೆ. 5 ಸಾವಿರ ರೂ. ನಿಂದ 5 ಕೋಟಿಯವರೆಗೂ ಅನುದಾನ ಬಂದಿದೆ. ಏಷ್ಯನ್ ಡೆವಲ ಪಪ್ ಮೆಂಟ್ ಬ್ಯಾಂಕ್ (ಎಡಿಬಿ ಬ್ಯಾಂಕ್) ಇತರ ಮೂಲಗಳಿಂದ ಅನುದಾನ ಬರುತ್ತಿದೆ ಎಂದು ಹೇಳಿದ್ದಾರೆ.

### 1.30 ಕೋಟಿ ವೆಚ್ಚದ ಕಾಮಗಾರಿ ಪರಿಶೀಲನೆ

• ಉದಯವಾಹಿನಿ, ಶಹಾಪುರ

ತಾಲ್ಲೂಕಿನ ಭೀಮರಾಯನಗುಡಿ ರಾಷ್ಟ್ರೀಯ ಹೆದ್ದಾರಿಯಿಂದ ಶಾಖಪುರ ತಾಂಡದವರೆಗೆ 1.30 ಕೋಟಿ ವೆಚ್ಚದ 1.2 ಕಿ.ಮೀ ರಸ್ತೆ ಡಾಂಬರೀಕರಣ ಹಾಗೂ ರಸ್ತೆ ಬದಿಗೆ ಮುಖ್ಯ ಕಾಲುವೆಗೆ ವಿಶೇಷ ತಂತಿ ಬೇಲಿ ಜೋಡಿಸುವ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ ತಿಳಿಸಿದರು. ರಸ್ತೆ ಕಾಮಗಾರಿಯನ್ನು ಬುಧವಾರ ಪರಿಶೀಲಿಸಿ ಮಾತ ನಾಡಿದ ಅವರು, 'ಕೆಕೆಆರ್‌ಡಿಬಿ ಅನುದಾನದಡಿ ಕಾಮಗಾರಿ ಕೈಗೊಳ್ಳಲಾಗಿದೆ. ತಾಂಡಾ ಜನರಿಗೆ ಮುಖ್ಯರಸ್ತೆ ಸಮೀಪವಾಗಲಿದ್ದು, ಸಂಚಾರಕ್ಕೆ ಅನುಕೂಲವಾಗಲಿದೆ. ಯಾವುದೇ ಕಾರಣಕ್ಕೆ ಭಾರವಿರುವ ವಾಹನಗಳು ಈ ರಸ್ತೆಯಲ್ಲಿ ಸಂಚರಿಸುವಂತಿಲ್ಲ' ಎಂದರು.

ಎತ್ತರದ ನಿರ್ಬಂಧ ತಡೆ ಹಾಕಲು ಎಂಜಿನಿಯರ್‌ಗಳಿಗೆ ಸೂಚಿಸಿದರು. ಕಾಂಗ್ರೆಸ್ ಪಕ್ಷದ ಮುಖಂಡರಾದ ಶಿವಮಹಾಂತ ಚಂದಾಪುರ, ಉಮೇಶ ರಾಠೋಡ, ರಾಮು ರಾಠೋಡ, ಭೋಜು ನಾಯಕ, ಶಿವರಾಜ ರಾಠೋಡ, ರಮೇಶ ಗ್ರಾ.ಪಂ ಸದಸ್ಯರು ಉಪಸ್ಥಿತರಿದ್ದರು.

### ಮಹಾಲಕ್ಷ್ಮಿಗೆ ಅತ್ಯುತ್ತಮ ಕಾಯಕ ಬಂಧು ಪ್ರಶಸ್ತಿ

• ಉದಯವಾಹಿನಿ, ಯರಗೋಳ

ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಇಲಾಖೆ ವತಿಯಿಂದ 2023–24ನೇ ಸಾಲಿನ ಅತ್ಯುತ್ತಮ ಕಾಯಕ ಬಂಧು (ಮೇಟ್) ಪ್ರಶಸ್ತಿಗೆ ಯರಗೋಳ ಗ್ರಾಮ ಪಂಚಾಯಿತಿಯ ಮಹಾಲಕ್ಷ್ಮಿ ಆಯ್ಕೆಯಾಗಿದ್ದಾರೆ. ಮಹಾತ್ಮ ಗಾಂಧಿ ನರೇಗಾ ಯೋಜನೆ ಅನುಷ್ಠಾನದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿವಿಧ ಹಂತದ ಪಂಚಾಯಿತಿಗಳು ಮತ್ತು ಅನುಷ್ಠಾನ ಇಲಾಖೆಯ ನೌಕರರು ಹಾಗೂ ಸಿಬ್ಬಂದಿಗೆ ಬೆಂಗಳೂರಿನಲ್ಲಿ ನಡೆದ ನರೇಗಾ ಹಬ್ಬ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವ ಪ್ರಿಯಾಂಕ್ ಖರ್ಗೆ ಮಹಾಲಕ್ಷ್ಮಿ ಅವರಿಗೆ ಪ್ರಶಂಸನ ಪತ್ರ ನೀಡಿದರು. ಪ್ರಶಸ್ತಿಗೆ ಆಯ್ಕೆಯಾದ ಕಾಯಕ ಬಂಧು ಮಹಾಲಕ್ಷ್ಮೀ ಯರಗೋಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಥಾವರನಾಯಕ ತಾಂಡಾ, ತಾನು ನಾಯಕ ತಾಂಡಾದಲ್ಲಿ 400 ನರೇಗಾ ಕಾರ್ಮಿಕರನ್ನು ಸಂಘಟಿಸಿ ಕೆರೆ ಹೂಳು ಎತ್ತುವುದು, ಗದ್ದೆಗಳಲ್ಲಿ ಬದು ನಿರ್ಮಾಣ ಕಾರ್ಯ ನಿರ್ವಹಿಸಿದ್ದಾರೆ. ಪ್ರಶಸ್ತಿ ಬಂದಿರುವುದು ಸಂತಸ ತಂದಿದೆ ಎಂದು ಮಹಾಲಕ್ಷ್ಮಿ ಹೇಳಿದರು.

### ದುರ್ಗಾದೇವಿಯ ರಥೋತ್ಸವ

• ಉದಯವಾಹಿನಿ, ವಡಗೇರಾ

ವಡಗೇರಾ ತಾಲ್ಲೂಕಿನ ಪ್ರಸಿದ್ಧ ಗೋನಾಲ ಗ್ರಾಮದ ದುರ್ಗಾದೇವಿಯ ಜಾತ್ರೆಯ ರಥೋತ್ಸವ ಗುರುವಾರ ವಿಜೃಂಭಣೆಯಿಂದ ಜರುಗಿತು. ರಥವನ್ನು ಫಲ ಪುಷ್ಪಗಳಿಂದ ಅಲಂಕರಿಸಲಾಗಿತ್ತು ರಥೋತ್ಸವನ್ನು ಎಳೆಯುವ ಸಮಯದಲ್ಲಿ ಭಕ್ತರು ಉತ್ತತ್ತಿ, ಬಾಳೆಹಣ್ಣು ಎಸೆದು ಹರಕೆ ಸಮರ್ಪಿಸಿದರು. ರಥೋತ್ಸವದ ನಂತರ ಜೋಗುತಿ ಕುಣಿತ, ರಾತ್ರಿ ಭಜನಾ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ದೇವಾಲಯದ ಸಮಿತಿಯ ವತಿಯಿಂದ ಆಯೋಜಿಸಲಾಗಿತ್ತು ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆದವು.ಈ ಜಾತ್ರೆಗೆ ಕರ್ನಾಟಕ, ಆಂಧ್ರ, ತೆಲಂಗಾಣ, ಮಹಾರಾಷ್ಟ್ರ, ಗುಜರಾತ್, ಇತರ ರಾಜ್ಯಗಳಿಂದ ಭಕ್ತರು ಪಾಲ್ಗೊಂಡಿದ್ದರು.

**ವ್ಯಾಪಾರ ಜೋರು:** ಜಾತ್ರೆಯಲ್ಲಿ ಬೆಂಡು, ಬತ್ತಾಸು, ಮಂಡಾಳು, ಜಿಲೇಬಿ, ಖಾರಾ, ಭಜಿ, ವಿವಿಧ ಆಟಿಕೆ ಸಾಮಾನುಗಳ ಖರೀದಿ ಜೋರಾಗಿತ್ತು. ಭಕ್ತರಿಗೆ ದೇವಸ್ಥಾನ ಸಮಿತಿ ವತಿಯಿಂದ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.ಜಾತ್ರೆಯಲ್ಲಿ ಅಹಿತಕರ ಘಟನೆಗಳು ನಡೆಯದಂತೆ ಯಾದಗಿರಿ ಸಿಪಿಐ ಸುನೀಲ್ ಮೂಲಿಮನಿ ಮಾರ್ಗದರ್ಶನದಲ್ಲಿ ವಡಗೇರಾ ಪೊಲೀಸ್ ಠಾಣೆ ಪಿಎಸ್ಐ ಮೈಬೂಬ ಅಲಿ ನೇತೃತ್ವದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ** ಸಾಮಾನ್ಯ ಜ್ಞಾನದ ಜೊತೆಗೆ ನಿಮ್ಮ ನಿರಂತರ ಪ್ರಯತ್ನ ಖಂಡಿತ ವಾಗಿಯೂ ಯಶಸ್ಸು ತರುವುದರಿಂದ ತಾಳ್ಮೆಯಿಂದಿರಿ. ಸಹೋದರ -ಸಹೋದರಿಯರಲ್ಲಿ ಒಬ್ಬರು ನಿಮ್ಮಿಂದ ಹಣವನ್ನು ಎರವಲು ಪಡೆಯಬಹುದು.

**ವೃಷಭ** ನಿಮ್ಮ ಮನಸ್ಸು ಒಳ್ಳೆಯ ವಿಷಯಗಳನ್ನು ಗ್ರಹಿಸುತ್ತದೆ. ಮನೆಯ ಸಣ್ಣ ವಸ್ತುಗಳ ಮೇಲೆ ನಿಮ್ಮ ಸಾಕಷ್ಟು ಹಣ ಹಾಳಾಗಬಹುದು, ಇದರ ಕಾರಣದಿಂದ ನೀವು ಮಾನಸಿಕ ಒತ್ತಡಗೊಳಗಾಗಬಹುದು.

**ಮಿಥುನ** ಅನಂತ ಚೈತನ್ಯ ಮತ್ತು ಉತ್ಸಾಹ ನಿಮ್ಮನ್ನು ಆವರಿಸುತ್ತದೆ ಮತ್ತು ನೀವು ಯಾವುದೇ ಅವಕಾಶವನ್ನು ನಿಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತೀರಿ. ಯಾವುದೇ ದೀರ್ಘಕಾಲೀನ ಹೂಡಿಕೆಗಳನ್ನು ತಪ್ಪಿಸಿ.

**ಕರ್ಕಾಟಕ** ಇತ್ತೀಚಿಗೆ ನಿಮಗೆ ಹತಾಶೆಯೆನಿಸುತ್ತಿದ್ದಲ್ಲಿ ಇಂದು ಸರಿಯಾದ ಆಲೋಚನೆಗಳು ಹಾಗೂ ಕಾರ್ಯಗಳು ನಿಮಗೆ ಅಗತ್ಯವಿರುವ ಸಮಾಧಾನವನ್ನು ತರುತ್ತವೆ ಎಂದು ನೀವು ನೆನಪಿಡಬೇಕು.

**ಸಿಂಹ** ನೀವು ವ್ಯಾಯಾಮದ ಮೂಲಕ ನಿಮ್ಮ ತೂಕವನ್ನು ನಿಯಂತ್ರಿಸಬಹುದು. ನಿಧಿಗಳ ಹಠಾತ್ ಒಳಹರಿವು ನಿಮ್ಮ ಪಾವತಿಗಳು ಮತ್ತು ತಕ್ಷಣದ ವೆಚ್ಚಗಳನ್ನು ನೋಡಿಕೊಳ್ಳುತ್ತದೆ.

**ಕನ್ಯಾ** ನಿಮ್ಮ ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ ಮತ್ತು ನೀವು ಒಂದು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ. ಇಂದು ಈ ರಾಶಿ ಚಕ್ರದ ಕೆಲವು ನಿರುದ್ಯೋಗಿಗಳಿಗೆ ಉದ್ಯೋಗ ಸಿಗಬಹುದು.

**ತುಲಾ** ಮಕ್ಕಳ ಅವರ ಸಾಧನೆಗಳಿಂದ ನೀವು ಹೆಮ್ಮೆ ಪಡುವಂತೆ ಮಾಡಬಹುದು. ನೀವು ನಿಮ್ಮ ಪ್ರೀತಿಪಾತ್ರರನ್ನು ಅವಳ ಹಿಂದಿನ ಉದಾಸೀನತೆಯನ್ನು ಮನ್ನಿಸುವ ಮೂಲಕ ನಿಮ್ಮ ಜೀವನವನ್ನು ಮೌಲ್ಯಯುತವಾಗಿಸುತ್ತೀರಿ.

**ವೃಶ್ಚಿಕ** ನೀವು ಸುತ್ತಲಿರುವವರು ನಿಮಗೆ ಬೆಂಬಲ ನೀಡುವುದರಿಂದ ನೀವು ಸಂತೋಷವಾಗಿರುವಿರಿ. ನಿಮಗೆ ತಿಳಿದ ಜನರ ಮೂಲಕ ಆದಾಯದ ಹೊಸ ಮೂಲಗಳು ಕಂಡುಬರುತ್ತವೆ.

**ಧನಸ್ಸು** ಇಂದು, ನಿಮ್ಮ ಆರೋಗ್ಯವು ಆರೋಗ್ಯಕರವಾಗಿರುತ್ತದೆ ಎಂದು ನಿರೀಕ್ಷಿಸಲಾಗಿದೆ. ಇಂದು ಯಾವುದೇ ಸಹಾಯವಿಲ್ಲದೆ, ನೀವು ಹಣವನ್ನು ಗಳಿಸುವಲ್ಲಿ ಸಾಮರ್ತ್ಯರಾಗಿರುತ್ತೀರಿ.

**ಮಕರ** ಖಿನ್ನತೆಯನ್ನು ಹೊಡೆದೋಡಿಸಿ. ಇದ ನಿಮ್ಮನ್ನು ಆವರಿಸಿಕೊಳ್ಳುತ್ತಿದೆ ಮತ್ತು ನಿಮ್ಮ ಪ್ರಗತಿಗೆ ಅಡ್ಡಿಪಡಿಸುತ್ತಿದೆ. ನಿಕಟ ಸಂಬಂಧಿಗಳ ಮನೆಗೆ ಹೋಗುವುದರಿಂದ ಇಂದು ನಿಮ್ಮ ಆರ್ಥಿಕ ಪರಿಸ್ಥಿತಿ ಹಾಳಾಗಬಹುದು.

**ಕುಂಭ** ಹೊರಾಂಗಣ ಕ್ರೀಡೆ ನಿಮ್ಮನ್ನು ಸೆಳೆಯುತ್ತದೆ-ಧ್ಯಾನ ಮತ್ತು ಯೋಗ ಲಾಭ ತರುತ್ತವೆ. ಇಂದು ಹಣದ ಆಗಮನವು ನಿಮ್ಮನ್ನು ಯಾವುದೇ ಸಮಸ್ಯೆಗಳಿಂದ ಮುಕ್ತಗೊಳಿಸಬಹುದು.

**ಮೀನ** ದ್ವೇಷ ಪ್ರೀತಿಗಿಂತ ಹೆಚ್ಚು ಶಕ್ತಿಶಾಲಿಯಾಗಿದ್ದು ನಿಮ್ಮ ದೇಹದ ಮೇಲೆ ಪ್ರಾಣಾಂತಿಕ ಪರಿಣಾಮ ಬೀರುವದರಿಂದ ನಿಮ್ಮ ದ್ವೇಷವನ್ನು ಸಾಯಿಸಲು ಒಂದು ಸಮರಸದ ಸ್ವಭಾವವನ್ನು ರೂಪಿಸಿಕೊಳ್ಳಿ.

# ತೊಗರಿ ಕಟಾವು ಮಾಡಿದ ಕಟ್ಟಿಗೆಯ ಪುಡಿ ಸಾಗಾಟ, ವಾಹನ ಸವಾರರಿಗೆ ತೊಂದರೆ

## • ಅಕ್ರಮ ಕಪ್ಪು-ಕೆಂಪು ಮರಳು, ಕೆಂಪು ಮಣ್ಣು, ಸವಳು ಮಣ್ಣು, ಗಣಿಗಾರಿಕೆಗೆ ಕಡಿವಾಣ ಯಾವಾಗ?

**ಉದಯವಾಹಿನಿ ವಿಶೇಷ ವರದಿ**

• ಮಹೇಬೂಬಶಾ ಅಣವಾರ

• ಉದಯವಾಹಿನಿ ಚಿಂಚೋಳಿ

ತಾಲ್ಲೂಕಿನ ರೈತರ ಹೊಲಗದ್ದೆಗಳಲ್ಲಿ ಬೆಳೆದ ತೊಗರಿಬೇಳೆಯ ಕಟಾವು ಆದನಂತರ ಅದರ ಕಟ್ಟಿಗೆಯನ್ನು ಪಟ್ಟಣದ ಹೊರವಲಯದಲ್ಲಿರುವ ಪವರ್ ಫ್ಲಾಂಟ್ ಕಾರ್ಖಾನೆಯವರು ಖರೀದಿಸಿ ಅದನ್ನು ಪುಡಿಮಾಡಿ ಟ್ರ್ಯಾಕ್ಟರ್ ಮೂಲಕ ತೆಗೆದುಕೊಂಡು ಹೋಗುತ್ತಿದ್ದು ಟ್ರ್ಯಾಕ್ಟರ್‌ನಲ್ಲಿ ಎರಡು ಬದಿಯಲ್ಲಿ ಕೆಳಗಡೆ ಜೋತು ಬಿಳುತ್ತಿದರು ಹಾಗೆಯೇ ತೆಗೆದುಕೊಂಡು ಹೋಗುತ್ತಿರುವುದರಿಂದ ಹಿಂದುಗಡೆ ಮುಂದೆ ಬರುವ ವಾಹನಗಳು ಕಾಣದೆ ಅಪಾಯಕ್ಕೆ ಅಹ್ವಾನಿಸುತ್ತಿದೆ ಸವಾರರು ಭಯದಿಂದ ವಾಹನ ಸಂಚಾರ ಮಾಡುತ್ತಿರುವುದು ಕಂಡುಬರುತ್ತಿದೆ.

ತಾಲ್ಲೂಕಿನಾದ್ಯಂತ ಈಗಾಗಲೇ 80 ಪ್ರತಿಶತಃ ತೊಗರಿಬೇಳೆ ಕಟಾವು ಆಗಿದೆ ಆದರೆ ಅದರ ಕಟ್ಟಿಗೆಯು ಕಾರ್ಖಾನೆಯವರು ರೈತರ ಜಮೀನಿನಲ್ಲಿ ಪುಡಿಮಾಡಿ





ಉದಯವಾಹಿನಿ ಚಿತ್ರ

ತೆಗೆದುಕೊಂಡು ಕಾರ್ಖಾನೆಗೆ ಟ್ರ್ಯಾಕ್ಟರ್ ಮೂಲಕ ಸಾಗಾಟ ಮಾಡುತ್ತಿರುವುದು ಡಾಂಬರಿಕರಣ ರಸ್ತೆಗಳ ಮೇಲೆ ಕಾಣಬಹುದು.

**ಸವಾರರಿಗೆ ಬಹಳಷ್ಟು ತೊಂದರೆ**

ಆದರೆ ಸಾಗಾಟ ಮಾಡುತ್ತಿರುವಾಗ ಬೇರೆ ವಾಹನಗಳಾದ ಕಾರು ಜೀಪು ಬೈಕ್ ಸವಾರರಿಗೆ ಬಹಳಷ್ಟು ತೊಂದರೆ ಆಗುತ್ತಿದೆ ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳು ವಿಫಲರಾಗಿದ್ದಾರೆ,ಯಾರಿಗಾದರೂ ಅನಾಹುತ ಆದರೆ ಯಾರು ಹೊಣೆ ಎಂಬುವುದು ಪ್ರೆಶ್ನೆ ಸಾರ್ವಜನಿಕರಲ್ಲಿ ಮೂಡಿದೆ. ತಾಲ್ಲೂಕಿನಾದ್ಯಂತ ಒಂದೆಡೆ ಅಕ್ರಮ ಕೇಂಪು ಮಣ್ಣು ಸಾಗಾಟ ಜೋರಾಗಿ ನಡೆಯುತ್ತಿದರೆ ಮತ್ತೊಂದೆಡೆ ಅಕ್ರಮವಾಗಿ ಲೀಜ್ ಪಡೆಯದೆ ಸವಳು (ಸುದ್ದ) ಸಾಗಾಟ ಜೋರಾಗಿ ನಡೆಯುತ್ತಿದರೆ ಇನ್ನೊಂದೆಡೆ ಅಕ್ರಮವಾಗಿ ಮರಳು ಮಾಫಿಯಾ ಭರ್ಜರಿಯಾಗಿ ಸಾಗುತ್ತಿದೆ ಹಾಗೂ ಅಕ್ರಮವಾಗಿ ಗಣಿಗಾರಿಕೆ ಮತ್ತು ಪೆಟ್ರೋಲ್ ಡಿಸೇಲ್ ಮಾಫಿಯಾ ಹೀಗೆ ಐದಾರು ರೀತಿಯಲ್ಲಿ ಅಕ್ರಮವಾಗಿ ನಡೆಯುತ್ತಿದರು ತಡೆಗಟ್ಟುವ ನಿಟ್ಟಿನಲ್ಲಿ ಅಧಿಕಾರಿಗಳು ತಾಲ್ಲೂಕಾಡಳಿತ ಮೌನವಹಿಸಿದ್ದಾರೆ.

ಅತಿಯಾದ ಭಾರವುಳ್ಳ ಟ್ರಕ್‌ಗಳು ಲಾರಿಗಳು ಟಿಪ್ಪರ್ ಗಳು ರಸ್ತೆಗಳೆಲ್ಲಾ ಹದಗೆಟ್ಟು ಹೋಗುತ್ತಿವೆ ಮತ್ತು ಕುಂಚಾವರಂ ವನ್ಯಜೀವಿ ಧಾಮದ ರಸ್ತೆಗೆ ಪ್ರಾಣಿಪಕ್ಷಿಗಳಿಗೂ ಜೀವಕ್ಕೆ ಹಾನಿಕೂಡವಿದೆ,ಬೈಕ್ ಸವಾರಿಗೂ ತೊಂದರೆ ಹೀಗೆ ಕೇಂಪು ಮಣ್ಣು ಟಿಪ್ಪರ್ ಹಾಗೂ ಲಾರಿಗಳು ಬಹಳಷ್ಟು ವನ್ಯಜೀವಿ ಧಾಮದಲ್ಲಿ ಉರುಳಿ ಬಿದ್ದಿವೆ ಹೀಗೆ ಹಲವಾರು ರೀತಿಯಲ್ಲಿ ಜನರು ತೊಂದರೆ ಅನುಭವಿಸುತ್ತಿದ್ದಾರೆ. ಇದರಿಂದ ಸಾರ್ವಜನಿಕರಲ್ಲಿ ಸಂಶಯಕ್ಕೆ ಎಡೆಮಾಡಿಕೊಟ್ಟಿದೆ. ಈಗಾಲಾದರೂ ತಾಲ್ಲೂಕಾಡಳಿತ ಜಿಲ್ಲಾಡಳಿತ ಮತ್ತು ಅಧಿಕಾರಿಗಳು ತಡೆಗಟ್ಟುತ್ತಾರೆಯೋ ಇಲ್ಲವೊ ಕಾದುನೋಡಬೇಕಾಗಿದೆ.



ತಾಲ್ಲೂಕಿನಾದ್ಯಂತ ಕಾಂಗ್ರೇಸ್ ಸರ್ಕಾರ ಅಧಿಕಾರಕ್ಕೆ ಬಂದನಂತರ ಸರ್ಕಾರದ ಕುಮ್ಮಕ್ಕುದಿಂದ ಅನೇಕ ಅಕ್ರಮ ಗಣಿಗಾರಿಕೆ,ಅಕ್ರಮ ಸವಳು,ಅಕ್ರಮ ಮರಳು ಮಾಫಿಯಾ,ಕೇಂಪು ಮಣ್ಣು ಸಾಗಾಟ,ಪೆಟ್ರೋಲ್ ಡಿಸೇಲ್ ಮಾಫಿಯಾ, ಸೇರಿದಂತೆ ಸಾಗಾಟ ನಡೆಯುತ್ತಿದೆ ಇದಕ್ಕೆ ಅಧಿಕಾರಿಗಳು ಸಹ ಸರ್ಕಾರದ ಆದೇಶದಂತೆ ಮೌನವಹಿಸಿದ್ದಾರೆ. ತೊಗರಿಬೇಳೆ ಕಟಾವು ನಂತರ ಕಟ್ಟಿಗೆ ಪುಡಿಮಾಡಿ ಪವರ್ ಪ್ಲ್ಯಾಂಟ್ ಗೆ ಸಾಗಾಟ ಮಾಡುತ್ತಿರುವುದರಿಂದ ಹಿಂದೆ ಮುಂದೆ ಬರುವ ಸವಾರರಿಗೆ ರಸ್ತೆಯೇ ಕಾಣುತ್ತಿಲ್ಲಾ ಟ್ರ್ಯಾಕ್ಟರ್‌ನಲ್ಲಿ ಎರಡು ಬದಿಯಲ್ಲಿ ಬಹಳಷ್ಟು ಅಗಲವಾಗಿ ತುಂಬಿಕೊಂಡು ಸಾಗಾಟ ಮಾಡುತ್ತಿರುವುದರಿಂದ ವಾಹನ ಸವಾರರಿಗೆ ಅಪಾಯಕ್ಕೆ ಆಹ್ವಾನಿಸುತ್ತಿದೆ,ಹಾಗೂ ರಸ್ತೆಗಳು ಹದಗೆಟ್ಟು ಹೋಗುತ್ತಿವೆ ತಾಲ್ಲೂಕಾಡಳಿತ ಮತ್ತು ಅಧಿಕಾರಿಗಳು ಶೀಘ್ರದಲ್ಲೇ ತಡೆಗಟ್ಟಬೇಕು ಮುಂದೆ ಆಗುವ ಅನಾಹುತಕ್ಕೆ ತಡೆಗಟ್ಟಬೇಕು ಇಲ್ಲದಿದ್ದರೆ ಯಾವುದೇ ಅನಾಹುತ ಆದರೆ ಅದಕ್ಕೆ ನೇರವಾಗಿ ಅಧಿಕಾರಿಗಳೆ ನೇರೆಹೊಣೆಯಾಗಲಿದ್ದಾರೆ

- ಶ್ರೀಮಂತ ಕಟ್ಟಿಮನಿ, ಅಧ್ಯಕ್ಷರು ವಕೀಲರ ಸಂಘ ಚಿಂಚೋಳಿ.

# ಸುಮಾರು ವರ್ಷಗಳ ರಸ್ತೆ ಸಮಸ್ಯೆ ಬಗೆಹರಿಸಿದ ನಗರಸಭೆ ಅಧ್ಯಕ್ಷ ಎಂ. ಶಮಿವುಲ್ಲಾ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಹಾಸನ

ಅರಸೀಕೆರೆಯ ನಗರದ ತಾಲ್ಲೂಕು ಕಚೇರಿಯ ಹಿಂಭಾಗದಲ್ಲಿರುವ ಬಡಾವಣೆ ಒಂದರ ಮನೆಯು ರಸ್ತೆಗೆ ನಿರ್ಮಾಣವಾಗಿ ಸುಮಾರು ವರ್ಷಗಳಿಂದಲೂ ಆ ಮನೆಯಲ್ಲಿ ಒಂದು ಕುಟುಂಬ ವಾಸವಾಗಿದ್ದರು ಇದರಿಂದ ಇತ್ತೀಚಿಗೆ ಜೆಪಿಎನ್ ಬಡಾವಣೆ ಎಂಬ ಹೆಸರಿನಿಂದ ಸುಮಾರು 45 ನಾಗರಿಕರು ಈ ಬಡಾವಣೆಯಲ್ಲಿ ನಿವೇಶನವನ್ನು ಕೊಂಡುಕೊಂಡಿದ್ದರು.

ಬಡಾವಣೆ ನಿರ್ಮಾಣವಾಗಿ ನಿವೇಶಗಳನ್ನು ಪಡೆದ ನಂತರ ಮನೆ ನಿರ್ಮಾಣಕ್ಕೆ ಮತ್ತು ಆ ಬಡಾವಣೆಗೆ ನಾಗರೀಕರು ರಸ್ತೆಯಲ್ಲಿಯೇ ಮನೆ ಇದ್ದಿದ್ದರಿಂದ ಓಡಾಡಲು ಸಹ ಕಷ್ಟಕರವಾಗಿತ್ತು ಮನೆಯಲ್ಲಿ ವಾಸವಾಗಿದ್ದ ಕುಟುಂಬದವರು ಸಹ ಬಡ ಕುಟುಂಬದವರು ಆಗಿದ್ದು ಇದನ್ನು ಬಗೆಹರಿಸುವಲ್ಲಿ ತುಂಬಾ ಕಷ್ಟಕರವಾಗಿತ್ತು ಇಂತಹ ಸಂದರ್ಭದಲ್ಲಿ ಬಡಾವಣೆಯ ನಾಗರಿಕರು ದೂರು ತೆಗೆದುಕೊಂಡು ಹೋಗಿದ್ದು ಶಾಸಕರ ಜನ ಜನಸ್ಪಂದನ ಸಭೆಗೆ ಅರಸೀಕೆರೆ ಕ್ಷೇತ್ರದ ಶಾಸಕರು ಹಾಗೂ ಕರ್ನಾಟಕ ಸರ್ಕಾರದ ಗೃಹ ಮಂಡಳಿ ಅಧ್ಯಕ್ಷರಾದ ಕೆಎಂ ಶಿವಲಿಂಗೇಗೌಡರು ನಗರಸಭೆ ಅಧ್ಯಕ್ಷರಾದ ಎಂ ಶಮಿವುಲ್ಲಾ ರವರಿಗೆ ಈ ಸಮಸ್ಯೆಯನ್ನು ಬಗೆಹರಿಸುವಂತೆ ತಿಳಿಸಿದರು. ನಗರಸಭೆ ಅಧ್ಯಕ್ಷರಾದ ಶಮಿವುಲ್ಲಾ ರವರು ಸ್ಥಳಕ್ಕೆ ಭೇಟಿ ನೀಡಿ ರಸ್ತೆ ಮಧ್ಯದಲ್ಲಿ ನಿರ್ಮಾಣವಾಗಿದ್ದ ಮನೆಯ ಕುಟುಂಬದವರಿಗೆ ಪ್ರತ್ಯೇಕ ವ್ಯವಸ್ಥೆಯನ್ನು ಕಲ್ಪಿಸಿ ಸುಮಾರು 35 ವರ್ಷಕ್ಕೂ ಹೆಚ್ಚಿನ ಸಮಸ್ಯೆಯನ್ನು ಬಗೆಹರಿಸಿ ನೂತನ ಬಡಾವಣೆಯ ನಾಗರಿಕರಿಗೆ ಸುಲಲಿತವಾಗಿ ಮನೆ ನಿರ್ಮಾಣ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದರು ಇದರಿಂದ ನೂತನ ಬಡಾವಣೆಯ ನಾಗರೀಕರು ಇಂದು ನಗರ ಸಭೆಗೆ ಭೇಟಿ ನೀಡಿ ನಗರಸಭೆ ಅಧ್ಯಕ್ಷರಾದ ಎಂ ಶಮಿವುಲ್ಲಾ ರವರಿಗೆ ಮತ್ತು ನಗರಸಭೆ ಉಪಾಧ್ಯಕ್ಷರಾದ ಮನೋಹರ್ ರವರಿಗೆ ಅಭಿನಂದಿಸಿ **ಉದಯವಾಹಿನಿ** ಪತ್ರಿಕೆಯೊಂದಿಗೆ ಅಧ್ಯಕ್ಷರ ಜನಪರ ಕಾಳಜಿ ಬಗ್ಗೆ ಸಂತಸ ವ್ಯಕ್ತಪಡಿಸಿದರು ನೂತನ ಬಡಾವಣೆಯ ನಾಗರೀಕರಾದ ಕಾಶಿನಾಥ ಲಮಾಣಿ. ಹರಿಪ್ರಕಾಶ್. ಶಂಕ್ರಪ್ಪ ಕುರುವಂಕ. ಜಯ ನಾಯಕ್ ಸೇರಿದಂತೆ ಹಲವಾರು ನಾಗರೀಕರು ಉಪಸ್ಥಿತರಿದ್ದರು.



ನೂತನ ಬಡಾವಣೆಯಲ್ಲಿ ನಿವೇಶನ ಖರೀದಿ ಮಾಡಿ ಮನೆ ನಿರ್ಮಾಣಕ್ಕಾಗಿ ಬ್ಯಾಂಕಿಗೆ ಅರ್ಜಿ ಸಲ್ಲಿಸಿದ್ದು ಆ ವೇಳೆಯಲ್ಲಿ ಕಾನೂನು ತೊಡಕ್ಕಾಗಿದ್ದು ಬಡಾವಣೆಗೆ ರಸ್ತೆ ಇಲ್ಲ ಇಂತಹ ಮನೆ ನಿರ್ಮಾಣಕ್ಕೆ ಹಣ ಮಂಜೂರಾಗುವುದಿಲ್ಲ ಎಂದಾಗ ತುಂಬಾ ರೋಸಿ ಹೋಗಿದ್ದೆವು ಇಂತಹ ವೇಳೆಯಲ್ಲಿ ನಗರಸಭೆ ಅಧ್ಯಕ್ಷರು ರಸ್ತೆ ನಿರ್ಮಾಣ ಮಾಡಿಕೊಡುವುದಾಗಿ ಭರವಸೆ ನೀಡಿದ್ದರು ಆದರೂ ಸಹ ಇದು 35 ವರ್ಷಗಳ ಸಮಸ್ಯೆ ಈ ಸಮಸ್ಯೆ ಬಗೆಹರಿಯುತ್ತದೆ ಇಲ್ಲವೋ ಎಂಬ ಗೊಂದಲದಲ್ಲಿ ಕಾಲ ಕಳೆಯುತ್ತಿದ್ದೆವು ಇದರಿಂದ ಅರಸೀಕೆರೆ ನಗರಸಭೆಯ ಅಧ್ಯಕ್ಷರಾದ ಎಮ್ ಶಮಿವುಲ್ಲಾ ರವರು ನಮಗೆ ಸಮಸ್ಯೆ ಬಗೆಹರಿಸಿ ಕೊಟ್ಟರು ಇದರಿಂದ ನಮಗೆ ಮನೆ ನಿರ್ಮಾಣಕ್ಕೆ ಅನುಕೂಲವಾಗಿದೆ ಇದರಿಂದ ನಿವೇಶನ ಪಡೆದ ಎಲ್ಲಾ ನಾಗರೀಕರಿಗೆ ಮನೆ ನಿರ್ಮಾಣಕ್ಕೆ ಅನುಕೂಲವಾಗಿದೆ -ಕುರುವಂಕ ಶಂಕ್ರಪ್ಪ

# ಪರಿಶಿಷ್ಟ ಜಾತಿ, ಪಂಗಡಗಳ ಕುಂದುಕೊರತೆ ಸಭೆ

• ಉದಯವಾಹಿನಿ ಲಕ್ಷ್ಮೇಶ್ವರ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ ಅವರು ಮಂಗಳವಾರ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಂದುಕೊರತೆ ಸಭೆ ನಡೆಸಿದರು. ನಿವೃತ್ತ ಶಿಕ್ಷಕ ಪೂರ್ಣಾಜಿ ಖರಾಟೆ ಮಾತನಾಡಿ, 'ಎಸ್‌ಸಿ, ಎಸ್‌ಟಿ ಜನರಿಗೆ ಅನುಕಂಪ ತೋರಿಸದೆ ಅವರಿಗೆ ಬದುಕಲು ಅವಕಾಶ ಕಲ್ಪಿಸಬೇಕಾಗಿದೆ.

ಆರ್ಥಿಕವಾಗಿ ಅವರನ್ನು ಸಬಲರನ್ನಾಗಿ ಮಾಡಲು ಅಧಿಕಾರಿಗಳು ಯೋಜನೆ ರೂಪಿಸಬೇಕು' ಎಂದರು. ಶಿಗ್ಲಿ, ನಾಕಾದಲ್ಲಿ ಯಾವಾಗಲೂ ವಾಹನದಟ್ಟಣೆ ಹೆಚ್ಚಿದ್ದು, ಆಗಾಗ ರಸ್ತೆ ಅಪಘಾತ ಸಂಭವಿಸುತ್ತಿವೆ. ಅಲ್ಲಿ ಟ್ರಾಫಿಕ್ ಸಿಗ್ನಲ್ ಅಳವಡಿಸಲು ಕ್ರಮ ಕೈಗೊಳ್ಳಬೇಕು' ಎಂದರು. ಎಸ್‌ಪಿ ಬಿ.ಎಸ್. ನೇಮಗೌಡ ಮಾತನಾಡಿ. ಎಲ್ಲಾ ಸಮುದಾಯದವರು ಸೌಜನ್ಯದಿಂದ ಬದುಕಬೇಕು. ಮಾನವೀಯತೆ ವಿರುದ್ಧ ಯಾರೂ ಕೆಲಸ ಮಾಡಬಾರದು. ಜಿಲ್ಲೆಯನ್ನು ಅಪರಾಧ ಮುಕ್ತ ಮಾಡಲು ಇಲಾಖೆ ಶ್ರಮಿಸುತ್ತಿದೆ.



ಉದಯವಾಹಿನಿ ಚಿತ್ರ

ಇದಕ್ಕೆ ಸಾರ್ವಜನಿಕರ ಸಹಕಾರ ಅಗತ್ಯ' ಎಂದರು. ಜಿಲ್ಲೆಯ ಎಲ್ಲಾ ಕಡೆ ಎಸ್‌ಸಿ, ಎಸ್‌ಟಿ ಕುಂದುಕೊರತೆ ಸಭೆ ನಡೆಸುತ್ತಿದ್ದು, ಗ್ರಾಮೀಣ ಭಾಗಗಳಲ್ಲಿ ಸಮಸ್ಯೆಯಿದ್ದಲ್ಲಿ ಅಧಿಕಾರಿಗಳು ಹೋಗಿ ಬಗೆಹರಿಸಬೇಕು ಎಂದು ಅಧಿಕಾರಿಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ. ಜಿಲ್ಲೆಯಲ್ಲಿ ಥರ್ಡ್ ಐ ಕ್ಯಾಮೆರಾ ಅಳವಡಿಸಿದ ಮೇಲೆ ಕಳ್ಳತನ ಪ್ರಕರಣಗಳು ಕಡಿಮೆಯಾಗಿದೆ' ಎಂದು ಹೇಳಿದರು. ಸಮಾಜದ ಮುಖಂಡರು ಮಾತನಾಡಿ, 'ಕೆಲ ಗ್ರಾಮದ ಹೋಟೆಲ್‌ಗಳಲ್ಲಿ ದಲಿತರಿಗೆ ಪ್ರತ್ಯೇಕ ಆಸನದ ವ್ಯವಸ್ಥೆ ಇದೆ. ಅಲ್ಲದೆ ಕ್ಷೌರಿಕರು ಕಟಿಂಗ್ ಮಾಡುವುದಿಲ್ಲ. ಸ್ಮಶಾನಕ್ಕೆ ಹೋಗಲು ಜಾಗವಿಲ್ಲ ದುಡಿಯಲು ಕೆಲಸ ಕೊಡುವುದಿಲ್ಲ. ಅಲ್ಲದೆ ಅಧಿಕಾರಿಗಳು ಸರ್ಕಾರದ ಯೋಜನೆಗಳು ಕುರಿತು ಮಾಹಿತಿ ನೀಡುವುದಿಲ್ಲ' ಎಂದು ದೂರಿದರು.

# ಸುಪೋಷಣ್ ದಿವಸ್ ಆಚರಣೆ

• ಉದಯವಾಹಿನಿ, ಚಿತ್ರದುರ್ಗ



ಉದಯವಾಹಿನಿ ಚಿತ್ರ

ಮಹಿಳೆಯರಿಗೆ ಮತ್ತು ಮಕ್ಕಳಿಗೆ ಪೌಷ್ಟಿಕಾಂಶದ ಬಗ್ಗೆ ಶಿಕ್ಷಣ ನೀಡುವ ಸುಪೋಷಣ ದಿನವನ್ನು ಚಿತ್ರದುರ್ಗ ತಾಲ್ಲೂಕು ಜಂಪಣ್ಣನಾಯಕನ ಕೋಟೆ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಶುಕ್ರವಾರ ಹಮ್ಮಿಕೊಳ್ಳಗಿತ್ತು ಇದೇ ಸಂದರ್ಭದಲ್ಲಿ ಜೆ ಎನ್ ಕೋಟೆ ಆಯುಷ್ ಚಿಕಿತ್ಸೆ ಕೇಂದ್ರದ ಯೋಗ ತರಬೇತುದಾರ ರವಿ ಕೆ. ಅಂಬೇಕರ್ ಗ್ರಾಮಸ್ಥರಿಗೆ ಯೋಗ ತರಬೇತಿ ನೀಡಿದರು. ಸಮುದಾಯ ಅರೋಗ್ಯಧಿಕಾರಿ ರಮೇಶ್, ಅಂಗನವಾಡಿ ಶಿಕ್ಷಕಿಯರಾದ ಭಾಗ್ಯಮ್ಮ, ತಿಪ್ಪಮ್ಮ, ಸಹಾಯಕಿಯರಾದ ಮಂಗಳಮ್ಮ, ನೇತ್ರಾವತಿ ಹಾಗು ಗ್ರಾಮಸ್ಥರು ಭಾಗವಸಿದ್ದರು.

# ಕಳಸರೋಹಣದ ವೇಳೆ ಘೋರ ದುರಂತ ಕ್ರೇನ್ ಮೇಲಿಂದ ಬಿದ್ದು ಓರ್ವ ಸಾವು

• ಉದಯವಾಹಿನಿ, ಹಾವೇರಿ

ಹಾವೇರಿ ಜಿಲ್ಲೆಯಲ್ಲಿ ಘೋರ ದುರಂತವೊಂದು ಸಂಭವಿಸಿದ್ದು, ದೇಗುಲದ ಕಳಸಾರೋಹಣದ ವೇಳೆ ಕ್ರೇನ್ ಕಟ್ ಆಗಿ ಓರ್ವ ಸಾವನ್ನಪ್ಪಿರುವ ಘಟನೆ ನಡೆದಿದೆ. ಹಾನಗಲ್ ತಾಲೂಕಿನ ಶೇಷಗಿರಿ ಗ್ರಾಮದಲ್ಲಿ ಕಳಸರೋಹಣದ ವೇಳೆ ಕ್ರೇನ್ ಕಟ್ ಆಗಿ ಕೆಳಗೆ ಬಿದ್ದ ಪರಿಣಾಮ ಓರ್ವ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಮೃತರನ್ನು ಮಂಜುನಾಥ್ ಪಾಟೀಲ್ (42) ಎಂದು ಗುರುತಿಸಲಾಗಿದೆ. ಘಟನೆಯಲ್ಲಿ ಮಂಜು ನಾಥ್ ಬಡಿಗೇರ್ ಎಂಬುವರು ಗಂಭೀರವಾಗಿ ಗಾಯಗೊಂಡಿದ್ದಾರೆ.

# ಅಂಬಾಮಹೇಶ್ವರಿ ದೇವಸ್ಥಾನ ಜೀರ್ಣೋದ್ಧಾರ ಕಾರ್ಯ ಶ್ಲಾಘನೀಯ : ಕಾಳಹಸ್ತೇಂದ್ರ ಶ್ರೀ

• ಉದಯವಾಹಿನಿ ವಡಗೇರಾ

ಧಾರ್ಮಿಕ ಸಾಮಾಜಿಕ ಸತ್ಕಾರ್ಯಗಳಿಂದ ಮನುಷ್ಯನ ಜನ್ಮ ಸಾರ್ಥಕ ಎಂದು ಶಹಾಪುರದ ಏಕದಂಡಗಿ ಮಠದ ಪರಮಪೂಜ್ಯ ಶ್ರೀ ಕಾಳಹಸ್ತೇಂದ್ರ ವಿಶ್ವಕರ್ಮ ಮಹಾಸ್ವಾಮಿಗಳು ನುಡಿದರು. ಶುಕ್ರವಾರದಂದು ಬೆಳಿಗ್ಗೆ ಪಟ್ಟಣದ ಗ್ರಾಮ ದೇವತೆ ಶ್ರೀ ಅಂಬಾಮಹೇಶ್ವರಿಯ ನೂತನ ದೇವಸ್ಥಾನದ ಗರ್ಭಗುಡಿಯ ಹೊಸ್ತಿಲು ಪೂಜಾ ಕಾರ್ಯಕ್ರಮವನ್ನು ನೆರವೇರಿಸಿ ಅವರು ಮಾತನಾಡಿದರು. ಪಟ್ಟಣದ ಗ್ರಾಮ ದೇವತೆಯು ಶಿರಸಿಯ ಮಾರಿಕಾಂಬೆಯನ್ನೆ ಹೊಲಿಕೆ ಪ್ರತಿರೂಪವಾಗಿದ್ದಾಳೆ ಇದು ತುಂಬಾ ಅಪರೂಪದ ಮೂರ್ತಿಯಾಗಿದ್ದು ಮತ್ತು ಅತ್ಯಂತ ಶಕ್ತಿ ದೇವತೆಯಾಗಿದ್ದಾಳೆ ಶ್ರೀ ಅಂಬಾ ಮಹೇಶ್ವರಿ ದೇವಸ್ಥಾನ ಜೀರ್ಣೋದ್ಧಾರಕ್ಕೆ ಮುಂದಾಗಿರುವ ಪಟ್ಟಣದ ಸಾರ್ವಜನಿಕರ ಕಾರ್ಯ ಶ್ಲಾಘನೀಯ ಪ್ರತಿಯೊಬ್ಬರಲ್ಲಿ ಸಹಕಾರ ಮನೋಭಾವ ಇದ್ದಾಗ ಮಾತ್ರ ಧಾರ್ಮಿಕ ಕ್ಷೇತ್ರಗಳು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ ನಾನು ಎಂಬ ಅಹಂಕಾರವನ್ನು ಬಿಟ್ಟು ಜೀವಿಸಿದಾಗ ಮಾತ್ರ ಮೋಕ್ಷ ಕಾಣಲು ಸಾಧ್ಯ ಎಂದರು. ಅಂಬಾಮಹೇಶ್ವರಿ ದೇವಿಯ ಆಶೀರ್ವಾದದಿಂದ ನಾಡಿಗೆ ಮಳೆ ಬೆಳೆ ಎಲ್ಲರಲ್ಲೂ ಉತ್ತಮ ಆರೋಗ್ಯ ವೃದ್ಧಿಯಾಗಿ ನಾಡು ಸುಭಿಕ್ಷವಾಗಿರಲಿ ಎಂದು ಶ್ರೀಗಳು



ಉದಯವಾಹಿನಿ ಚಿತ್ರ

ಹಾರೈಸಿದರು. ಈ ಸಂದರ್ಭದಲ್ಲಿ ಪಟ್ಟಣದ ಮುಖಂಡರಾದ ದೇವೇಂದ್ರಪ್ಪ ವಿಶ್ವಕರ್ಮ, ಸಿದ್ದಣ್ಣಗೌಡ ಕಾಡಂನೋರ್, ಶ್ರೀನಿವಾಸರಾವ್ ಕುಲಕರ್ಣಿ, ಗ್ರಾಮ ಪಂಚಾಯಿತಿ ಅಧ್ಯಕ್ಷ ಸಿದ್ದಪ್ಪ ತಮ್ಮಣ್ಣೂರ,ಡಾ. ವಿರುಪಯ್ಯಸ್ವಾಮಿ, ಸಿದ್ದಣ್ಣ ಮಾಸ್ಟರ್ ,ಡಾ. ಸುಭಾಷ್ ವಿಶ್ವಕರ್ಮ, ಮಲ್ಲುಗೌಡ ಪೊಲೀಸ್ ಪಾಟೀಲ್, ಸಂಗುಗೌಡ ಮಾಲಿ ಪಾಟೀಲ್, ಮಾಂತಯ್ಯ ಸ್ವಾಮಿ, ರಾಜುಗೌಡ ಮುಸ್ತಾಜಿರ್, ಹೊನ್ನಪ್ಪ ಎಲ್. ವಿಶ್ವಕರ್ಮ, ಹಣಮಂತರಾಯ ಜಡಿ, ಬಸವರಾಜ ನೀಲಹಳ್ಳಿ, ಮರೆಪ್ಪ ಜಡಿ, ಶರಣು ಇಟಗಿ, ಗೌಡಪ್ಪಗೌಡ, ಸಿದ್ದಲಿಂಗಪ್ಪ ಪಿಡ್ಡೆಗೌಡ, ಮಲ್ಲಪ್ಪ ಇಟಗಿ ,ಶರಣಪ್ಪ, ನಾಗಪ್ಪ ಪತ್ತಾರ್, ದೇವಪ್ಪ ಗೌಡ, ಶಿವು ಗೋನಾಲ್, ಮಲ್ಲಣ್ಣ, ಭೀಮಶೆಪ್ಪ ,ತಿರುಕಪ್ಪ, ಮೋನಪ್ಪ, ದೇವರಾಜ್, ಮಲ್ಲಪ್ಪ, ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ಮಹಾಶಿವರಾತ್ರಿಯ ನಿಮಿತ್ತ 21 ಜನ ಶಿವ ಭಕ್ತರಿಗೆ ಅರ್ಧ ಮಂಡಲ 14ನೇ ವರ್ಷದ ಶಿವಮಾಲೆ ದೀಕ್ಷಾ ಕಾರ್ಯಕ್ರಮ

• ಉದಯವಾಹಿನಿ ಕಾರಟಗಿ

ಶ್ರೀ ಭ್ರಮರಾಂಬ ಮಲ್ಲಿಕಾರ್ಜುನ ಶಿವದೀಕ್ಷ ಸೇವಾ ಸಮಿತಿ ವತಿಯಿಂದ ಕರಿಯಪ್ಪ ತಾತ ದೇವಸ್ಥಾನದಲ್ಲಿ 14ನೇ ವರ್ಷದ ಅರ್ಧ ಮಂಡಲ 21 ದಿನದ ಶಿವಾ ದೀಕ್ಷಾ ಕಾರ್ಯಕ್ರಮ ಗುರುವಾರ ಜರುಗಿತು.

ವೇದಮೂರ್ತಿ ಶ್ರೀ ಮರುಳಸಿದ್ದಯ್ಯ ಸ್ವಾಮಿಗಳು ಹಿರೇಮಠ ಹಾಗೂ ಶರಣಯ್ಯ ಸ್ವಾಮಿ ಬೇವಿನಾಳ ನಾಗನಕಲ್ ಇವರ ದಿವ್ಯ ಸಾನಿಧ್ಯದಲ್ಲಿ ಪ್ರಧಾನ ಅರ್ಚಕ ಶ್ರೀ ನಾಗಭೂಷಣ ಸ್ವಾಮಿಗಳಿಂದ ಕರಿಯಪ್ಪ ತಾತನಿಗೆ ಬೆಳಗ್ಗೆ ರುದ್ರಾಭಿಷೇಕ, ನವಗ್ರಹ ಪೂಜೆ ಸೇರಿದಂತೆ ಹೂವಿನ ಅಲಂಕಾರ ಕಾಯಿ ಕರ್ಪೂರ ನೈವೇದ್ಯ, ನಂತರ ಮಹಾಮಂಗಳಾರತಿ ಧಾರ್ಮಿಕ ವಿಧಿ ವಿಧಾನಗಳು ಜರುಗಿದ ಬಳಿಕ

21 ಜನ ಶಿವ ಭಕ್ತಾದಿಗಳಿಗೆ ಅರ್ಧಮಂಡಲ ಶಿವಾ ದೀಕ್ಷೆ ನೀಡುವ ಮೂಲಕ ಆಶೀರ್ವಚನ ನೀಡಲಾಯಿತು. ಈ ಸಂದರ್ಭದಲ್ಲಿ ಶ್ರೀ ಶರಣಯ್ಯ ಸ್ವಾಮಿ ಹಿರೇಮಠ್ ರವರು ಮಾತನಾಡಿದ ನಾವುಗಳು ನಿಮಗೆ ಮಾರ್ಗದರ್ಶನ ನೀಡುತ್ತೇವೆ. ಮಾಲ ಧರಿಸಿದ ಮಾಲಾಧಾರಿಗಳು ಆಂತರಿಕ ದುಷ್ಟ ಚಟಗಳಿಂದ ದೂರವಿರಬೇಕು. ಧರ್ಮ ಅರ್ಥ ಕಾಮ್ಯ ಮೂಲ



ಉದಯವಾಹಿನಿ ಚಿತ್ರ

ತಿಳಿಯಬೇಕು. ಕಾಯಕ ನಿಷ್ಠೆ, ಸಹನ ಗುಣತ್ವ, ನಾನು ನನ್ನದು ನಿನ್ನದು ತೊರೆಯಬೇಕು, ಅಂತರಂಗ ಶುದ್ದ ಇರಬೇಕು, ನಾನು ಬದಲಾದರೆ ಜಗತ್ತು ಬದಲಾಗುತ್ತೆ ಎನ್ನುವ ಧ್ಯೇಯ ಇಟ್ಟುಕೊಳ್ಳಬೇಕು. ಜೀವನದಲ್ಲಿ ಒತ್ತಡಗಳನ್ನು ಬದಿಗೊತ್ತಿ ಮಾಡುವುದೇ ಧರ್ಮ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ವಾಲ್ಮೀಕಿ ಮಹಾಸಭಾದ ತಾಲ್ಲೂಕ ಅಧ್ಯಕ್ಷ ಬೂದಿ ಗಿರಿಯಪ್ಪ. ಪ್ರಭುರಾಜ್ ಬೂದಿ, ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತದ ಅಧ್ಯಕ್ಷ ಉಪ್ಪಾರ್ ಅಯ್ಯಪ್ಪ, ಶಾಮಣ್ಣ ಇಡಿಗೇರ,ಚಂದ್ರು ಉದ್ಯಾಳ, ಇವರಿಗೆ ಶಾಲುಹೊದಿಸಿ ಸನ್ಮಾನಿಸಿ ಗೌರವಿಸಲಾಯಿತು.

**ಫೆ,10ರಂದು , ಸುಕ್ಷೇತ್ರ ಶ್ರೀಶೈಲಕ್ಕೆ ಮಾಲಾಧಾರಿಗಳಿಂದ 9ನೇ ವರ್ಷದ ಪಾದಯಾತ್ರೆ**

ಇದೇ ಫೆಬ್ರವರಿ 10 ತಾರೀಖಿ ನಂದು 9 ನೆ ವರ್ಷದ ಪಾದಯಾತ್ರೆ ಕೈಗೊಳ್ಳಲಾಗುವುದು.

ಫೆ,10.ರಿಂದ.26 ರವರೆಗೆ ಅನ್ನಸಂತರ್ಪಣೆ. ಜರುಗುವುದು. ಮಹಾ ಶಿವರಾತ್ರಿಯಂದು ಶ್ರೀ ಶ್ರೀಮರುಳ ಸಿದ್ದಯ್ಯ ಸ್ವಾಮಿ ಇವರಿಂದ ಆಶೀರ್ವಚನ ನಡೆಯುವುದು.

ಈ ಸಂದರ್ಭದಲ್ಲಿ ಗುರಿ ಸ್ವಾಮಿಗಳಾದ ಪರಶುರಾಮ್ ಬಂಡಿ, ಅಮರೇಶ್ ಬಿಜಿಕಲ್, ಶರಣಪ್ಪ ಹುಳಿಹೈದರ, ಯಮನೂರ ಸಂಗಾಪುರ, ಶೇಖರಪ್ಪ ನಾಗನಕಲ್, ಪಂಪಾಪತಿ ಅಂಬಾಮಠ, ಬಸಲಿಂಗಪ್ಪ ದಿದಿಗಿ, ಯಮನಪ್ಪ ಮಡಿವಾಳ, ಶರಣಪ್ಪ , ವೀರೇಶ್ ಬೆನಕನಾಳ, ಆನಂದ್ ತಾತ, ರಾಜ, ಶಿವ ಹೂಗಾರ, ಗುರುಸ್ವಾಮಿಗಳು ಹಾಗೂ ಶಿವ ಸ್ವಾಮಿಗಳು ಗುರು ಹಿರಿಯರು ಮತ್ತಿತರರು ಇದ್ದರು.

# ಟಿಪ್ಪರ್ ಹರಿದು ಬಾಲಕ ಸ್ಥಳದಲ್ಲೇ ಸಾವು

• ಉದಯವಾಹಿನಿ ಗದಗ

ಗದಗದಲ್ಲಿ ಭೀಕರ ಅಪಘಾತ ಸಂಭವಿಸಿದ್ದು, ಟಿಪ್ಪರ್ ಹರಿದು 6 ವರ್ಷದ ಬಾಲಕ ಮೃತಪಟ್ಟ ಘಟನೆ ನಡೆದಿದೆ. ಗದಗ ತಾಲ್ಲೂಕಿನ ಹರ್ತಿ ಗ್ರಾಮದ ಬಸ್ ನಿಲ್ದಾಣದಲ್ಲಿ ಈ ಘಟನೆ ನಡೆದಿದೆ. ತಾಯಿ ಜೊತೆ ಬಂದಿದ್ದ ಬಾಲಕನ ಮೇಲೆ ಟಿಪ್ಪರ್ ಹರಿದಿದೆ. ಟಿಪ್ಪರ್ ಹರಿದ ಪರಿಣಾಮ ಹಿಂಡಸಗೇರಿ ಗ್ರಾಮದ ಪ್ರೀತಮ್ (6) ಎಂಬ ಬಾಲಕ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

# ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ರೈತರಿಗೆ ತರಬೇತಿ

## • ದಾಳಿಂಬೆಯಲ್ಲಿ ನೀರಿನ ಸಮರ್ಪಕ ಹಾಗೂ ಸಮಗ್ರ ಬೆಳೆ ನಿರ್ವಹಣೆಯಿಂದ ಉತ್ತಮ ಗುಣಮಟ್ಟದ ಇಳುವರಿ ಸಾಧ್ಯ: ರಜನೀಕಾಂತ

• ಉದಯವಾಹಿನಿ, ಚಿತ್ರದುರ್ಗ

ದಾಳಿಂಬೆಯು ನಮ್ಮ ಜಿಲ್ಲೆಯ ಪ್ರಮುಖ ಹಣ್ಣಿನ ಬೆಳೆಯಲ್ಲಿ ಒಂದಾಗಿದ್ದು, ಬೆಳೆಯಲ್ಲಿ ಸಮರ್ಪಕ ನೀರಿನ ನಿರ್ವಹಣೆ, ಸುಸಜ್ಜಿತ ಉತ್ಪಾದನೆ ತಾಂತ್ರಿಕತೆಗಳು ಮತ್ತು ಸಮಗ್ರ ಪೀಡೆ ನಿರ್ವಹಣೆಯ ಪದ್ದತಿ ಅಳವಡಿಕೆಯಿಂದ ಉತ್ತಮ ಇಳುವರಿ ಪಡೆಯಲು ಸಾಧ್ಯವಿದೆ ಎಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕ ರಜನೀಕಾಂತ ತಿಳಿಸಿದರು.

ಹಿರಿಯೂರು ತಾಲ್ಲೂಕಿನ ಬಬ್ಬೂರುಫಾರಂನ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಜಿಲ್ಲೆಯ ವಿವಿಧ ಗ್ರಾಮಗಳಿಂದ ಆಗಮಿಸಿದ ರೈತರಿಗೆ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಕೃಷಿಯಲ್ಲಿ ವೈಜ್ಞಾನಿಕ ತುಂತುರು ಮತ್ತು ಹನಿ ನೀರಾವರಿ ಘಟಕಗಳ ಅಳವಡಿಕೆ ಮತ್ತು ನಿರ್ವಹಣೆ, ದಾಳಿಂಬೆ ಬೆಳೆಯ ಸುಸಜ್ಜಿತ ಉತ್ಪಾದನೆ ಕ್ರಮಗಳು, ನೀರಿನ ನಿರ್ವಹಣೆ, ಸಮಗ್ರರೋಗ ಮತ್ತು ಕೀಟಗಳ ನಿರ್ವಹಣೆ ಕುರಿತು ಆಯೋಜಿಸಲಾದ ಒಂದು ದಿನದ ತರಬೇತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭೂಮಿಯ ಮೇಲೆ ಶೇ 70 ರಷ್ಟು ನೀರಿದ್ದರೂ ಶೇ 2% ಮಾತ್ರ ಕೃಷಿ, ಕೈಗಾರಿಕೆ ಮತ್ತು ದಿನ ನಿತ್ಯ ಬಳಕೆಗೆ ಯೋಗ್ಯವಾಗಿದ್ದು ವೈಜ್ಞಾನಿಕವಾಗಿ ಈ ಶುದ್ದ ನೀರಿನ ಮಿತ ಹಾಗೂ ಸಮರ್ಥ ಬಳಕೆ ತಮ್ಮೆಲ್ಲೇರ ಜವಬ್ದಾರಿಯಾಗಿದೆಂದರು.

ಬಬ್ಬೂರಿನ ತೋಟಗಾರಿಕೆ ಕಾಲೇಜಿನ ಸಹಾಯಕ ಪ್ರಾಧ್ಯಪಕರಾದ ಡಾ. ಶ್ರೀಧರ್ ಅವರು ದಾಳಿಂಬೆ ಬೆಳೆಯಲ್ಲಿ ಅನುಸರಿಸಬೇಕಾದ

ತುಂತುರು ಮತ್ತು ಹನಿ ನೀರಾವರಿ ಪದ್ದತಿಗಳ ಅಳವಡಿಕೆಯಿಂದ ಕೃಷಿಯಲ್ಲಿ 30-40% ನೀರಿನ ಉಳಿತಾಯ, ವಿದ್ಯುಚ್ಚಕ್ತಿಯ ಉಳಿತಾಯ, ಕೂಲಿ ಆಳುಗಳ ಉಳಿತಾಯ, ಸಮಯದ ಉಳಿತಾಯ, ಕಳೆಗಳ ನಿರ್ವಹಣೆ ಮತ್ತು ರೋಗಗಳ ಹರಡುವಿಕೆಯನ್ನು ತಡೆಗಟ್ಟಬಹುದು. ಹನಿ ನೀರಾವರಿ ಪದ್ದತಿಯಲ್ಲಿ ರಸಾವರಿ ಬಳಸಿ ರಸಗೊಬ್ಬರ ನೀಡುವುದರಿಂದ ರಸಗೊಬ್ಬರದ ಸಮರ್ಪಕ ಬಳಕೆಯಿಂದ ವ್ಯವಯಸಾಯದ ಖರ್ಚು ಕಡಿಮೆಯಾಗಿ 20-30% ಹೆಚ್ಚಿನ ಇಳುವರಿ ಪಡೆಯಲು ಸಾಧ್ಯ

-ರಜನೀಕಾಂತ, ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕ

ಸುಸಜ್ಜಿತ ಉತ್ಪಾದನೆ ಕ್ರಮಗಳ ಕುರಿತು ಮಾಹಿತಿ ನೀಡಿ, ವೈಜ್ಞಾನಿಕ ನೀರಿನ ಸಮರ್ಪಕ ಹಾಗೂ ಸಮಗ್ರ ಬೆಳೆ ನಿರ್ವಹಣೆಯಿಂದ ಉತ್ತಮ ಗುಣಮಟ್ಟದ ಇಳುವರಿ ಪಡೆಯಲು ಸಾಧ್ಯವೆಂದರು.

ಕೀಟ ಶಾಸ್ತ್ರಜ್ಞರಾದ ಡಾತಾರಣ ಿಅವರು ದಾಳಿಂಬೆ ಬೆಳೆಯಲ್ಲಿ ಕೀಟಗಳ ನಿರ್ವಹಣೆ ಕುರಿತು ವಿಷಯ ಮಂಡನೆ ಮಾಡಿದರು. ಮುನಿರಬಾದ್‌ನ ತೋಟಗಾರಿಕೆ ಕಾಲೇಜಿನ ರೋಗಶಾಸ್ತ್ರಜ್ಞರಾದ ಡಾ, ರಾಘವೇಂದ್ರ ಆಚಾರಿ ಅವರು ಈ ಬೆಳೆಯಲ್ಲಿ ಬರುವ ರೋಗಗಳ ಸಮಗ್ರ ನಿರ್ವಹಣೆ ಕುರಿತು ಗೂಗಲ್ ಮೀಟ್



ಉದಯವಾಹಿನಿ ಚಿತ್ರ

ಮೂಲಕ ವಿಷಯ ಮಂಡನೆ ಮಾಡಿದರು.

ಜೈನ್ ಇರಿಗೇಷನ್ ಸಂಸ್ಥೆಯ ಪ್ರತಿನಿಧಿಯಾದ ಕೆ.ದೇವರಾಜ್ ಅವರು ಹನಿ ನೀರಾವರಿ ಘಟಕಗಳನ್ನು ಕ್ಷೇತ್ರ ಮಟ್ಟದಲ್ಲಿ ಅಳವಡಿಸುವ ವಿನ್ಯಾಸ ಹಾಗೂ ನಿರ್ವಹಣೆಯ ವಿಧಾನವನ್ನು ತಿಳಿಸಿದರು.

ಹನಿ ನೀರಾವರಿ ಪದ್ದತಿಯಲ್ಲಿ ವಿವಿಧ ಫಿಲ್ಟರ್‌ಗಳ ನಿರ್ವಹಣೆ ಬಗ್ಗೆ ಮಾಹತಿ ನೀಡಿ, ದೈನಂದಿನ ಫಿಲ್ಟರ್‌ಗಳಲ್ಲಿ ಡ್ರೈನ್ ಕವಾಟಗಳನ್ನು ತೆರೆಯುವುದು, ವಾರಕ್ಕೊಮ್ಮೆಮೆಶ್ ಮತ್ತುಡಿಶ್ ಫಿಲ್ಟರ್ ಗಾಗಿ ಫಿಲ್ಟರ್ ಎಲಿಮೆಂಟ್ ತೆರೆಯುವಿಕೆಹಾಗೂ ತಿಂಗಳಿಗೊಮ್ಮೆ ಹೈಡ್ರೋಸೈಕ್ಲೋನ್ ಫಿಲ್ಟರ್‌ನ ಸಂಗ್ರಹಕೊಠಡಿಯಲ್ಲಿ ಸೈಡ್‌ಕ್ಯಾಪ್ ತೆರೆಯುವುದು ಬಹಳ ಮುಖ್ಯವೆಂದರು. ಎಲ್ಲಾ ಡ್ರಿಪ್ ಲ್ಯಾಟರಲ್‌ಗಳ ಫ್ಲಶಿಂಗ್‌ನ್ನು

**ರೈತರಿಗೆ ಶೇ.90 ಸಹಾಯಧನ**

ಮಳೆಯಾಶ್ರಿತ ಪ್ರದೇಶದಲ್ಲಿ ರೈತರು ಬಿದ್ದ ನೀರನ್ನು ಇಂಗಿಸಲು ಕಂದಕ ಬದುಗಳ ನಿರ್ಮಾಣ ಮಾಡಬೇಕು ಮತ್ತು ಕೃಷಿ ಹೊಂಡದಲ್ಲಿ ನೀರು ಸಂಗ್ರಹಣೆ ಮಾಡಿ ಬೆಳೆಯ ಸಂದಿಗ್ದ ಹಂತದಲ್ಲಿ ನೀರು ಹಾಯಿಸಲು ಅನೂಕೂಲವಾಗುತ್ತದೆ. ಕೃಷಿ ಇಲಾಖೆಯಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಎಲ್ಲಾ ವರ್ಗದ ರೈತರಿಗೆ ಶೇ.90 ಸಹಾಯಧನದಲ್ಲಿ ಸ್ಪ್ರಿಂಕ್ಲರ್‌ಸೆಟ್ ಪಡೆಯಲು ಸಂಬಂಧಪಟ್ಟ ರೈತಸಂಪರ್ಕ ಕೇಂದ್ರಗಳಲ್ಲಿ ಅರ್ಜಿಯನ್ನು ಸಲ್ಲಿಸಿ ಈ ಯೋಜನೆಯ ಅನುಕೂಲ ಪಡೆದುಕೊಳ್ಳಬಹುದೆಂದರು.

ಪ್ರತಿ15 ದಿನಗಳಿಗೊಮ್ಮೆ ಮಾಡಬೇಕು. ಹನಿ ನೀರಾವರಿಘಟಕದ ನಿರ್ದಿಷ್ಟಅವಧಿಯಕಾರ್ಯಾಚರಣೆಯ ನಂತರಉಪ್ಪು ಶೇಖರಣೆ ಸಂಭವಿಸುತ್ತದೆ. ಸಾಧನದ ಹೊರಮೇಲ್ಮೈಯಲ್ಲಿ ಉಪ್ಪು ಶೇಖರಣೆಯನ್ನು ನಾವುಗಮನಿಸಿದಾಗ ಆಮ್ಲಚಿಕಿತ್ಸೆಯನ್ನು ಮಾಡಬೇಕಾಗುತ್ತದೆ. ಬೆಳೆಯ ಹಂತದಲ್ಲಿ ನಿಯಮಿತವಾಗಿ ಫಾಸ್ಪರಿಕ್‌ಆಮ್ಲವನ್ನು ಬಳಸುವುದರಿಂದ ಬೆಳೆಗೆ ರಂಜಕ ಪೋಷಕಾಂಶ ಪೂರೈಸಲು

**ಕೀಟಗಳ ನಿರ್ವಹಣೆ ಕುರಿತು ತರಬೇತಿ**

ಹನಿ ನೀರಾವರಿ ವ್ಯವಸ್ಥೆಯಲ್ಲಿಕೀಟ,ಅಳಿಲು ಮತ್ತು ಇಲಿಗಳ ಹಾನಿಯನ್ನುತಡೆಗಟ್ಟಲುನೀರಾವರಿ ಮುಗಿದಾಗಅಥವಾ ಬೆಳೆ ಮುಗಿದಾಗ ಅಥವಾ ಕೊಯ್ಲು ಮಾಡುವಾಗ ಹನಿನೀರಾವರಿ ಕೊಳವೆಗಳನ್ನು ಹೊಲದಲ್ಲಿ ಬೀಡದೆ ಅವುಗಳನ್ನು ಸರಿಯಾಗಿ ನೆರಳಿನಲ್ಲಿ ಸಂಗ್ರಹಿಸಿ ಮುನ್ನೇಚ್ಚರಿಕೆಯನ್ನು ತೆಗೆದುಕೊಳ್ಳಬೇಕೆಂದರು.

ಹನಿ ನೀರಾವರಿ ವ್ಯವಸ್ಥೆಯಲ್ಲಿ ನೀರಿನಗುಣಮಟ್ಟದ ಮಾನದಂಡಗಳು ಮತ್ತುಹನಿ ನೀರಾವರಿ ವ್ಯವಸ್ಥೆಯಲ್ಲಿ ಸೂಕ್ತವಾದ ನೀರಿನಲ್ಲಿ ಕರಗುವ ರಸಗೊಬ್ಬರಗಳ ಕುರಿತು ಮಾಹಿತಿ ನೀಡಿದರು -ಕೆ.ದೇವರಾಜ್

ಜೈನ್ ಇರಿಗೇಷನ್ ಸಂಸ್ಥೆಯ ಪ್ರತಿನಿಧಿ

ಸಹಕಾರಿಯಾಗುವುದಲ್ಲದೆ, ಹನಿ ನೀರಾವರಿಘಟಕದಲ್ಲಿ ಉಪ್ಪು ಶೇಖರಣೆಯಾಗುವುದನ್ನು ಸಹ ತಡೆಯಬಹುದು.

ಬೆಳೆಯ ಅವಧಿ ಮುಗಿದಾಗ ಆಸಿಡ್ ಚಿಕಿತ್ಸೆಗಾಗಿ 35% ಕೇಂದ್ರೀಕೃತ ಹೈಡ್ರೋಕ್ಲೋರಿಕ್ ಆಮ್ಲವನ್ನು ಬಳಸಬೇಕು. ಆಸಿಡ್ ಚಿಕಿತ್ಸೆಯನ್ನು ಕೈಗೊಳ್ಳುವಾಗ ಕಣ್ಣುಗಳು ಮತ್ತು ಚರ್ಮದೊಂದಿಗೆಆಮ್ಲದ ಸಂಪರ್ಕವುಅಪಾಯಕಾರಿಯಾದ್ದರಿಂದ ದಯವಿಟ್ಟು ಎಲ್ಲಾ ಅಗತ್ಯ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕೆಂದರು.

# ವಯಸ್ಕರಿಗಿಂತ ಮತದಾರರೇ ಹೆಚ್ಚು, 5 ತಿಂಗಳಲ್ಲಿ 39 ಲಕ್ಷ ಮಂದಿ ಸೇರ್ಪಡೆ


## ಮಹಾರಾಷ್ಟ್ರದಲ್ಲಿ ವಯಸ್ಕರ ಜನಸಂಖ್ಯೆಗಿಂತ ಮತದಾರರ ಸಂಖ್ಯೆ ಹೆಚ್ಚಿದೆ ಎಂದು ರಾಹುಲ್ ಗಾಂಧಿ ಆರೋಪ

**ತನಿಖೆ ನಡೆಸಲು ಮುಂದಾಗಿಲ್ಲ**

**ಹೊಸದಿಲ್ಲಿ:** ಮಹಾರಾಷ್ಟ್ರದಲ್ಲಿ ವಯಸ್ಕರ ಜನಸಂಖ್ಯೆಗಿಂತ ಮತದಾರರ ಸಂಖ್ಯೆ ಹೆಚ್ಚಿದೆ. ಮತ ದಾರರ ಪಟ್ಟಿಯಲ್ಲಿ ಅಕ್ರಮಗಳು ನಡೆದಿವೆ ಎಂದು ಲೋಕಸಭೆ ವಿರೋಧ ಪಕ್ಷ ನಾಯಕ ರಾಹುಲ್ ಗಾಂಧಿ ಗಂಭೀರ ಆರೋಪಿಸಿದ್ದಾರೆ. ಶುಕ್ರವಾರ ದೆಹಲಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಶಿವಸೇನೆ ಸಂಸದ ಸಂಜಯ್ ರಾವತ್ ಮತ್ತು ಸಂಸದೆ ಸುಪ್ರಿಯಾ ಸುಳೆ ಜೊತೆ ಭಾಗವಹಿಸಿದ ರಾಹುಲ್ ಈ ಆರೋಪ ಮಾಡಿದ್ದಾರೆ. ಕಳೆದ ವರ್ಷ ಮಹಾರಾಷ್ಟ್ರದಲ್ಲಿ ನಡೆದ ಚುನಾವಣೆಯ ಮತದಾ ರರ ಪಟ್ಟಿಯನ್ನು ಪರಿಶೀಲಿಸಿದಾಗ ಅನೇಕ ಅಕ್ರಮ ಗಳು ಕಂಡುಬಂದಿವೆ. ಚುನಾವಣಾ ಆಯೋಗ ಈ ಅಕ್ರಮಗಳ ಬಗ್ಗೆ ತನಿಖೆ ನಡೆಸಲು ಮುಂದಾಗಿಲ್ಲ ಎಂದು ಆರೋಪಿಸಿದ್ದಾರೆ.

**ಐದು ತಿಂಗಳಲ್ಲಿ 39 ಲಕ್ಷ ಮತದಾರು:** 2019ರ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗಳು ಮತ್ತು 2024 ರ ಲೋಕಸಭಾ ಚುನಾವಣೆಗಳ ನಡುವೆ 5 ವರ್ಷಗಳಲ್ಲಿ 32 ಲಕ್ಷ ಮತದಾರರನ್ನು ಹೊಸದಾಗಿ ಸೇರಿಸಲಾಗಿದೆ. ಆದರೆ, 2024 ಲೋಕಸಭಾ ಚುನಾ ವಣೆ, 2024ರ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗಳ ನಡುವೆ ಕೇವಲ 5 ತಿಂಗಳೊಳಗೆ 39 ಲಕ್ಷ ಮತದಾರರನ್ನು ಹೊಸದಾಗಿ ಸೇರಿಸಲಾಗಿದೆ ಎಂದು ಕಾಂಗ್ರೆಸ್ ನಾಯಕ ಆರೋಪಿಸಿದ್ದಾರೆ. ಇದಕ್ಕೆ ಪೂರಕ ಅಂಕಿ ಅಂಶಗಳನ್ನು ನೀಡಿದ್ದಾರೆ.

ಹೊಸದಾಗಿ ಸೇರಿದ ಈ 39 ಲಕ್ಷ ಮತದಾರರು ಯಾರು? ಇದು ಹಿಮಾಚಲ ಪ್ರದೇಶದ ಒಟ್ಟು ಮತದಾರರ ಸಂಖ್ಯೆಗೆ ಸಮನಾಗಿದೆ. ಎರಡನೇ ಅಂಶವೆಂದರೆ, ಮಹಾರಾಷ್ಟ್ರದಲ್ಲಿ ರಾಜ್ಯದ ಒಟ್ಟು ಮತದಾನ ಜನಸಂಖ್ಯೆ ಗಿಂತ ಹೆಚ್ಚು ಮತದಾರರು ಏಕೆ ಇದ್ದಾರೆ? ಎಂದು ಅವರು ಪ್ರಶ್ನೆ ಮಾಡಿದ್ದಾರೆ.



> ಮಹಾರಾಷ್ಟ್ರ ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂದು ಸಂಸದ ರಾಹುಲ್ ಗಾಂಧಿ ಆರೋಪ ಮಾಡಿದ್ದಾರೆ. ಮಹಾ ರಾಷ್ಟ್ರದ ವಯಸ್ಕರ ಜನಸಂಖ್ಯೆಗಿಂತ ಚುನಾವಣೆಯ ಮತದಾರರ ಪಟ್ಟಿಯಲ್ಲಿ ಹೆಚ್ಚು ಮಂದಿಯ ಹೆಸರಿದೆ. 5 ತಿಂಗಳಲ್ಲಿ 39 ಲಕ್ಷ ಮಂದಿ ಹೊಸದಾಗಿ ಸೇರ್ಪಡೆಯಾಗಿದ್ದಾರೆ
>
> – ರಾಹುಲ್ ಗಾಂಧಿ ವಿರೋಧ ಪಕ್ಷ ನಾಯಕ

- ಕಳೆದ ವರ್ಷ ನಡೆದ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ದೊಡ್ಡ ಅಕ್ರಮ ನಡೆದಿದೆ ಎಂದ ರಾಹುಲ್.
- ಈ ಬಗ್ಗೆ ಚುನಾವಣಾ ಆಯೋಗಕ್ಕೆ ದೂರು ನೀಡಿದರು ಪ್ರಕ್ರಿಯೆ ಇಲ್ಲ ಎಂದ ವಿರೋಧ ಪಕ್ಷದ ನಾಯಕ.

**ಹೊಸ ಮತದಾರರು ಬಂದ ಕಡೆ ಬಿಜೆಪಿ ಗೆಲುವು:** ಇನ್ನು ಹೊಸದಾಗಿ ಎಲ್ಲೆಲ್ಲಿ ಮತದಾರರ ಹೆಸರುಗಳನ್ನು ಸೇರಿಸಲಾಗಿದೆಯೋ ಆಯಾ ಕ್ಷೇತ್ರಗಳು ಬಿಜೆಪಿ ಗೆಲುವು ಸಾಧಿಸಿದೆ. ಚುನಾವಣಾ ಆಯೋಗದ ಪಟ್ಟಿಯಂತೆ ಮಹಾರಾಷ್ಟ್ರದ ಜನ ಸಂಖ್ಯೆಗಿಂತ ಹೆಚ್ಚಿನ ಮತದಾರರು ಮತ ಚಲಾಯಿಸಿದ್ದಾರೆ. ಇವು ಊಹಾಪೋಹಗಳಲ್ಲ, ಇದೆಲ್ಲಾ ಕಾಲ್ಪನಿಕವಲ್ಲ, ನಮ್ಮ ದತ್ತಾಂಶವಲ್ಲ. ಚುನಾವಣಾ ಆಯೋಗದ ದತ್ತಾಂಶ ಎಂದು ರಾಹುಲ್ ಕಿಡಿಕಾರಿದ್ದಾರೆ. ಪ್ರಮುಖವಾಗಿ ಅನೇಕರ ಹೆಸರನ್ನು ಮತ ದಾರರ ಪಟ್ಟಿಯಿಂದ ಕೈಬಿಡಲಾಗಿದೆ. ಒಂದು ಮತ ಗಟ್ಟೆಯಲ್ಲಿರುವ ಮತದಾರರನ್ನು ಇನ್ನೊಂದು ಮತ ಗಟ್ಟೆಗೆ ವರ್ಗಾಯಿಸಲಾಗಿದೆ. ಈ ಮತದಾರರಲ್ಲಿ ಹೆಚ್ಚಿನವರು ದಲಿತ ಸಮುದಾಯಗಳು, ಬುಡ ಕಟ್ಟು ಸಮುದಾಯಗಳು, ಅಲ್ಪಸಂಖ್ಯಾತ ಸಮು ದಾಯಗಳಿಂದ ಬಂದವರು, ಎಂದು ರಾಹುಲ್ ದೂರಿದ್ದಾರೆ.

**ಚುನಾವಣಾ ಆಯೋಗ ಪ್ರತಿಕ್ರಿಯೆ:** ರಾಹುಲ್ ಅವರ ಹೇಳಿಕೆಗಳಿಗೆ ಪ್ರತಿಕ್ರಿಯಿಸಿದ ಭಾರತದ ಚುನಾವಣಾ ಆಯೋಗ ಟ್ವೀಟರ್‌ನಲ್ಲಿ ಪೋಸ್ಟ್ ಮಾಡಿದೆ. ರಾಜಕೀಯ ಪಕ್ಷಗಳಿಂದ ಬರುವ ಪ್ರಶ್ನೆಗಳನ್ನು ಚುನಾವಣಾ ಆಯೋಗವು ಗೌರವಿಸುತ್ತದೆ.

ಸಂಪೂರ್ಣ ವಾಸ್ತವ, ನಿಜಾಂಶದೊಂದಿಗೆ ಲಿಖಿತ ರೂಪದಲ್ಲಿ ಉತ್ತರ ನೀಡುವುದಾಗಿ ರಾಹುಲ್ ಗಾಂಧಿ ಅವರ ಹೆಸರನ್ನು ಉಲ್ಲೇಖಿಸದೇ ಆಯೋಗವು ಪ್ರತಿಕ್ರಿಯೆ ನೀಡಿದೆ.

# ಪಾಕಿಸ್ತಾನದಿಂದ ಮಹಾ ಕುಂಭಕ್ಕೆ ಆಗಮಿಸಿದ 68 ಹಿಂದೂ ಭಕ್ತರ ಗುಂಪು

**ಪ್ರಯಾಗ ರಾಜ್:** ಮಹಾ ಕುಂಭಮೇಳದ ಆಧ್ಯಾತ್ಮಿಕ ಭವ್ಯತೆಯಿಂದ ಆಕರ್ಷಿತರಾಗಿ, ಪಾಕಿಸ್ತಾನದ ಸಿಂದ್ ಪ್ರಾಂತ್ಯದ 68 ಹಿಂದೂ ಭಕ್ತರ ಗುಂಪು ಪ್ರಯಾಗ್‌ರಾಜ್ ಆಗಮಿಸಿದೆ. ಅವರು ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿ ತಮ್ಮ ಪೂರ್ವಜರ ಆತ್ಮಗಳಿಗೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸಿದ್ದಾರೆ. ಗುಂಪಿನ ಜೊತೆಗಿದ್ದ ಮಹಂತ್ ರಾಮನಾಥ್, ಅವರು ಈ ಹಿಂದೆ ಹರಿದ್ವಾರಕ್ಕೆ ಭೇಟಿ ನೀಡಿದ್ದಾರೆ.


ಅಲ್ಲಿ ಅವರು ಮಹಾ ಕುಂಭಕ್ಕೆ ಬರುವ ಮೊದಲು ಸುಮಾರು 480 ಪೂರ್ವಜರ ಚಿತಾಭಸ್ಮವನ್ನು ವಿಸರ್ಜಿಸಿ ಧಾರ್ಮಿಕ ವಿಧಿಗಳನ್ನು ನೆರವೇರಿಸಿದ್ದಾರೆ ಎಂದು ಹೇಳಿದ್ದಾರೆ . ಸೆಕ್ಟರ್ 9 ರಲ್ಲಿರುವ ಶ್ರೀ ಗುರು ಕರ್ಷಿ ಶಿಬಿರದಲ್ಲಿ ಮಾತನಾಡಿದ ಸಿಂಧ್ ನಿವಾಸಿ ಗೋವಿಂದ ರಾಮ್ ಮಖೇಜಾ, ಕಳೆದ ಎರಡು ಅಥವಾ ಮೂರು ತಿಂಗಳುಗಳಲ್ಲಿ ಮಹಾ ಕುಂಭದ ಬಗ್ಗೆ ಕೇಳಿದಾಗಿನಿಂದ, ಅಲ್ಲಿಗೆ ಹೋಗಬೇಕೆಂಬ ಬಲವಾದ ಬಯಕೆ ಇದ್ದು. ಅಲ್ಲಿಗೆ ಬರುವುದನ್ನು ತಡೆಯಲು ನಮಗೆ ಸಾಧ್ಯವಾಗಲಿಲ್ಲ. ನಮ್ಮ ಸನಾತನ ಧರ್ಮ ಪರಂಪರೆಯ ಬಗ್ಗೆ ನಮಗೆ ಹೆಮ್ಮೆ ಇದೆ ಎಂದು ಅವರು ಹೇಳಿದ್ದಾರೆ.



ಮಖೇಜಾ, ಇದು ಸಂತೋಷದಾಯಕ, ಅಗಾಧವಾದ ಭಾವನೆ. ಅದನ್ನು ವ್ಯಕ್ತಪಡಿಸಲು ನನ್ನಲ್ಲಿ ಪದಗಳಿಲ್ಲ. ಇಂದು ನಾವು ಮತ್ತೊಂದು ಪವಿತ್ರ ಸ್ನಾನ ಮಾಡುತ್ತೇವೆ. ಇಲ್ಲಿಗೆ ಬರುವುದರಿಂದ ನಮ್ಮ ಸನಾತನ ಧರ್ಮ ಪರಂಪರೆಯ ಬಗ್ಗೆ ನಮಗೆ ಹೆಮ್ಮೆಯಾಗುತ್ತದೆ ಎಂದು ಹೇಳಿದ್ದಾರೆ. ಘೋಟಿಯ 11 ನೇ ತರಗತಿ ವಿದ್ಯಾರ್ಥಿನಿ ಸುರಭಿ, ತಾನು ಭಾರತ ಮತ್ತು ಮಹಾ ಕುಂಭಕ್ಕೆ ಮೊದಲ ಬಾರಿಗೆ ಬಂದಿದ್ದೇನೆ ಎಂದು ಹೇಳಿದ್ದಾರೆ. ಮೊದಲ ಬಾರಿಗೆ ನಾನು ನನ್ನ ಧರ್ಮವನ್ನು ಆಳವಾಗಿ ಅರ್ಥಮಾಡಿಕೊಳ್ಳಲು ಮತ್ತು ಅನುಭವಿಸಲು ಸಾಧ್ಯವಾಯಿತು. ಇದು ಅದ್ಭುತ ಅನುಭವ ಎಂದು ಬಣ್ಣಿಸಿದ್ದಾರೆ.

> ಕಳೆದ ವರ್ಷ ಏಪ್ರಿಲ್‌ನಲ್ಲಿ ಪಾಕಿಸ್ತಾನದಿಂದ 250 ಜನರು ಪ್ರಯಾಗ್‌ರಾಜ್‌ಗೆ ಬಂದು ಗಂಗಾ ಸ್ನಾನ ಮಾಡಿದ್ದಾರೆ. ಈ ಬಾರಿ ಸಿಂದ್‌ನ ಆರು ಜಿಲ್ಲೆಗಳಾದ ಘೋಟಿ, ಸುಕ್ಕೂರ್, ಖೈರ್‌ಪುರ್, ಶಿಕಾರ್‌ಪುರ್, ಕಾರ್ಕೋಟ್ ಮತ್ತು ಜಟಾಬಲ್‌ನಿಂದ 68 ಜನರು ಬಂದಿದ್ದಾರೆ ಅವರಲ್ಲಿ ಸುಮಾರು 50 ಜನರು ಮೊದಲ ಬಾರಿಗೆ ಭೇಟಿ ನೀಡಿದ್ದಾರೆ ಎಂದು ಅವರು ತಿಳಿಸಿದ್ದಾರೆ.

# ಮಾ.7ರಿಂದ ಎಚ್-1ಬಿ ವೀಸಾ ನೋಂದಣಿ ಆರಂಭ




**ನ್ಯೂಯಾರ್ಕ್:** ಮುಂಬರುವ ಆರ್ಥಿಕ ವರ್ಷದಲ್ಲಿ ಭಾರತೀಯ ಐಟಿ ವತ್ತಿಪರರು ಹೆಚ್ಚು ಬೇಡಿಕೆಯಿರುವ ಎಚ್-1ಬಿ ವೀಸಾಗಳ ಆರಂಭಿಕ ನೋಂದಣಿ ಅವಧಿಯು ಮಾ. 7 ರಂದು ಪ್ರಾರಂಭವಾಗುತ್ತದೆ ಮತ್ತು ಮಾರ್ಚ್ 24 ರಂದು ಮುಕ್ತಾಯಗೊಳ್ಳುತ್ತದೆ ಎಂದು ಫೆಡರಲ್ ಏಜೆನ್ಸಿ ತಿಳಿಸಿದೆ. ಎಚ್-1ಬಿ ವೀಸಾವು ವಲಸೆ ರಹಿತ ವೀಸಾ ಆಗಿದ್ದು, ಇದು ಯುಎಸ್ ಕಂಪನಿಗಳಿಗೆ ಸೈದ್ಧಾಂತಿಕ ಅಥವಾ ತಾಂತ್ರಿಕ ಪರಿಣತಿಯ ಅಗತ್ಯವಿರುವ ವಿಶೇಷ ಉದ್ಯೋಗಗಳಲ್ಲಿ ವಿದೇಶಿ ಉದ್ಯೋಗಿಗಳನ್ನು ನೇಮಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ.ಭಾರತ ಮತ್ತು ಚೀನಾದಂತಹ ದೇಶಗಳಿಂದ ಪ್ರತಿ ವರ್ಷ ಹತ್ತು ಸಾವಿರ ಉದ್ಯೋಗಿಗಳನ್ನು ನೇಮಿಸಿಕೊಳ್ಳಲು ತಂತ್ರಜ್ಞಾನ ಕಂಪನಿಗಳು ಇದನ್ನು ಅವಲಂಬಿಸಿವೆ. 2026 ರ ಹಣಕಾಸು ವರ್ಷದಲ್ಲಿ ವಿದೇಶಿ ಅತಿಥಿ ಉದ್ಯೋಗಿಗಳಿಗೆ ಹೆಚ್ಚು ಬೇಡಿಕೆಯಿರುವ ಎಚ್-1ಬಿ ವೀಸಾಗಳ ಆರಂಭಿಕ ನೋಂದಣಿ ಅವಧಿಯು ಮಾರ್ಚ್ 7 ರಂದು ಪೂರ್ವದ ಸಮಯ ಮಧ್ಯಾಹ್ನ ತೆರೆದುಕೊಳ್ಳುತ್ತದೆ, ಮಾರ್ಚ್ 24 ರಂದು ಮಧ್ಯಾಹ್ನ ಪೂರ್ವ ಸಮಯದವರೆಗೆ ನಡೆಯುತ್ತದೆ ಎಂದು ಯುಎಸ್ ಪೌರತ್ವ ಮತ್ತು ವಲಸೆ ಸೇವೆಗಳ ಇಲಾಖೆ ತಿಳಿಸಿದೆ. ಈ ಅವಧಿಯಲ್ಲಿ, ನಿರೀಕ್ಷಿತ ಅರ್ಜಿದಾರರು ಮತ್ತು ಪ್ರತಿನಿಧಿಗಳು ಪ್ರತಿ ಫಲಾನುಭವಿಯನ್ನು ಆಯ್ಕೆ ಪ್ರಕ್ರಿಯೆಗಾಗಿ ವಿದ್ಯುನ್ಮಾನವಾಗಿ ನೋಂದಾಯಿಸಲು ಯುಎಸ್‌ಸಿಐಎಸ್ ಆನ್‌ಲೈನ್ ಖಾತೆಯನ್ನು ಬಳಸಬೇಕು ಮತ್ತು ಪ್ರತಿ ಫಲಾನುಭವಿಗೆ ಸಂಬಂಧಿಸಿದ ನೋಂದಣಿ ಶುಲ್ಕವನ್ನು ಪಾವತಿಸಬೇಕು ಎಂದು ಅದು ಹೇಳಿದೆ.

ನೋಂದಣಿ ಶುಲ್ಕ 215 ಡಾಲರ್ ಆಗಿದೆ. ಎಚ್-1ಬಿ ವೀಸಾಗಳ ಮುಖ್ಯ ಫಲಾನುಭವಿಗಳು ಭಾರತೀಯರು, ಇದು ಪ್ರಪಂಚದಾದ್ಯಂತದ ಅತ್ಯುತ್ತಮ ಪ್ರತಿಭೆ ಮತ್ತು ಮಿದುಳುಗಳನ್ನು ತರುತ್ತದೆ.

ಭಾರತದಿಂದ ಹೆಚ್ಚು ನುರಿತ ವತ್ತಿಪರರು ಈ ವೀಸಾಗಳೊಂದಿಗೆ ಅಮೆರಿಕಕಕ್ಕೆ ತೆರಳುತ್ತಾರೆ.

# ಗರ್ಭಿಣಿಗೆ ಲೈಂಗಿಕ ಕಿರುಕುಳ ನೀಡಿ ರೈಲಿನಿಂದ ತಳ್ಳಿದ ಕಾಮುಕ

**ಚೆನ್ನೈ:** ಗರ್ಭಿಣಿಗೆ ಲೈಂಗಿಕ ಕಿರುಕುಳ ನೀಡಿ ಚಲಿಸುತ್ತಿದ್ದ ರೈಲಿನಿಂದ ಕೆಳಗೆ ತಳ್ಳಿರುವ ಹದಯ ವಿದ್ರಾವಕ ಘಟನೆ ತಮಿಳುನಾಡಿನ ಕೊಯಮತ್ತೂರಿನಲ್ಲಿ ನಡೆದಿದೆ. ಕೊಯಮತ್ತೂರಿನಿಂದ ಚಿತ್ತೂರಿಗೆ ಪ್ರಯಾಣಿಸುತ್ತಿದ್ದ ಇಂಟರ್ ಸಿಟಿ ರೈಲಿನಲ್ಲಿ ಮಹಿಳಾ ಬೋಗಿಯಲ್ಲಿದ್ದ ನಾಲ್ಕು ತಿಂಗಳ ಗರ್ಭಿಣಿಗೆ ಕಾಮುಕನೊಬ್ಬ ಲೈಂಗಿಕ ಕಿರುಕುಳ ನೀಡಿದ್ದಲ್ಲದ್ದೆ ಆಕೆಯನ್ನು ರೈಲಿನಿಂದ ಕೆಳಗೆ ತಳ್ಳಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ತಿರುಪ್ಪೂರು ಜಿಲ್ಲೆಯ ಅವಿನಾಶಿಯ ಮಹಿಳೆ ಕೊಯಮತ್ತೂರಿನಿಂದ ತಿರುಪತಿಗೆ ತೆರಳುತ್ತಿದ್ದಾಗ ವೆಲ್ಲೂರು ಜಿಲ್ಲೆಯ ಕೆವಿ ಕುಪ್ಪಂ ಬಳಿ ರೈಲಿನಲ್ಲಿ ಈ ಘಟನೆ ಸಂಭವಿಸಿದೆ.

ಮಹಿಳೆ ಕೊಯಮತ್ತೂರಿನಲ್ಲಿ ರೈಲು ಹತ್ತಿದ್ದಳು, ಮಹಿಳಾ ಪ್ರಯಾಣಿಕರ ಸುರಕ್ಷತೆ ಮತ್ತು ಭದ್ರತೆಗಾಗಿ ಗೊತ್ತುಪಡಿಸಿದ್ದ ಮಹಿಳಾ ವಿಭಾಗದಲ್ಲಿ ಪ್ರಯಾಣಿಸುತ್ತಿದ್ದರು. ಆದರೆ, ಜೋಲಾರ್ ಪೇಟೆಯಲ್ಲಿ ರೈಲು ಹತ್ತಿದ ವ್ಯಕ್ತಿಯೊಬ್ಬ ಗರ್ಭಿಣಿಗೆ ತೊಂದರೆ ಕೊಟ್ಟಿದೆ. ಮಾತವಲ್ಲ, ಆಕೆಗೆ ಲೈಂಗಿಕ ಕಿರುಕುಳ ನೀಡಿದ್ದಾನೆ. ಮಹಿಳೆ ಶೌಚಾಲಯಕ್ಕೆ ಹೋದಾಗ ಆ ವ್ಯಕ್ತಿ ಆಕೆಯ ಮೇಲೆ ಲೈಂಗಿಕ ಕಿರುಕುಳ ನೀಡಿದಾಗ ಪರಿಸ್ಥಿತಿ ವಿಕೋಪಕ್ಕೆ ತಿರುಗಿತು. ಆಕೆ ಸಹಾಯಕ್ಕಾಗಿ ಕಿರುಚಿದಾಗ, ದುಷ್ಕರ್ಮಿ ಯಾವುದೇ ಕರುಣೆ ತೋರಿಸದೆ ಆಕೆಯನ್ನು ರೈಲಿನಿಂದ ಕ್ರೂರವಾಗಿ ಕೆಳಗೆ ತಳ್ಳಿದ್ದಾರೆ. ಸಹಾಯಕ್ಕಾಗಿ ಮಹಿಳೆಯ ಕೂಗು ಕೇಳಿ ದಾರಿಹೋಕರು ಧಾವಿಸಿ ಬಂದು ಆಕೆಯನ್ನು ರಕ್ಷಿಸಿ ವೆಲ್ಲೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದರಿಂದ ಆಕೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

> ಮಹಿಳೆಯ ಕೈ ಮತ್ತು ಕಾಲುಗಳಲ್ಲಿ ಮೂಳೆ ಮುರಿತಗಳಾಗಿದ್ದು, ತೀವ್ರ ಚಿಕಿತ್ಸೆ ನೀಡಲಾಗುತ್ತಿದೆ. ಘಟನೆಯ ಬಗ್ಗೆ ಪೊಲೀಸರು ತನಿಖೆ ಆರಂಭಿಸಿದ್ದು, ಮಹಿಳೆಯ ಗುರುತಿನ ಆಧಾರದ ಮೇಲೆ ಕೆ.ವಿ. ಕುಪ್ಪಂ ಪ್ರದೇಶದ ಪೂಂಚೋಲೈ ಗ್ರಾಮದ ಹೇಮರಾಜ್ ಎಂಬ ಯುವಕನನ್ನು ಬಂಧಿಸಿದ್ದಾರೆ. ಹೆಚ್ಚಿನ ತನಿಖೆ ನಡೆಯುತ್ತಿದೆ. ಈ ಘಟನೆಯು ಸಾರ್ವಜನಿಕ ಸ್ಥಳಗಳಲ್ಲಿ, ವಿಶೇಷವಾಗಿ ರೈಲುಗಳಲ್ಲಿ ಮಹಿಳೆಯರ ಸುರಕ್ಷತೆಯ ಬಗ್ಗೆ ಗಂಭೀರ ಕಳವಳವನ್ನು ಹುಟ್ಟುಹಾಕಿದೆ. ಮಹಿಳೆಯರಿಗೆ ಮಾತ್ರ ಪ್ರತ್ಯೇಕ ಬೋಗಿಗಳಿದ್ದರೂ, ಮಹಿಳಾ ಪ್ರಯಾಣಿಕರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ಟೀಕಿಸಲಾಗಿದೆ.

# ರಾಷ್ಟ್ರ ರಾಜಧಾನಿಯ ಗದ್ದುಗೆ ಯಾರಿಗೆ?

**ನವದೆಹಲಿ:** ಜಿದ್ದಾಜಿದ್ದಿನ ಕಣವಾಗಿರುವ ರಾಷ್ಟ್ರ ರಾಜಧಾನಿ ನವದೆಹಲಿ ವಿಧಾನಸಭಾ ಕ್ಷೇತ್ರದ ಚುನಾ ವಣಾ ಫಲಿತಾಂಶ ಇಂದು ಪ್ರಕಟವಾಗಲಿದೆ. ಬೆಳಿಗ್ಗೆ 8 ಗಂಟೆಗೆ ಒಟ್ಟು 19 ಮತಕೇಂದ್ರಗಳಲ್ಲಿ ಎಣಿಕೆ ಆರಂಭವಾಗಲಿದ್ದು, ಬಹುತೇಕ ಮಧ್ಯಾಹ್ನದ ವೇಳೆಗೆ ಫಲಿತಾಂಶದ ಸ್ಪಷ್ಟ ಚಿತ್ರಣ ಸಿಗಲಿದೆ. ಮತ ಎಣಿಕೆಗೆ ಚುನಾವಣಾ ಆಯೋಗ ಈಗಾಗಲೇ ಎಲ್ಲಾ ರೀತಿಯ ಸಿದ್ಧತೆಗಳನ್ನು ಪೂರ್ಣಗೊಳಿಸಿದ್ದು, ಮತ ಕೇಂದ್ರಕ್ಕೆ ಅಭ್ಯರ್ಥಿಗಳ ಏಜೆಂಟರು ಹೊರತು ಪಡಿಸಿ ಬೇರೆಯವರು ಮತಕೇಂದ್ರದಿಂದ ಆಚೆ ಇರಬೇಕೆಂದು ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಮತಎಣಿಕೆ ಕೇಂದ್ರದ ಸುತ್ತಮುತ್ತ 144 ಸೆಕ್ಷನ್ ಹಾಕಲಾಗಿದ್ದು, ಅನಗತ್ಯವಾಗಿ ಒಳಗೆ ಬರುವುದು ಇಲ್ಲವೇ ಎಣಿಕೆ ಕೇಂದ್ರದ ಬಳಿ ಗುಂಪುಗೂಡುವುದನ್ನು ಆಯೋಗ ನಿಷೇಧ ಮಾಡಿದೆ. ಮತಗಳ ಎಣಿಕೆ ನಡೆಯುತ್ತಿರುವುದರ ಹಿನ್ನೆಲೆಯಲ್ಲಿ ಆಯೋಗವು ಕೆಲವು ಶಾಲೆಗಳಿಗೆ ಮಾತ್ರ ರಜೆಯನ್ನು ಘೋಷಣೆ ಮಾಡಿದೆ. ಉಳಿದಂತೆ ಅನ್ಯ ಕಚೇರಿಗಳು ಎಂದಿನಂತೆ ಕಾರ್ಯ ನಿರ್ವಹಿಸುತ್ತಿವೆ ಎಂದು ಸ್ಪಷ್ಟಪಡಿಸಿದೆ. 2015, 2020 ರಲ್ಲಿ ಅಭೂತಪೂರ್ವ ಜನಾದೇಶ ಪಡೆದು ಬಿಜೆಪಿ, ಕಾಂಗ್ರೆಸ್ ಪಕ್ಷವನ್ನು ಧೂಳೀಪಟ ಮಾಡಿದ್ದ ಆಮ್ ಆದಿ ಈ ಬಾರಿ ಅಧಿಕಾರ ಕಳೆದುಕೊಳ್ಳುವ ಸಾಧ್ಯತೆಯಿದೆ ಎಂದು ಮತಗಟ್ಟೆ ಸಮೀಕ್ಷೆಗಳು ಭವಿಷ್ಯ ನುಡಿದಿದೆ. ಮತದಾನ ನಡೆದ ನಂತರ ಸುಮಾರು 12 ಖಾಸಗಿ ಏಜೆನ್ಸಿಗಳು ನಡೆಸಿರುವ ಸಮೀಕ್ಷೆ ಪ್ರಕಾರ, 10 ಏಜೆನ್ಸಿಗಳು ಬಿಜೆಪಿ ಅಧಿಕಾರಕ್ಕೆ ಮರಳಲಿದೆ ಎಂದು ಹೇಳಿದರೆ.

ಎರಡು ಸಮೀಕ್ಷೆಗಳು ಮಾತ್ರ ಎಎಪಿ ಪುನಃ ಅಧಿಕಾರ ಹಿಡಿಯಲಿದೆ ಎಂದು ಹೇಳಿವೆ. 27 ವರ್ಷಗಳ ನಂತರ ದೆಹಲಿಯಲ್ಲಿ ಸ್ವಂತ ಬಲದ ಮೇಲೆ ಅಧಿಕಾರ ಗದ್ದುಗೆ ಹಿಡಿಯಲೇಬೇಕೆಂದು ಪಣ ತೊಟ್ಟಿರುವ ಬಿಜೆಪಿ ಗೆಲ್ಲಲು ಬೇಕಾದ ಎಲ್ಲಾ ರಣತಂತ್ರಗಳನ್ನು ರೂಪಿಸಿತ್ತು. ಸುಮಾರು 50 ಸಾವಿರಕ್ಕೂ ಹೆಚ್ಚು ಆರ್‌ಎಸ್‌ಎಸ್ನ ಕಾರ್ಯಕರ್ತರು ಕಳೆದ ಆರು ತಿಂಗಳಿನಿಂದ ಬಿಜೆಪಿ ಪರವಾಗಿ ಕೆಲಸ ಮಾಡಿದ್ದರು.

ಪ್ರಧಾನಿ ನರೇಂದ್ರ ಮೋದಿಯವರ ಅಲೆ, ಕೇಂದ್ರ ಸರ್ಕಾರದ ಸಾಧನೆಗಳನ್ನು ಮುಂದಿಟ್ಟುಕೊಂಡು ಪ್ರಚಾರ ನಡೆಸಿತ್ತು. ಎಎಪಿಯ ಭ್ರಷ್ಟಾಚಾರ ಮಾಜಿ ಸಿಎಂ ಅರವಿಂದ್ ಕೇಜ್ರಿವಾಲ್, ಮಾಜಿ ಡಿಸಿಎಂ ಮನೀಶ್ ಸಿಸೋಡಿಯಾ ಜೈಲಿಗೆ ಹೋಗಿದ್ದು ಸಾಲುಸಾಲು ಸಚಿವರ ಭ್ರಷ್ಟಾಚಾರ ಸ್ವತಃ ಕೇಜ್ರಿವಾಲ್‌ರವರ ಭವ್ಯ ಮನೆ ನಿರ್ಮಾಣ ವಿವಾದಕ್ಕೆ ಕಾರಣವಾಗಿತ್ತು. ಇದರ ನಡುವೆಯೂ ಎಎಪಿ ಕಳೆದ ಎರಡು ಅವಧಿಯಲ್ಲಿ ದೆಹಲಿ ಜನರಿಗೆ ಮಾಡಿದ ಸಾಧನೆಗಳನ್ನೇ ಮುಂದಿಟ್ಟುಕೊಂಡು ಪ್ರಚಾರ ನಡೆಸಿತ್ತು. ದೆಹಲಿಯಲ್ಲಿ ಒಟ್ಟು 70 ವಿಧಾ ನಸಭಾ ಕ್ಷೇತ್ರಗಳಿದ್ದು, ಸರಳ ಬಹುಮತಕ್ಕೆ 36 ಸ್ಥಾನಗಳ ಅವಶ್ಯಕತೆಯಿದೆ. ಮತ ದಾರರ ನಾಡಿಮಿಡಿತ ಏನೆಂಬುದು ಇಂದು ಫಲಿತಾಂಶದಿಂದಲೇ ಸ್ಪಷ್ಟವಾಗಲಿದೆ.




# ಉಜ್ಜಯಿನಿಯಿಂದ ಹಿಂತಿರುಗುತ್ತಿದ್ದಾಗ ಭೀಕರ ಅಪಘಾತ

**ಮಧ್ಯಪ್ರದೇಶ:** ಉಜ್ಜಯಿನಿ ಮಹಾಕಾಳೇಶ್ವರ ದೇವಸ್ಥಾನದಿಂದ ಹಿಂತಿರುತ್ತಿದ್ದಾಗ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಆರು ಜನರು ಸಾವನ್ನಪ್ಪಿದ್ದು, 16 ಜನರು ಗಂಭೀರವಾಗಿ

ಗಾಯಗೊಂಡಿದ್ದಾರೆ. ಇಂದೋರ್ ಜಿಲ್ಲೆಯ ಮೌ ತಹಸಿಲ್‌ನಲ್ಲಿರುವ ಮಾನ್ಪುರ ಪ್ರದೇಶದ ಬಳಿ ಶುಕ್ರವಾರ ಬೆಳಗ್ಗಿನ ಜಾವ 4 ಗಂಟೆ ಸುಮಾರಿಗೆ ಬೈಕ್ - ಟ್ರಾವೆಲರ್ - ಟ್ಯಾಂಕರ್ ನಡುವೆ ಅಪಘಾತ ಸಂಭವಿಸಿದೆ. ಭೀಕರ ಅಪಘಾತದಲ್ಲಿ ಬೈಕ್ ಸವಾರಿಬ್ಬರು ಸೇರಿ ನಾಲ್ವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಇನ್ನಿಬ್ಬರು ಚಿಕಿತ್ಸೆ ಫಲಿಸದೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಮೃತರ ಪೈಕಿ ಇಬ್ಬರು ಬೆಳಗಾವಿಯ ಗಣೇಶಪುರದ ನೀತಾ ಮತ್ತು ಸಾಗರ ಎಂದು ತಿಳಿದು ಬಂದಿದೆ.

ಯಾತ್ರಾರ್ಥಿಗಳು ಸಂಚರಿಸುತ್ತಿದ್ದ ವಾಹನ ಮೊದಲು ಬೈಕ್‌ಗೆ ಡಿಕ್ಕಿ ಹೊಡೆದು, ನಂತರ ಟ್ಯಾಂಕರ್‌ಗೆ ಡಿಕ್ಕಿ ಹೊಡೆದಿದೆ. ಅಪಘಾತದ ತೀವ್ರತೆಗೆ ನಾಲ್ವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಇನ್ನಿಬ್ಬರು ಇಂದೋರ್‌ನ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.



ಗಾಯಗಳಿಗೆ ತುತ್ತಾಗಿದ್ದಾರೆ. 'ಅಪಘಾತದ ಪರಿಣಾಮ ಬೈಕ್ ಸವಾರರಾದ ಧರ್ಮಪುರಿಯ ಹಿಮಾಂಶು ಮತ್ತು ಸಂಧ್ಯಾದ ಶುಭಂ ಮಾನ್ಪುರ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಅಪಘಾತದ ಕಾರಣ ಪತ್ತೆ ಮಾಡಲು

### ಹೆಚ್ಚುವರಿ ಜಿಲ್ಲಾಧಿಕಾರಿ ಪ್ರತಿಕ್ರಿಯೆ

'ಮುಂಜಾನೆ 4 ಗಂಟೆ ಸುಮಾರಿಗೆ ಇಂದೋರ್‌ನ ಗ್ಲೋವ್‌ನ ಮಾನುರ ಪ್ರದೇಶದ ಬಳಿ ಬೈಕ್, ಮಿನಿ ಬಸ್ ಮತ್ತು ಟ್ಯಾಂಕರ್ ನಡುವೆ ರಸ್ತೆ ಅಪಘಾತ ಸಂಭವಿಸಿದ್ದು, ನಾಲ್ವರು ಸ್ಥಳದಲ್ಲೇ ಸಾವನ್ನಪ್ಪಿದರು. ಗಾಯಾಳುಗಳಿಬ್ಬರು ಆಸ್ಪತ್ರೆಯಲ್ಲಿ ಮೃತಪಟ್ಟರು. ಸದ್ಯ 16 ಜನರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇಬ್ಬರ ಸ್ಥಿತಿ ಗಂಭೀರವಾಗಿದೆ. ಪ್ರಯಾಣಿಕರು ಉಜ್ಜಯಿನಿ ಮಹಾಕಾಳೇಶ್ವರ ದೇವಸ್ಥಾನ ಮತ್ತು ಓಂಕಾರೇಶ್ವರ ದೇವಸ್ಥಾನದಿಂದ ವಾಪಾಸಾಗುತ್ತಿದ್ದರು. ಮಿನಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದವರು ಕರ್ನಾಟಕದ ಬೆಳಗಾವಿ ಜಿಲ್ಲೆಯ ನಿವಾಸಿಗಳಾಗಿದ್ದಾರೆ. ಅಪಘಾತಕ್ಕೆ ಕಾರಣಗಳನ್ನು ಪತ್ತೆ ಮಾಡಲು ತನಿಖೆ ಕೈಗೊಳ್ಳಲಾಗುತ್ತದೆ' ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ರೋಷನ್ ರೈ ಪ್ರತಿಕ್ರಿಯಿಸಿದ್ದಾರೆ.

ಗಾಯಗೊಂಡ 16 ಜನರನ್ನು ಚಿಕಿತ್ಸೆ ನೀಡಲಾಗುತ್ತಿದೆ. ಒಂದು ಮಗುವನ್ನು ಮಕ್ಕಳ ತೀವ್ರ ನಿಗಾ ಘಟಕದಲ್ಲಿ ಇರಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಚಿಕಿತ್ಸೆ ಪಡೆಯುತ್ತಿರುವ ಬಹು ತೇಕರು ಮುರಿತ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ.

ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ ಎಂದು ಪೊಲೀಸ್ ಠಾಣೆಯ ಎಸ್‌ಐ ರವಿ ತಿಳಿಸಿದ್ದಾರೆ.

# ಜಿಬಿಎಸ್‌ಗೆ ಮತ್ತೊಬ್ಬ ವ್ಯಕ್ತಿ ಬಲಿ, ಮೃತರ ಸಂಖ್ಯೆ 6ಕ್ಕೆ ಏರಿಕೆ




**ಪುಣೆ:** ಮಹಾರಾಷ್ಟ್ರದ ಪುಣೆ ಜಿಲ್ಲೆಯಲ್ಲಿ 63 ವರ್ಷದ ವ್ಯಕ್ತಿಯೊಬ್ಬರು ಸಾವನ್ನಪ್ಪಿದ ನಂತರ ಗುಯಿಲಿನ್-ಬಾರ್ರೆ ಸಿಂಡ್ರೋಮ್ (ಜಿಬಿಎಸ್) ಶಂಕಿತ ಸಾವುಗಳ ಸಂಖ್ಯೆ 6 ಕ್ಕೆ ಏರಿದೆ ಎಂದು ವರದಿಯಾಗಿದೆ.ಜ್ವರ, ಸಡಿಲ ಚಲನೆಗಳು ಮತ್ತು ಕೆಳಗಿನ ಅಂಗದಲ್ಲಿ ದೌರ್ಬಲ್ಯದಿಂದ ದೂರಿದ ನಂತರ ವ್ಯಕ್ತಿಯನ್ನು ಸಿನ್ಹಗಡ್ ರಸ್ತೆ ಪ್ರದೇಶದ ಆಸ್ಪತ್ರೆಗೆ ದಾಖಲಿಸಲಾಯಿತು ಮತ್ತು ಜಿಬಿಎಸ್ ರೋಗನಿರ್ಣಯ ಮಾಡಲಾಯಿತು ಎಂದು ವೈದ್ಯರು ತಿಳಿಸಿದ್ದಾರೆ. ಬುಧ ವಾರದಂದು ಅವರ ಸ್ಥಿತಿ ಹದಗೆಟ್ಟಿತು ಮತ್ತು ಅವರು ತೀವ್ರವಾದ ಇಸ್ಕೆಮಿಕ್ ಸ್ಟ್ರೋಕ್‌ನಿಂದ ನಿಧನರಾದರು ಎಂದು ಪುಣೆ ಮುನ್ಸಿಪಲ್ ಕಾರ್ಪೊರೇಷನ್ ಆರೋಗ್ಯ ಅಧಿಕಾರಿ ತಿಳಿಸಿದ್ದಾರೆ. ಮೂರು ಹೊಸ ಪ್ರಕರಣಗಳ ಪತ್ತೆ ಯೊಂದಿಗೆ, ಪುಣೆಯಲ್ಲಿ ಶಂಕಿತ ಜಿಬಿಎಸ್ ಪ್ರಕರಣಗಳ ಸಂಖ್ಯೆ 173 ಕ್ಕೆ ಏರಿದೆ ಎಂದು ಮಹಾರಾಷ್ಟ್ರ ಆರೋಗ್ಯ ಇಲಾಖೆ ಪ್ರಕಟಣೆ ತಿಳಿಸಿದೆ.


ಈ ಪೈಕಿ 140 ಮಂದಿಗೆ ಜಿಬಿಎಸ್ ಇರುವುದು ಪತ್ತೆಯಾಗಿದೆ. 173 ಮಂದಿಯಲ್ಲಿ ಒಟ್ಟು 34 ರೋಗಿಗಳು ಪುಣೆ ಮುನ್ಸಿಪಲ್ ಕಾರ್ಪೊರೇಷನ್ ವ್ಯಾಪ್ತಿಯಿಂದ, 87 ಪಿಎಂಸಿ ಪ್ರದೇಶದಲ್ಲಿ ಹೊಸದಾಗಿ ಸೇರ್ಪಡೆಗೊಂಡ ಗ್ರಾಮಗಳಿಂದ, 22 ಪಿಂಪ್ರಿ ಚಿಂಚ್‌ವಾಡ್ ನಾಗರಿಕ ಮಿತಿಯಿಂದ, 22 ಜಿಲ್ಲೆಯ ಗ್ರಾಮೀಣ ಭಾಗಗಳಿಂದ ಮತ್ತು ಎಂಟು ಇತರ ಜಿಲ್ಲೆಗಳಿಂದ ಬಂದವರು ಎಂದು ಪ್ರಕಟಣೆ ತಿಳಿಸಿದೆ. ಬಿಡುಗಡೆಯಾದ 173 ರಲ್ಲಿ, 72 ಜನರನ್ನು ಬಿಡುಗಡೆ ಮಾಡಲಾಗಿದೆ, 55 ಐಸಿಯುನಲ್ಲಿ ಮತ್ತು 21 ವೆಂಟಿಲೇಟರ್ ಬೆಂಬಲದಲ್ಲಿದೆ. ಅತಿ ಹೆಚ್ಚು ಜಿಬಿಎಸ್ ಪ್ರಕರಣಗಳು ವರದಿಯಾಗಿರುವ ನಾಂದೇಡ್ ಗ್ರಾಮದ ಸಮೀಪದಲ್ಲಿರುವ ಹೌಸಿಂಗ್ ಸೊಸೈಟಿಯ ಟ್ಯಾಪ್ ವಾಟರ್ ಸ್ಯಾಂಪಲ್ ಕ್ಯಾಂಪೈಲೋಬ್ಯಾಕ್ಟರ್ ಜೆಜುನಿಗೆ ಧನಾತಕ ಪರೀಕ್ಷೆ ನಡೆಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಇದು ಸಾಮಾನ್ಯ ಬ್ಯಾಕ್ಟೀರಿಯಾದ ರೋಗಕಾರಕವಾಗಿದ್ದು ಅದು ಗ್ಯಾಸ್ಟ್ರೋಎಂಟರೈಟಿಸ್ ಅನ್ನು ಉಂಟುಮಾಡುತ್ತದೆ ಮತ್ತು ಜಿಬಿಎಸ್ ಅನ್ನು ಪ್ರಚೋದಿಸಬಹುದು ಎಂದು ಅವರು ಹೇಳಿದರು. ಸಿನ್ಹಗಡ್ ರಸ್ತೆ ಪ್ರದೇಶದ ನಾಂದೇಡ್ ಗ್ರಾಮದ 5 ಕಿಲೋಮೀಟರ್ ವ್ಯಾಪ್ತಿಯೊಳಗೆ ಜಿಬಿಎಸ್ ಏಕಾಏಕಿ ತನಿಖೆ ನಡೆಸಲು ರಚಿಸಲಾದ ರಾಪಿಡ್ ರೆಸ್ಪಾನ್ಸ್ ಟೀಮ್ (ಆರ್‌ಆರ್‌ಟಿ) ಯ ಹಿರಿಯ ಆರೋಗ್ಯ ಅಧಿಕಾರಿಯೊಬ್ಬರು ಈ ಬೆಳವಣಿಗೆಯನ್ನು ಖಚಿತಪಡಿಸಿದ್ದಾರೆ.

### 45 ಕಿ.ಮೀ. ನಡೆದೆವು... ದಾರಿಯಲ್ಲಿ ಶವಗಳು ಬಿದ್ದಿದ್ದವು, ಎರಡು ದಿನಗಳ ಕಾಲ ನಡೆದುಕೊಂಡು ಹೋಗಬೇಕಾಯಿತು

# ಅಮೆರಿಕದಿಂದ ಗಡಿಪಾರಾಗಿ ಬಂದವರು ಹೇಳಿದ ಸತ್ಯ ಘಟನೆ

**ವಾಷಿಂಗ್ಟನ್:** ದಕ್ಷಿಣ ಅಮೆರಿಕಕ್ಕೆ ದೀರ್ಘ ವಿಮಾನ ಪ್ರಯಾಣ, ಅಪಾಯಕಾರಿ ಸಮುದ್ರಗಳಲ್ಲಿ ದೋಣಿ ಪ್ರಯಾಣ, ಕಠಿಣ ಭೂಪ್ರದೇಶಗಳಲ್ಲಿ ಪಾದಯಾತ್ರೆ, ಅಮೆರಿಕ ಮೆಕ್ಸಿಕೊ ಗಡಿಯಲ್ಲಿ ಕತ್ತಲಿನ ಹಾದಿಗಳು, ಹಾದಿಯ ಅಲ್ಲಲ್ಲಿ ಬಿದ್ದಿರುವ ಹೆಣಗಳು, ಅವುಗಳನ್ನು ನೋಡುತ್ತಾ ಮನಸ್ಸಿನ ದುಗುಡದಿಂದಲೇ ಗಡಿಪಾರು ವಿಮಾನ ಹತ್ತಿಕೊಂಡು ಭಾರತಕ್ಕೆ ವಾಪಸ್ - ಕೈ ತುಂಬಾ ದುಡಿಯುವ ಆಸೆಯಿಂದ ವಾಮಮಾರ್ಗಗಳಲ್ಲಿ ಅಮೆರಿಕ ಸೇರಿ, ಇದೀಗ ಟ್ರಂಪ್ ಅವರ ಸರ್ಕಾರದ ಕಠಿಣ ಕ್ರಮಗಳಿಂದಾಗಿ ಭಾರತಕ್ಕೆ ಗಡೀಪಾರಾಗಿ ಬಂದವರು ಹೇಳುತ್ತಿರುವ ಕಥೆ.

ಅಮೆರಿಕ ಹಾಗೂ ಮೆಕ್ಸಿಕೋ ಗಡಿಭಾಗ ಎಂದರೆ ಅದು ವಾಮಮಾರ್ಗಗಳಲ್ಲಿ ಅಮೆರಿಕ ಪ್ರವೇಶಿಸುವವರಿಗೆ ಗೌಪ್ಯವಾದ ಹೆದ್ದಾರಿಯಿದ್ದಂತೆ. ಅಲ್ಲಿಂದ ಅಮೆರಿಕದೊಳಕ್ಕೆ ನುಸುಳಿದವರಲ್ಲಿ ಹೊಶಿಯಾರ್‌ಪುರ್ ಜಿಲ್ಲೆಯ ತಾಲಿ ಗ್ರಾಮದ ಹರ್ವಿಂದರ್ ಸಿಂಗ್ ಕೂಡ ಒಬ್ಬರು. ಅವರು ತಮ್ಮನ್ನು ಅಮೆರಿಕಕ್ಕೆ ಕಳುಹಿಸುವ ವ್ಯವಸ್ಥೆ ಮಾಡುವ ಏಜೆಂಟ್‌ಗೆ 42 ಲಕ್ಷ ರೂಪಾಯಿ ಪಾವತಿಸಿದ್ದರು. ಆದರೆ ವೀಸಾ ಸಿಗದ ಕಾರಣ, ದೆಹಲಿಯಿಂದ ಕತಾರ್, ನಂತರ ಬ್ರೆಜಿಲ್‌ಗೆ ವಿಮಾನದಲ್ಲಿ ಕಳುಹಿಸಲಾಯಿತು.




ಬ್ರೆಜಿಲ್‌ನಲ್ಲಿ, ಪೆರುವಿನಿಂದ ವಿಮಾನ ಹತ್ತಿಸುವುದಾಗಿ ಹೇಳಿ ದರು, ಆದರೆ ಅಂತಹ ಯಾವುದೇ ವಿಮಾನ ಇರಲಿಲ್ಲ. ನಂತರ ಟ್ಯಾಕ್ಸಿಗಳು ನಮ್ಮನ್ನು ಕೊಲಂಬಿಯಾಕ್ಕೆ ಮತ್ತು ನಂತರ ಪನಾಮದ ಆರಂಭಕ್ಕೆ ಕರೆದೊಯ್ದವು. ಅಲ್ಲಿಂದ, ಹಡಗು ನಮ್ಮನ್ನು ಸಾಗಿಸುತ್ತದೆ ಎಂದು ಹೇಳಲಾಯಿತು, ಆದರೆ ಯಾವುದೇ ಹಡಗು ಇರಲಿಲ್ಲ. ಎರಡು ದಿನಗಳ ಕಾಲ ನಡೆದುಕೊಂಡು ಹೋಗಬೇಕಾಯಿತು ಎಂದು ಅವರು ವರದಿಗಾರರಿಗೆ ತಿಳಿಸಿದರು. ದಾರಾಪುರ ಗ್ರಾಮದ ಸುಖಪಾಲ್ ಸಿಂಗ್ ಅವರು ಸಹ ಇದೇ ರೀತಿಯ ಸಂಕಷ್ಟವನ್ನು ಎದುರಿಸಿದರು. 15 ಗಂಟೆಗಳ ಕಾಲ ಸಮುದ್ರ ಮಾರ್ಗ ವಾಗಿ ಪ್ರಯಾಣಿಸಿ, 40-45 ಕಿಲೋಮೀಟರ್‌ಗಳಷ್ಟು ಬೆಟ್ಟಗಳ ಮೂಲಕ ನಡೆದರು. ಯಾರಾದರೂ ಗಾಯಗೊಂಡರೆ, ಅವರನ್ನು ಸಾಯಲು ಬಿಡಲಾಗುತ್ತಿತ್ತು. ದಾರಿಯಲ್ಲಿ ನಾವು ಅನೇಕ ಶವಗಳನ್ನು ನೋಡಿದ್ದೇವೆ ಎಂದು ಅವರು ಹೇಳಿದರು. ಜಲಂಧರ್ ಜಿಲ್ಲೆಯ ಸ್ಥಳೀಯರಾದ ಇವರು, ಯುಎಸ್‌ಗೆ ಪ್ರವೇಶಿಸುವ ಮೊದಲು ಮೆಕ್ಸಿಕೊದಲ್ಲಿ ಬಂಧಿತರಾದರು. ನಮ್ಮನ್ನು 14 ದಿನಗಳ ಕಾಲ ಕತ್ತಲಿನ ಕೋಶದಲ್ಲಿ ಇರಿಸಲಾಗಿತ್ತು. ಸೂರ್ಯನನ್ನೇ ನೋಡಲಿಲ್ಲ. ಇದೇ ರೀತಿಯ ಸಂದರ್ಭಗಳಲ್ಲಿ ಸಾವಿರಾರು ಪಂಜಾಬಿ ಹುಡುಗರು, ಕುಟುಂಬಗಳು ಮತ್ತು ಮಕ್ಕಳಿದ್ದಾರೆ ಎಂದು ಅವರು ಹೇಳಿದರು. ಕಪೂರ್ತಲದ ಬೆಹ್ಬಾಲ್ ಬಹದ್ದೂರ್‌ನಲ್ಲಿ, ಗುರ್‌ಪ್ರೀತ್ ಸಿಂಗ್ ಅವರ ಕುಟುಂಬವು ತಮ್ಮ ಮನೆಯನ್ನು ಒತ್ತೆಯಿಟ್ಟು ವಿದೇಶಕ್ಕೆ ಕಳುಹಿಸಲು ಹಣವನ್ನು ಸಾಲ ಪಡೆದಿತ್ತು. ಫತೇಘರ್ ಸಾಹಿಬ್‌ನಲ್ಲಿ, ಜಸ್ವಿಂದರ್ ಸಿಂಗ್ ಅವರ ಕುಟುಂಬವು ಅವರನ್ನು ವಿದೇಶಕ್ಕೆ ಕಳುಹಿಸಲು 50 ಲಕ್ಷ ರೂಪಾಯಿ ಖರ್ಚು ಮಾಡಿದೆ. ಈಗ ಹೆಚ್ಚಿನ ಬಡ್ಡಿದರದಲ್ಲಿ ಪಡೆದ ಸಾಲಗಳನ್ನು ತೀರಿಸಬೇಕಾಗಿದೆ. ಜಲಂಧರ್, ಹೊಶಿಯಾರ್‌ಪುರ್, ಕಪೂರ್ತಲ, ನವಾನ್‌ಶಹರ್ ಜಿಲ್ಲೆಗಳು ಪಂಜಾಬ್‌ನಲ್ಲಿ ಬೆಲ್ಟ್ ಅನ್ನು ಒಳಗೊಂಡಿವೆ. ಪ್ರತಿ ವರ್ಷ ಹೆಚ್ಚಿನ ಸಂಖ್ಯೆಯಲ್ಲಿ ವಲಸೆ ನಡೆಯುತ್ತಿರುವ ಜಿಲ್ಲೆಗಳಿವು.

> ಅಮೆರಿಕನ್ ಕನಸು ಭಗ್ನವಾಗಿದೆ. ಅಮೃತಸರಕ್ಕೆ ಬಂದಿಳಿದ ಅಮೆರಿಕ ಮಿಲಿಟರಿ ವಿಮಾನದಲ್ಲಿ ಹರಿಯಾಣ ಮತ್ತು ಗುಜರಾತ್‌ನಿಂದ ತಲಾ 33, ಪಂಜಾಬ್‌ನಿಂದ 30, ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದಿಂದ ತಲಾ ಮೂರು ಮತ್ತು ಚಂಡೀಗಢದಿಂದ ಇಬ್ಬರು ವಲಸಿಗರು ಇದ್ದರು. 19 ಮಹಿಳೆಯರು, 13 ಅಪ್ರಾಪ್ತ ವಯಸ್ಕರು ಸಹ ಇದ್ದರು. ವಲಸಿಗರು ಏಜೆಂಟರಿಗೆ ಲಕ್ಷಾಂತರ ರೂಪಾಯಿ ಹಣ ಪಾವತಿಸಿ ವಂಚನೆಗೆ ಒಳಗಾಗಿದ್ದಾರೆ. ಈ ಘಟನೆಯು ಅಕ್ರಮ ವಲಸೆಯ ಅಪಾಯಗಳನ್ನು ಎತ್ತಿ ತೋರಿಸುತ್ತದೆ ಮತ್ತು ಕಠಿಣ ಕ್ರಮಕ್ಕೆ ಕರೆ ನೀಡುತ್ತದೆ ಎಂದು ಅವರು ಹೇಳಿದರು.

### ಅನ್ನದ ಮೇಲೆ ಬದುಕುಳಿದರು

ಪರ್ವತ ಮಾರ್ಗದ ಮೂಲಕ ನಡೆದ ನಂತರ, ಸಿಂಗ್ ಮತ್ತು ಇತರ ವಲಸಿಗರನ್ನು ಮೆಕ್ಸಿಕೊ ಗಡಿಯ ಕಡೆಗೆ ಸಮುದ್ರದಲ್ಲಿ ಸಣ್ಣ ದೋಣಿಯಲ್ಲಿ ಕಳುಹಿಸಲಾಯಿತು. ನಾಲ್ಕು ಗಂಟೆಗಳ ಸಮುದ್ರಯಾನದಲ್ಲಿ, ದೋಣಿ ಮುಳುಗಿ, ಒಬ್ಬ ವ್ಯಕ್ತಿ ಸಾವನ್ನಪ್ಪಿದರು. ಇನ್ನೊಬ್ಬರು ಪನಾಮದ ಕಾಡಿನಲ್ಲಿ ಸಾವನ್ನಪ್ಪಿದರು. ಅವರು ಅಲ್ಪ ಪ್ರಮಾಣದ ಅನ್ನದ ಮೇಲೆ ಬದುಕುಳಿದರು.

## ಮಿನಿ ನ್ಯೂಸ್

### ಹತ್ತು ಜನರಿದ್ದ ವಿಮಾನ ನಾಪತ್ತೆ

**ಅಲಾಸ್ಕಾ:** ಹತ್ತು ಜನರಿದ್ದ ಬೇರಿಂಗ್ ಏರ್ ಫ್ಲೈಟ್ ಗುರುವಾರ ಮಧ್ಯಾಹ್ನ ಅಲಾಸ್ಕಾದ ನೋಮ್ ಬಳಿ ನಾಪತ್ತೆಯಾಗಿದೆ ಎಂದು ವರದಿಯಾಗಿದೆ. ಫ್ಲೈಟ್ ಟ್ರ್ಯಾಕಿಂಗ್ ವೆಬ್ಸೈಟ್ ಫ್ಲೈಟ್ ರಾಡಾರ್ನ ಮಾಹಿತಿಯ ಪ್ರಕಾರ, ನೋಮ್-ಬೌಂಡ್ ವಿಮಾನವು ಅಲಾಸ್ಕನ್ ಪಟ್ಟಣವಾದ ಉನಾಲಕ್ಲೀಟ್ನಿಂದ ಸ್ಥಳೀಯ ಕಾಲಮಾನ ಮಧ್ಯಾಹ್ನ 2.37 ಕ್ಕೆ ಟೇಕ್ ಆಫ್ ಆದ ನಂತರ 3.16 ಕ್ಕೆ ರಾಡಾರ್ ಆಫ್ ಆಯಿತು. ಸೆಸ್ನಾ 208ಬಿ ಗ್ರ್ಯಾಂಡ್ ಕ್ಯಾರವಾನ್ ವಿಮಾನವು ಪೈಲಟ್ ಸೇರಿದಂತೆ ಹತ್ತು ಮಂದಿ ಪ್ರಯಾಣಿಕರನ್ನು ಹೊತ್ತೊಯ್ಯುತ್ತಿತ್ತು. ಶೋಧ ಕಾರ್ಯಾಚರಣೆಗಳು ನಡೆ ಯುತ್ತಿವೆ ಎಂದು ಅಲಾಸ್ಕಾದ ಸಾರ್ವಜನಿಕ ಸುರಕ್ಷತಾ ಇಲಾಖೆಯನ್ನು ಉಲ್ಲೇಖಿಸಿ ಸುದ್ದಿ ಸಂಸ್ಥೆ ರಾಯಿಟರ್ಸ್ ವರದಿ ಮಾಡಿದೆ.

### ಸೇನಾ ಟ್ರಕ್ ಡಿಕ್ಕಿಯಾಗಿ ಬಾಂಬ್ ನಿಷ್ಕ್ರಿಯ ದಳದ ಯೋಧ ದುರ್ಮರಣ

**ಬಾರಾಬಂಕಿ:** ಉತ್ತರ ಪ್ರದೇಶದ ಬಾರಾಬಂಕಿ ಜಿಲ್ಲೆಯ ಬಿಡಿಸಿ ಕಂಟೋನೆಂಟ್ ಗೇಟ್ ಬಳಿ ಸೇನಾ ಟ್ರಕ್ ಡಿಕ್ಕಿ ಹೊಡೆದು ಭಾರತೀಯ ಸೇನೆಯ ಬಾಂಬ್ ನಿಷ್ಕ್ರಿಯ ದಳದ 31 ವರ್ಷದ ಯೋಧ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಟ್ರಕ್‌ನ ಬ್ರೇಕ್ ಫೇಲ್ ಆಗಿದ್ದರಿಂದ ಅಪಘಾತ ಸಂಭವಿಸಿ ಯೋಧ ಮೊಹಮದ್ ಇರ್ಫಾನ್ ಅಲಿ ಸಾವನ್ನಪ್ಪಿದ್ದಾರೆ. ಸಹರಾನ್ಪುರ ಜಿಲ್ಲೆಯ ದಿಯೋಬಂದ್ನ ನಿವಾಸಿಯಾಗಿದ್ದ ಆಲಿ ಅವರನ್ನು ಕಂಟೋನೆಂಟ್‌ನಲ್ಲಿ ನಿಯೋಜಿಸಲಾಗಿತ್ತು ಎಂದು ಕೊತ್ವಾಲಿ ಉಸ್ತುವಾರಿ ಅಲೋಕ್ ಮಣಿ ತ್ರಿಪಾಠಿ ಹೇಳಿದ್ದಾರೆ. ಇರ್ಫಾನ್ ನಾಲ್ಕು ವರ್ಷಗಳ ಹಿಂದೆ ಮದುವೆಯಾಗಿದ್ದು, ಎರಡು ವರ್ಷದ ಮಗಳಿದ್ದಾಳೆ. ಇರ್ಫಾನ್ ಕಂಟೋನೆಂಟ್ ಗೇಟ್ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಈ ಅವಘಡ ಸಂಭವಿಸಿದೆ. ಹೊರಗಿನಿಂದ ಬರುತ್ತಿದ್ದ ಸೇನಾ ಟ್ರಕ್ ಕಂಟೋನೆಂಟ್ ಪ್ರವೇಶಿಸುತ್ತಿದ್ದಂತೆ ಬ್ರೇಕ್ ಫೇಲ್ ಆಗಿ ಡಿಕ್ಕಿ ಹೊಡೆದಿದೆ.

ತೀವ್ರವಾಗಿ ಗಾಯಗೊಂಡಿದ್ದ ಇರ್ಫಾನ್ನನ್ನು ಜಿಲ್ಲಾ ಆಸ್ಪತ್ರೆಗೆ ಸಾಗಿಸಲಾಯಿತು, ಅಲ್ಲಿ ವೈದ್ಯರು ಬರುವಷ್ಟರಲ್ಲಿ ಅವರು ಮತಪಟ್ಟಿದ್ದಾರೆ ಎಂದು ತ್ರಿಪಾಠಿ ಹೇಳಿದರು.ಮರಣೋತ್ತರ ಪರೀಕ್ಷೆ ನಡೆಸಿ ಪೊಲೀಸರು ಯೋಧನ ಮತದೇಹವನ್ನು ಸಕಲ ಗೌರವಗಳೊಂದಿಗೆ ಕುಟುಂಬ ಸದಸ್ಯರಿಗೆ ಹಸ್ತಾಂತರಿಸಿದರು. ನಂತರ ಅವರ ಪಾರ್ಥಿವ ಶರೀರವನ್ನು ಅವರ ಸ್ವಗ್ರಾಮಕ್ಕೆ ಕಳುಹಿಸಲಾಗಿದೆ ಎಂದು ಅವರು ಹೇಳಿದರು.

### ಅಪ್ರಾಪ್ತ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ್ದ ಶಿಕ್ಷಕನ ಬಂಧನ

**ಥಾಣೆ:** ಅಪ್ರಾಪ್ತ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಮಹಾರಾಷ್ಟ್ರದ ಥಾಣೆ ಜಿಲ್ಲೆಯ ಖಾಸಗಿ ಆಂಗ್ಲ ಮಾಧ್ಯಮ ಶಾಲೆಯೊಂದರ ಶಿಕ್ಷಕರೊಬ್ಬರನ್ನು ಬಂಧಿಸಲಾಗಿದೆ. ಆರೋಪಿಯನ್ನು ಶಿಕ್ಷಕ ನವೀನ್ ರಾಮಚಂದ್ರ ನಾಯರ್ (42) ಎಂದು ಗುರುತಿಸಲಾಗಿದೆ. ಈತ ಬದ್ಲಾಪುರ ಪ್ರದೇಶದ ಶಾಲೆಯೊಂದರಲ್ಲಿ ಪಾಠ ಮಾಡುತ್ತಿದ್ದು, ಕಳೆದ ವರ್ಷ ಅಕ್ಟೋಬರ್‌ನಿಂದ 14 ವರ್ಷದ ತನ್ನ ವಿದ್ಯಾರ್ಥಿನಿಗೆ ಕಿರುಕುಳ ನೀಡುತ್ತಿದ್ದರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಾಯರ್ ಅವರು ಪರೀಕ್ಷೆ ಬರೆಯುತ್ತಿದ್ದಾಗ, ನತ್ಯ ತರಗತಿಗಳಲ್ಲಿ, ಕಾರ್ಯಕ್ರಮವೊಂದಕ್ಕೆ ವೇಷಭೂಷಣವನ್ನು ವಿತರಿಸುವ ಸಂದರ್ಭದಲ್ಲಿ ಅನುಚಿತವಾಗಿ ಸ್ಪರ್ಶಿಸಿದ್ದಾರೆ ಎಂದು ಎಫ್‌ಐಆರ್ ಉಲ್ಲೇಖಿಸಿ ಅಧಿಕಾರಿ ತಿಳಿಸಿದ್ದಾರೆ. ಅಪ್ರಾಪ್ತೆ ಆರಂಭದಲ್ಲಿ ಕಿರುಕುಳವನ್ನು ಸಹಿಸಿಕೊಂಡಳು ಆದರೆ ನಾಯರ್ ತನ್ನ ಧೋರಣೆಯನ್ನು ನಿಲ್ಲಿಸದಿದ್ದಾಗ ಪೋಷಕರೊಂದಿಗೆ ಪೊಲೀಸರನ್ನು ಸಂಪರ್ಕಿಸಿದ ವಿದ್ಯಾರ್ಥಿನಿ ದೂರು ನೀಡಿದ್ದರು. ಶಿಕ್ಷಕನ ವಿರುದ್ಧ ಭಾರತೀಯ ನ್ಯಾಯ ಸಂಹಿತೆ, ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆಯಡಿ ಲೈಂಗಿಕ ಕಿರುಕುಳ ಮತ್ತು ಇತರ ಆರೋಪಗಳನ್ನು ದಾಖಲಿಸಲಾಗಿದೆ.

### 2020ರಿಂದ ಅಕ್ರಮ ವಾಸ್ತವ್ಯ: ಏಳು ಬಾಂಗ್ಲಾದೇಶಿ ಪ್ರಜೆಗಳ ಬಂಧನ

**ಮುಂಬೈ:** ದೇಶದಲ್ಲಿ ಅಕ್ರಮವಾಗಿ ನೆಲೆಸಿದ್ದ ಆರೋಪದ ಮೇಲೆ ನಾಲ್ವರು ಮಹಿಳೆಯರು ಸೇರಿದಂತೆ ಏಳು ಬಾಂಗ್ಲಾದೇಶಿ ಪ್ರಜೆಗಳನ್ನು ಇಂದು (ಶುಕ್ರವಾರ) ಮುಂಬೈನಲ್ಲಿ ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸೋಹಂಗ್ ಆಶಿರ್ ಮುಲ್ಲಾ (26), ಜಹಿದುಲ್ ಇಸ್ಲಾಂ ಇಮುಲ್ (26), ನೋಯಮ್ ಅಫ್ಜೈಲ್ ಹುಸೇನ್ ಶೇಖ್ (25), ಅಲಮಿನ್ ಶೇಖ್ (23), ಸುಮಾ ಜಹಿಗಿರ್ ಅಲಮ್ ತುತುಲ್ (24), ತವಿನಾ ಅರ್ ರಾಜು (35) ಮತ್ತು ಸಲ್ಮಾ ಮೋಕ್ಷಾದ್ ಅಲಿ (35) ಸುಮಾರು ಐದು ವರ್ಷಗಳಿಂದ ಚೆಂಬೂರಿನ ಮಹುಲ್‌ನಲ್ಲಿ ವಾಸಿಸುತ್ತಿದ್ದರು ಎಂದು ಅವರು ಹೇಳಿದ್ದಾರೆ. ತಾವು ಬಾಂಗ್ಲಾದೇಶದ ಪ್ರಜೆಗಳಾಗಿದ್ದು, 2020ರ ಮಾರ್ಚ್‌ನಿಂದ ಮಾನ್ಯ ದಾಖಲೆಗಳಿಲ್ಲದೆ ಮುಂಬೈನಲ್ಲಿ ವಾಸಿಸುತ್ತಿರುವುದಾಗಿ ಏಳು ಮಂದಿ ಒಪ್ಪಿಕೊಂಡಿದ್ದಾರೆ. ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಆರ್‌ಸಿಎಫ್ ಪೊಲೀಸ್ ಠಾಣೆಯ ಅಧಿಕಾರಿ ತಿಳಿಸಿದ್ದಾರೆ.

### ಗಾಜಾ ತೊರೆಯುವ ನಿವಾಸಿಗಳ ನಿರ್ಗಮನಕ್ಕೆ ಯೋಜನೆ ಸಿದ್ಧಪಡಿಸಿ

**ಜೆರುಸಲೇಂ:** ಕಳೆದ ಒಂದೂವರೆ ವರ್ಷಗಳಿಂದ ಯುದ್ದದಿಂದ ಜರ್ಜರಿತಗೊಂಡಿರುವ ಗಾಜಾ ಪಟ್ಟಿಗೆ ಸೇನೆಯನ್ನು ಕಳುಹಿಸುವ ಪ್ರಸ್ತಾಪವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಳ್ಳಿ ಹಾಕಿದ ಬೆನ್ನಲ್ಲೇ, ಸ್ವಯಂ ಪ್ರೇರಿತರಾಗಿ ಗಾಜಾ ತೊರೆಯುವವರ ನಿರ್ಗಮನಕ್ಕೆ ವ್ಯವಸ್ಥೆ ಮಾಡಿಕೊಡಬೇಕು ಎಂದು ಇಸ್ರೇಲ್ ರಕ್ಷಣಾ ಸಚಿವ ತಮ್ಮ ಸೇನೆಗೆ ಸೂಚಿಸಿದ್ದಾರೆ. ಗಾಜಾ ನಿವಾಸಿಗಳು ಸ್ವಯಂ ಪ್ರೇರಿತರಾಗಿ ತೊರೆಯುವುದಿದ್ದರೆ ಅವರಿಗಾಗಿ ಯೋಜನೆಯನ್ನು ಸಿದ್ಧ ಪಡಿಸಬೇಕು ಎಂದು ಸೇನೆಗೆ ನಾನು ಸೂಚಿಸಿದ್ದೇನೆ. ಅವರನ್ನು ಒಪ್ಪಿಕೊಳ್ಳುವ ಯಾರ ರಾಷ್ಟ್ರಕ್ಕೆ ಬೇಕಾದರೂ ಅವರು ತೆರಳ ಬಹುದು ಎಂದು ಇಸ್ರೇಲ್ ಕಾಟ್ಸ್ ಹೇಳಿದ್ದಾರೆ. ಇದಕ್ಕೂ ಮುನ್ನ ಪ್ಯಾಲೆಸ್ಟೀನಿಯನ್ನರನ್ನು ಗಾಜಾದಿಂದ ಸ್ಥಳಾಂತರಿಸುವ ಬಗ್ಗೆ ಟ್ರಂಪ್ ಮಾತನಾಡಿದ್ದರು. ಇದು ಮಧ್ಯ ಪ್ರಾಚ್ಯ ಸೇರಿ ಜಾಗತಿಕ ನಾಯಕರ ಟೀಕೆಗೆ ಗುರಿಯಾಗಿತ್ತು. ಪ್ಯಾಲೆಸ್ಟೀನಿಯನ್ನರ ಬಲವಂತದ ಸ್ಥಳಾಂತರ ಜನಾಂಗೀಯ ಶುದ್ಧೀಕರಣಕ್ಕೆ ಸಮ ಎಂದು ವಿಶ್ವಸಂಸ್ಥೆ ಎಚ್ಚರಿಕೆ ನೀಡಿತ್ತು. ಪ್ಯಾಲೆಸ್ಟೀನಿಯನ್ನರನ್ನು ಗಾಜಾದಿಂದ ಸ್ಥಳಾಂತರಿಸುವ ತಮ್ಮ ಯೋಜನೆಗೆ ಎಲ್ಲಾರ ಸಹಮತ ಇದೆ ಎಂದಿದ್ದ ಟ್ರಂಪ್, ಇದು ಗಾಜಾವನ್ನು ಅಮೆರಿಕ ಸ್ವಾಧೀನ ಪಡಿಸುವ ಯೋಜನೆಯೂ ಇದೆ ಎಂದು ಹೇಳಿದ್ದರು.

ಬಳಿಕ ಇದರಿಂದ ಹಿಂದೆ ಸರಿದಿದ್ದ ಅಮೆರಿಕ, ಗಾಜಾದಿಂದ ಜನರ ಸ್ಥಳಾಂತರ ತಾತ್ಕಾಲಿಕವಷ್ಟೇ ಎಂದು ಹೇಳಿತ್ತು. ಅದಾಗ್ಯೂ, ಗಾಜಾವನ್ನು ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ಗುರುವಾರವೂ ಟ್ರಂಪ್ ಪುನರುಚ್ಚರಿಸಿದ್ದಾರೆ. ಯುದ್ಧ ಮುಗಿದ ಬಳಿಕ ಗಾಜಾವನ್ನು ಇಸ್ರೇಲ್ ಅಮೆರಿಕಗೆ ಒಪ್ಪಿಸಲಿದೆ ಎಂದು ಅವರು ತಮ್ಮ ಸಾಮಾಜಿಕ ಜಾಲತಾಣ ಟ್ರುಥ್‌ನಲ್ಲಿ ಬರೆದುಕೊಂಡಿದ್ದಾರೆ. ಅಲ್ಲಿ ಅಮೆರಿಕ ಸೈನ್ಯದ ಅಗತ್ಯವಿಲ್ಲ. ಪ್ರದೇಶದಲ್ಲಿ ಸ್ಥಿರತೆ ಮರುಸ್ಥಾಪನೆಯಾಗಲಿದೆ.


# ಮರ್ಡರ್ ಮಿಸ್ಟರಿ ಜತೆ ತುಳುನಾಡಿನ ಕಥೆ ಹೇಳುವ 'ಅಧಿಪತ್ರ' ಸಿನಿಮಾ



**ಪ್ರಮುಖ ಪಾತ್ರದಲ್ಲಿ ರೂಪೇಶ್**

ಬಹುತೇಕ ತುಳುನಾಡಿನ ಕಲಾವಿದರೇ ಸೇರಿಕೊಂಡು 'ಅಧಿಪತ್ರ' ಸಿನಿಮಾ ಮಾಡಿದ್ದಾರೆ. ಈ ಚಿತ್ರದ ಕಥೆ ಕೂಡ ಆ ಭಾಗದ ಸೊಗಡನ್ನು ಹೊಂದಿದೆ. ನಟ ರೂಪೇಶ್ ಶೆಟ್ಟಿ ಅವರು ಮುಖ್ಯಭೂಮಿಕೆಯಲ್ಲಿ ಅಭಿನಯಿಸಿದ್ದಾರೆ. ಮರ್ಡರ್ ಮಿಸ್ಟರಿ ಕಥಾಹಂದರ ಇರುವ ಈ ಸಿನಿಮಾದಲ್ಲಿ ಹಾಸ್ಯಕ್ಕೂ ಪ್ರಾಮುಖ್ಯತೆ ನೀಡಲಾಗಿದೆ. 'ಕಾಂತರ' ಸಿನಿಮಾ ಸೂಪರ್ ಹಿಟ್ ಆದ ಬಳಿಕ ಅದೇ ರೀತಿ ತುಳುನಾಡಿನ ಕಥೆ ಇರುವಂತಹ ಸಿನಿಮಾಗಳು ಹೆಚ್ಚಾಗಿವೆ. ಅವುಗಳ ಸಾಲಿಗೆ ಸೇರುವಂತಹ ಸಿನಿಮಾ 'ಅಧಿಪತ್ರ'. ಈ ಸಿನಿಮಾದಲ್ಲಿ ರೂಪೇಶ್ ಶೆಟ್ಟಿ ಅವರು ಪ್ರಮುಖ ಪಾತ್ರ ಮಾಡಿದ್ದಾರೆ. 'ಬಿಗ್ ಬಾಸ್ ಕನ್ನಡ ಸೀಸನ್ 9' ವಿನ್ನರ್ ಆಗಿರುವ ಅವರು ತುಂಬ ಖ್ಯಾತಿ ಹೊಂದಿದ್ದಾರೆ. ತುಳು ಮತ್ತು ಕನ್ನಡ ಚಿತ್ರರಂಗದಲ್ಲಿ ಹೆಸರು ಮಾಡಿರುವ ಅವರು ಈಗ 'ಅಧಿಪತ್ರ' ಸಿನಿಮಾ ಮೂಲಕ ಪೊಲೀಸ್ ಪಾತ್ರದಲ್ಲಿ ಪ್ರೇಕ್ಷಕರ ಎದುರು ಬಂದಿದ್ದಾರೆ. ಈ ಸಿನಿಮಾದ ವಿಮರ್ಶೆ ಇಲ್ಲಿದೆ.. ಅನಾಥಾಶ್ರಮದಲ್ಲಿ ಬೆಳೆದ ಹುಡುಗನೊಬ್ಬ ಪೊಲೀಸ್ ಅಧಿಕಾರಿ ಆಗುತ್ತಾನೆ. ತನ್ನ ತಂದೆ-ತಾಯಿ ಯಾರು ಎಂಬುದನ್ನು ಹುಡುಕುವುದೇ ಅವನ ಜೀವನದ ಮುಖ್ಯ ಗುರಿ ಆಗಿರುತ್ತದೆ. ರಹಸ್ಯಗಳು ತುಂಬಿರುವ ಹಳ್ಳಿಯೊಂದಕ್ಕೆ ಆತನ ವರ್ಗವಾಗುತ್ತದೆ. ಅಲ್ಲಿ ನಡೆಯುವ ಕೆಲವು ಅಸಹಜ ಸಾವುಗಳಿಗೆ ಕಾರಣ ಏನು ಎಂಬುದನ್ನು ಭೇದಿಸಲು ಹೊರಟಾಗ ಬೇರೆ ಬೇರೆ ಸತ್ಯಗಳು ಹೊರಬರುತ್ತವೆ. ಈ ಹುಡುಕಾಟದಲ್ಲಿ ಕಥಾನಾಯಕನಿಗೆ ತನ್ನ ತಂದೆ-ತಾಯಿ ಯಾರು ಎಂಬುದು ತಿಳಿಯುತ್ತಾ ಇಂಥ ಒಂದಷ್ಟು ಕೌತುಕದ ಪ್ರಶ್ನೆಗಳನ್ನು ಮೂಡಿಸುತ್ತಾ ಸಾಗುತ್ತದೆ 'ಅಧಿಪತ್ರ' ಸಿನಿಮಾ.

# ರಾಘವನ ಬಗ್ಗೆ ರೆಚೆಲ್ ಹೇಳಿದ್ದಿಷ್ಟು!





ದೀಪಕ್ ಮಧುವನಹಳ್ಳಿ ನಿರ್ದೇಶನದ 'ಅನ್‌ಲಾಕ್ ರಾಘವ' ಚಿತ್ರವೀಗ ಬಿಡುಗಡೆಗೊಂಡಿದೆ. ಪ್ರೇಕ್ಷಕರ ಕಡೆಯಿಂದ ಉತ್ತಮ ಪ್ರತಿಕ್ರಿಯೆಗಳೂ ವ್ಯಕ್ತವಾಗುತ್ತಿವೆ. ಕಾಮಿಡಿ, ಮನೋರಂಜನೆಯೊಂದಿಗೆ ಪ್ರೇಮ ಕಥಾನಕದ ಮೂಲಕವೂ ಈ ಸಿನಿಮಾ ನೋಡುಗರನ್ನು ಸೆಳೆಯುತ್ತಿದೆ. ಹೀಗೆ ಹಲವು ಕೊಂಬೆ ಕೋವೆಗಳನ್ನು ಹೊಂದಿರುವ ಈ ಕಥನಕ್ಕೆ ಗ್ಲಾಮರ್ ಟಚ್ ಕೊಟ್ಟಿರುವವರು ನಾಯಕಿ ರೆಚೆಲ್ ಡೇವಿಡ್ . ಮೂಲತಃ ಕೇರಳದವರಾದರೂ, ಕನ್ನಡ ಕಲಿತು ಮಾತಾಡುವಷ್ಟು ಪ್ರೀತಿ ಹೊಂದಿರೋ ರೆಚೆಲ್, ಅನ್ ಲಾಕ್ ರಾಘವನ ಮೂಲಕ ಕನ್ನಡ ಚಿತ್ರರಂಗದಲ್ಲಿ ಮತ್ತಷ್ಟು ಭದ್ರವಾದ ನೆಲೆ ಕಂಡುಕೊಳ್ಳುವ ನಿರೀಕ್ಷೆ ಹೊಂದಿದ್ದಾರೆ. ರೆಚೆಲ್ ಡೇವಿಡ್ ಇಲ್ಲಿ ಜಾನಕಿ ಎಂಬ ಪಾತ್ರವಾಗಿ ಕಾಣಿಸಿಕೊಂಡಿದ್ದಾರೆ. ಈಗ್ಗೆ ಎರಡ್ಮೂರು ವರ್ಷಗಳ ಹಿಂದೆಯೇ ನಿರ್ದೇಶಕರು ರೆಚೆಲ್‌ಗೆ ಕಥೆ ಹೇಳಿ, ಅವರ ಪಾತ್ರದ ಬಗ್ಗೆ ವಿವರಿಸಿದ್ದರಂತೆ. ಆ ಕ್ಷಣವೇ ಇದೊಂದು ಅಪರೂಪದ ಕಥೆ ಎಂಬ ಸುಳಿವು ಸಿಕ್ಕಿದ್ದೇ ರೆಚೆಲ್ ಒಪ್ಪಿಗೆ ಸೂಚಿಸಿದ್ದರಂತೆ. ಹೀಗೆ ಈ ಸಿನಿಮಾ ಭಾಗವಾಗಿದ್ದ ರೆಚೆಲ್ ಚಿತ್ರೀಕರಣದ ಪ್ರತೀ ಹಂತವನ್ನೂ ಸಂಭ್ರಮಿಸಿದ್ದಾರೆ. ಹೊಸ ಕಲಿಕೆಯ ಜೊತೆಗೆ ಚಿತ್ರೀಕರಣದಲ್ಲಿ ಭಾಗಿಯಾಗಿದ್ದಾರೆ. ಇದೀಗ ಪ್ರೇಕ್ಷಕರೂ ಕೂಡಾ ಜಾನಕಿ ಎಂಬ ಪಾತ್ರವನ್ನು ಮೆಚ್ಚಿಕೊಂಡಿದ್ದಾರೆ.


# ನಿರ್ದೇಶನದತ್ತ ಗಮನ ಹರಿಸಿದ ಸಾಯಿ ಪಲ್ಲವಿ



**ಚಿತ್ರದ ಬಗ್ಗೆ ನಿರೀಕ್ಷೆ ಸೃಷ್ಟಿ**

ಸಾಯಿ ಪಲ್ಲವಿ ಅವರು 'ಥಾಂಡೆಲ್' ಸಿನಿಮಾದ ಪ್ರಚಾರದ ವೇಳೆ ತಮ್ಮ ಭವಿಷ್ಯದ ಯೋಜನೆಗಳ ಬಗ್ಗೆ ಮಾತನಾಡಿದ್ದಾರೆ. ಸಾಯಿ ಪಲ್ಲವಿ ನಿರ್ದೇಶನದತ್ತ ಆಸಕ್ತಿ ಹೊಂದಿದ್ದಾರೆ ಎಂದು ನಾಗ ಚೈತನ್ಯ ಬಹಿರಂಗಪಡಿಸಿದ್ದಾರೆ ಮತ್ತು ಅವರು ಒಂದು ಸಿನಿಮಾ ನಿರ್ದೇಶನ ಮಾಡುವುದು ಮತ್ತು ಅವರನ್ನು ಪಾತ್ರಕ್ಕೆ ಆಯ್ಕೆ ಮಾಡಿಕೊಳ್ಳುವುದು ಬಗ್ಗೆ ಮಾತನಾಡಿದ್ದಾರೆ. ನಟಿ ಸಾಯಿ ಪಲ್ಲವಿ ದಕ್ಷಿಣದ ಸ್ಟಾರ್ ನಟಿ. ಸಾಕಷ್ಟು ಮೇಕಪ್ ಮಾಡಿಕೊಂಡು, ಗ್ಲಾಮರಸ್ ಡ್ರೆಸ್ ಹಾಕಿಕೊಂಡು ನಟಿಯರು ಮಿಂಚುತ್ತಿರುವ ಈ ಕಾಲದಲ್ಲಿ ಸಾಯಿ ಪಲ್ಲವಿ ಅವರು ತಮ್ಮ ಸರಳತೆ ಮೂಲಕ ಗಮನ ಸೆಳೆಯುತ್ತಿದ್ದಾರೆ. ಮೇಕಪ್ ಇಲ್ಲದೆ ನಟಿಸಿ ಇಷ್ಟ ಆಗುತ್ತಾರೆ ಅವರಿಗೆ ಎಲ್ಲಾ ಕಡೆಗಳಿಂದ ಮೆಚ್ಚುಗೆ ಸಿಗುತ್ತಿದೆ. ಈಗ ಸಾಯಿ ಪಲ್ಲವಿ ಅವರು ನಿರ್ದೇಶನದತ್ತ ಗಮನ ಹರಿಸುವ ಆಲೋಚನೆ ಹೊಂದಿದ್ದಾರೆ. ಅವರ ಭವಿಷ್ಯದ ಪ್ಲ್ಯಾನ್ ಬಗ್ಗೆ ನಾಗ ಚೈತನ್ಯ ಮಾತನಾಡಿದ್ದಾರೆ. ನಾಗ ಚೈತನ್ಯ ಹಾಗೂ ಸಾಯಿ ಪಲ್ಲವಿ ನಟನೆಯ 'ಥಾಂಡೇಲ್' ಸಿನಿಮಾ ರಿಲೀಸ್ ಆಗಿದೆ. ಈ ಚಿತ್ರದ ಬಗ್ಗೆ ನಿರೀಕ್ಷೆ ಸೃಷ್ಟಿ ಆಗಿದೆ. ಈ ಚಿತ್ರದಲ್ಲಿ ಸಾಯಿ ಪಲ್ಲವಿ ಅವರ ಪಾತ್ರ ಹೆಚ್ಚು ಹೈಲೈಟ್ ಆಗುವ ನಿರೀಕ್ಷೆ ಇದೆ. ಈ ಚಿತ್ರದ ಪ್ರಚಾರದ ವೇಳೆ ಅವರ ನಿರ್ದೇಶನದ ಪ್ಲ್ಯಾನ್ ಬಗ್ಗೆ ನಾಗ ಚೈತನ್ಯ ಅವರು ಮಾತನಾಡಿದ್ದಾರೆ. ಸಂದರ್ಶನದ ವೇಳೆ ನೆರೆದಿದ್ದ ಅಭಿಮಾನಿಗಳಿಗೆ ಪ್ರಶ್ನೆ ಮಾಡಲು ಅವಕಾಶ ನೀಡಲಾಯಿತು. ಆಗ ಸಾಯಿ ಪಲ್ಲವಿ ಅವರಿಗೆ 'ನೀವು ಫಿಲ್ಮ್ ಡೈರೆಕ್ಷನ್ ಮಾಡುವ ಸಾಧ್ಯತೆ ಇದೆಯೇ' ಎಂದು ಕೇಳಲಾಯಿತು. ಇದಕ್ಕೆ ಇಲ್ಲ ಎನ್ನುವ ಉತ್ತರವನ್ನು ಅವರು ನೀಡಿದರು. ಇದು ಸುಳ್ಳು ಎಂದು ನಾಗ ಚೈತನ್ಯ ಅವರು ವಾದಿಸಿದರು.

# ಬೆಂಗಳೂರು ಹುಡುಗಿ ಜೊತೆ ಅಮೀರ್ ಲವ್



ಆಮೀರ್ ಖಾನ್ ಅವರು 59ನೇ ವಯಸ್ಸಿನಲ್ಲಿ ಹೊಸ ಪ್ರೇಮ ಸಂಬಂಧದಲ್ಲಿದ್ದಾರೆ ಎಂಬ ಸುದ್ದಿ ಹರಡಿದೆ. ಬೆಂಗಳೂರಿನ ಗೌರಿ ಎಂಬ ಹುಡುಗಿಯೊಂದಿಗೆ ಅವರು ಡೇಟಿಂಗ್ ಮಾಡುತ್ತಿದ್ದಾರೆ ಎನ್ನಲಾಗಿದೆ. ಇಂಗ್ಲಿಷ್ ಸುದ್ದಿವಾಹಿನಿಗಳು ಈ ಸುದ್ದಿಯನ್ನು ವರದಿ ಮಾಡಿವೆ. ಆಮೀರ್ ಅವರ ಹಿಂದಿನ ಎರಡು ವಿವಾಹಗಳು ವಿಚ್ಛೇದನದಲ್ಲಿ ಅಂತ್ಯಗೊಂಡಿದ್ದವು.

ನಟ ಆಮಿರ್ ಖಾನ್ ಅವರು ಸುದ್ದಿಯಲ್ಲಿದ್ದಾರೆ. 59ನೇ ವಯಸ್ಸಿನಲ್ಲಿ ಅವರಿಗೆ ಮತ್ತೆ ಪ್ರೀತಿ ಮೂಡಿದೆ ಎಂದು ಹೇಳಲಾಗುತ್ತಿದೆ. ಈ ಬಾರಿ ಅವರು ಚಿತ್ರರಂಗದಿಂದ ದೂರ ಇರುವ ಹುಡುಗಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎಂದು ಹೇಳಲಾಗುತ್ತಿದೆ. ಈ ಬಾರಿ ಅವರು ಸುತ್ತಾಡುತ್ತಿರುವ ಹುಡುಗಿ ಬೆಂಗಳೂರಿನವರು ಎನ್ನುವುದು ವಿಶೇಷ. ಅವರ ಹೆಸರು ಗೌರಿ ಎಂದು ಹೇಳಲಾಗುತ್ತಿದೆ. ಇಂಗ್ಲಿಷ್ ಸುದ್ದಿವಾಹಿನಿಗಳು ಈ ಬಗ್ಗೆ ವರದಿ ಮಾಡಿವೆ.

ಆಮಿರ್ ಖಾನ್ ಬಾಲಿವುಡ್‌ನ ಯಶಸ್ವಿ ನಟರಲ್ಲಿ ಒಬ್ಬರು. ನಿರ್ಮಾಪಕನಾಗಿಯೂ ಅವರಿಗೆ ಯಶಸ್ಸು ಸಿಕ್ಕಿದೆ. ಆದರೆ, ಅವರು ಸಂಸಾರದಲ್ಲಿ ಹಿನ್ನಡೆ ಅನುಭವಿಸಿದ್ದಾರೆ. ಅವರ ಎರಡು ವಿವಾಹಗಳು ಈಗಾಗಲೇ ಮುರಿದು ಬಿದ್ದಿವೆ. ಈಗ ಆಮಿರ್ ಅವರು 59ನೇ ವಯಸ್ಸಿನಲ್ಲಿ ಮೂರನೇ ಮದುವೆಗೆ ರೆಡಿ ಆದರಾ ಎನ್ನುವ ಪ್ರಶ್ನೆ ಮೂಡುವಂತೆ ಆಗಿದೆ. ಆಮಿರ್ ಸುತ್ತಾಡುತ್ತಿರುವ ಹುಡುಗಿಯ ಹೆಸರು ಗೌರಿ ಎಂದು. ಅವರು ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ತಮ್ಮ ಕುಟುಂಬಕ್ಕೆ ಗೌರಿಯನ್ನು ಪರಿಚಯಿಸಿದ್ದಾರೆ. ಇವರಿಗೂ ಬಾಲಿವುಡ್‌ಗೂ ಯಾವುದೇ ನಂಟಿಲ್ಲ.

# ತಂಡೇಲ್ ನಿಮಾಗೆ ಪೈರಸಿ ಕಾಟ ಆನ್‌ಲೈನ್‌ನಲ್ಲಿ ಲೀಕ್!

**ಚಿತ್ರಹಿಂಸೆಯ ಕಥೆ ತಂಡೇಲ್**

ನಾಗ ಚೈತನ್ಯ, ಸಾಯಿ ಪಲ್ಲವಿ ನಟನೆಯ ತಂಡೇಲ್ ಸಿನಿಮಾ ಫೆ.07 ರಂದು ಬಿಡುಗಡೆಯಾಗಿದೆ. ಆದರೆ ದುರದೃಷ್ಟವಶಾತ್ ಸಿನಿಮಾಗೆ ಪೈರಸಿ ಕಾಟ ಎದುರಾಗಿದೆ. ಚಂದೂ ಮೊಂಡೇಟಿ ನಿರ್ದೇಶನದ ಚಿತ್ರ ಹಲವು ಪೈರಸಿ ವೆಬ್ ಸೈಟ್ ಗಳಲ್ಲಿ ಬಿಡುಗಡೆಯಾಗಿದೆ. ಪಿಂಕ್ ವಿಲ್ಲಾ ವರದಿಯ ಪ್ರಕಾರ, ಪೈರಸಿ ವೆಬ್ ಸೈಟ್ ಒಂದರಲ್ಲಿ ಥಂಡೇಲ್ ಸಿನಿಮಾ ಉಚಿತವಾಗಿ ಡೌನ್ ಲೋಡ್ ಗೆ ಲಭ್ಯವಿದೆ. ಶ್ರೀಕಾಕುಳಂನ ಮೀನುಗಾರನೋರ್ವ ಪಾಕಿಸ್ತಾನದ ಜಲಗಡಿ ಪ್ರವೇಶಿಸಿ ಬಂಧನಕ್ಕೆ ಒಳಗಾಗಿ ಅನುಭವಿಸುವ ಚಿತ್ರಹಿಂಸೆಯ ಕಥೆಯನ್ನು ತಂಡೇಲ್ ಒಳಗೊಂಡಿದೆ. ನಾಗ ಚೈತನ್ಯ ನಾಯಕನ ಪಾತ್ರ (ಮೀನುಗಾರನ ಪಾತ್ರ) ದಲ್ಲಿ ನಟಿಸಿದ್ದು, ಸಾಯಿ ಪಲ್ಲವಿ ನಾಯಕಿಯಾಗಿದ್ದಾರೆ. ಥಿಯೇಟರ್ ಗಳಲ್ಲಿ ಸಿನಿಮಾ ನೋಡಿದ ಪ್ರೇಕ್ಷಕರು ನಾಗ ಚೈತನ್ಯ, ಸಾಯಿ ಪಲ್ಲವಿಯ ನಟನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಡಿಎಸ್ ಪಿ ಸಂಗೀತಕ್ಕೂ ಅತ್ಯುತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಇದು ಡಿಎಸ್ ಪಿ ಅವರ ಇತ್ತೀಚಿನ ವರ್ಷಗಳಲ್ಲಿನ ಅತ್ಯುತ್ತಮ ಸಂಗೀತ ಎಂದು ವಿಶ್ಲೇಷಿಸಲಾಗುತ್ತಿದೆ. ಸಿನಿಮಾದಲ್ಲಿ ಉತ್ತಮ ಚಿತ್ರಕಥೆ ಇದ್ದು, ಕ್ಲೈಮ್ಯಾಕ್ಸ್ ಬಗ್ಗೆ ಕುತೂಹಲ ಹೆಚ್ಚಿಸುತ್ತದೆ. ಇತ್ತೀಚಿನ ವರ್ಷಗಳಲ್ಲಿ ಪೈರಸಿಗೆ ತುತ್ತಾಗಿರುವ ದಕ್ಷಿಣ ಭಾರತದ ಲೇಟೆಸ್ಟ್ ಸಿನಿಮಾ ಥೆಂಡೇಲ್ ಆಗಿದೆ. ಇದಕ್ಕೂ ಮೊದಲು ವಿದಾಮುಯಾರ್ಚಿ, ಗೇಮ್ ಚೇಂಜರ್, ಪುಷ್ಪಾ 2 ಹಾಗೂ ಇನ್ನಿತರ ಸಿನಿಮಾಗಳು ಆನ್ ಲೈನ್ ನಲ್ಲಿ ಲೀಕ್ ಆಗಿದ್ದವು. ಆನ್ ಲೈನ್ ನಲ್ಲಿ ಲೀಕ್ ಆದ ನಂತರವೂ ತಂಡೇಲ್ ವೀಕ್ಷಿಸಲು ಥಿಯೇಟರ್ ಗಳಿಗೆ ಬರುವವರ ಸಂಖ್ಯೆ ಕಡಿಮೆಯೇನೂ ಆಗಿಲ್ಲ. ಸಿನಿಮಾದ ಸ್ಯಾಟಲೈಟ್ ಹಕ್ಕುಗಳನ್ನು ಜೀ ತೆಲುಗು ಪಡೆದುಕೊಂಡಿದ್ದು ಈ ಸಿನಿಮಾ ಶೀಘ್ರದಲ್ಲೇ ಒಟಿಟಿಯಲ್ಲೂ ಬಿಡುಗಡೆಯಾಗುವ ನಿರೀಕ್ಷೆ ಇದೆ.

# ಧೋನಿಗಿಂತ ರೋಹಿತ್ ಬೆಸ್ಟ್ ನಾಯಕ

**ಇದು ಅಂಕಿ ಅಂಶ ನುಡಿದ ಸತ್ಯ**



ಸುಮಾರು 8 ತಿಂಗಳ ಹಿಂದೆ ಟಿ20 ವಿಶ್ವಕಪ್ ಗೆಲ್ಲುವ ಮೂಲಕ ಇಡೀ ದೇಶವನ್ನು ಸಂತೋಷಪಡಿಸಿದ್ದ ಟೀಂ ಇಂಡಿಯಾ ನಾಯಕ ರೋಹಿತ್ ಶರ್ಮಾ ಕಳೆದ ಕೆಲವು ಸರಣಿಗಳಲ್ಲಿ ಸತತ ಸೋಲುಗಳನ್ನೇ ಎದುರಿಸಬೇಕಾಯಿತು. ಇದರಿಂದಾಗಿ ರೋಹಿತ್ ನಿವೃತ್ತಿ ಘೋಷಿಸಬೇಕೆಂಬ ಕೂಗು ಕೂಡ ಹೆಚ್ಚಾಗಿತ್ತು. ನಾಯಕನಾಗಿ ಮಾತ್ರವಲ್ಲದೆ ರೋಹಿತ್ ಆಟಗಾರನಾಗಿಯೂ ವೈಫಲ್ಯ ಅನುಭವಿಸಿದ್ದರು. ಆದರೀಗ ನಾಯಕನಾಗಿ ಮತ್ತೊಮ್ಮೆ ಗೆಲುವಿನ ಹಾದಿಗೆ ರೋಹಿತ್ ಮರಳಿದ್ದಾರೆ. ಇಂಗ್ಲೆಂಡ್ ವಿರುದ್ಧದ ಮೊದಲ ಏಕದಿನ ಪಂದ್ಯವನ್ನು ಗೆದ್ದುಕೊಳ್ಳುವ ಮೂಲಕ ರೋಹಿತ್ ಶರ್ಮಾ ಕಳೆದ 6 ಪಂದ್ಯಗಳ ಸೋಲಿನ ಸರಣಿಗೆ ಬ್ರೇಕ್ ಹಾಕಿದ್ದಾರೆ. ಆಟಗಾರನಾಗಿ ರೋಹಿತ್ ಯಶಸ್ವಿಯಾಗದಿದ್ದರೂ ನಾಯಕನಾಗಿ ಯಶಸ್ಸು ಸಾಧಿಸುವಲ್ಲಿ ಸಫಲರಾಗಿದ್ದಾರೆ.

ನಾಗ್ಪುರದಲ್ಲಿ ನಡೆದ ಏಕದಿನ ಸರಣಿಯ ಮೊದಲ ಪಂದ್ಯವನ್ನು ಟೀಂ ಇಂಡಿಯಾ 4 ವಿಕೆಟ್‌ಗಳಿಂದ ಗೆದ್ದುಕೊಂಡಿದೆ. ಈ ಮೂಲಕ ರೋಹಿತ್ ನಾಯಕನಾಗಿ ಮತ್ತೆ ಗೆಲುವಿನ ಸವಿ ಅನುಭವಿಸಿದ್ದಾರೆ. ವಾಸ್ತವವಾಗಿ ರೋಹಿತ್ ನಾಯಕತ್ವದಲ್ಲಿ ಟಿ20 ವಿಶ್ವಕಪ್ ಗೆದ್ದ ನಂತರ ಟೀಂ ಇಂಡಿಯಾ ಗೆಲುವು ಸಾಧಿಸಿದಕ್ಕಿಂತ ಸೋತಿದ್ದೇ ಹೆಚ್ಚು. ಟಿ20 ವಿಶ್ವಕಪ್ ಮುಗಿದ ಬಳಿಕ ಬಾಂಗ್ಲಾದೇಶ ವಿರುದ್ಧ ರೋಹಿತ್ ನಾಯಕತ್ವದಲ್ಲಿ 2 ಪಂದ್ಯಗಳ ಟೆಸ್ಟ್ ಸರಣಿಯನ್ನು ಗೆದ್ದುಕೊಂಡಿದ್ದ ಟೀಂ ಇಂಡಿಯಾ ಆ ಬಳಿಕ ಒಂದೂ ಪಂದ್ಯವನ್ನು ಗೆದ್ದಿಲ್ಲ. 3 ಪಂದ್ಯಗಳ ಏಕದಿನ ಸರಣಿಗಾಗಿ ಶ್ರೀಲಂಕಾ ಪ್ರವಾಸ ಮಾಡಿದ್ದ ಭಾರತ, ರೋಹಿತ್ ನಾಯಕತ್ವದಲ್ಲಿ ಸರಣಿಯನ್ನು 2-0 ಅಂತರದಿಂದ ಕಳೆದುಕೊಂಡಿತ್ತು.

## ಚೊಚ್ಚಲ ಏಕದಿನ ಪಂದ್ಯದಲ್ಲಿ ಅಗತ್ಯ - ಅನಗತ್ಯ
# ದಾಖಲೆ ಬರೆದ ರಾಣಾ



**ರಾಣಾ ಭಾರಿ ದುಬಾರಿ**

ಇಂಗ್ಲೆಂಡ್ ವಿರುದ್ಧದ. ಮೊದಲ ಪಂದ್ಯದಲ್ಲೇ ಮೂರು ವಿಕೆಟ್ ಪಡೆದು ಮಿಂಚಿದ ರಾಣಾ, ಒಂದೇ ಓವರ್‌ನಲ್ಲಿ 26 ರನ್‌ಗಳನ್ನು ಬಿಟ್ಟುಕೊಟ್ಟು ದುಬಾರಿ ಕೂಡ ಆದರು. ಈ ಮೂಲಕ ಒಂದೇ ಪಂದ್ಯದಲ್ಲಿ ರಾಣಾ, ಅಗತ್ಯ ಹಾಗೂ ಅನಗತ್ಯ ದಾಖಲೆ ಬರೆದರು. ರಾಣಾ ಪ್ರಮುಖ 3 ವಿಕೆಟ್ ಪಡೆದು ಮಿಂಚಿದರು. ಟೀಂ ಇಂಡಿಯಾ ಪರ ಇದುವರೆಗೆ ಯಾವ ವೇಗಿಯೂ ನಿರ್ಮಿಸಲಾಗದ ದಾಖಲೆಯನ್ನು ರಾಣ ಸೃಷ್ಟಿಸಿದ್ದಾರೆ.

ವಾಸ್ತವವಾಗಿ ವೇಗಿ ಹರ್ಷಿತ್ ರಾಣಾ ಭಾರತ ಪರ ಮೂರು ಸ್ವರೂಪಗಳಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪಾದಾರ್ಪಣೆ ಮಾಡಿದ್ದಾರೆ. ಈ ಮೂರು ಮಾದರಿಯಲ್ಲೂ ಅವರು ತಮ್ಮ ಮೊದಲ ಪಂದ್ಯದಲ್ಲಿ ಮೂರು ಅಥವಾ ಅದಕ್ಕಿಂತ ಹೆಚ್ಚು ವಿಕೆಟ್‌ಗಳನ್ನು ಪಡೆದಿದ್ದಾರೆ. ಈ ಮೂಲಕ ಈ ಸಾಧನೆ ಮಾಡಿದ ಮೊದಲ ಭಾರತೀಯ ಕ್ರಿಕೆಟಿಗ ಎಂಬ ದಾಖಲೆ ನಿರ್ಮಿಸಿದ್ದಾರೆ. ಹರ್ಷಿತ್ ರಾಣಾ ತಮ್ಮ ಚೊಚ್ಚಲ ಟೆಸ್ಟ್ ಪಂದ್ಯದಲ್ಲೇ 4 ವಿಕೆಟ್ ಕಬಳಿಸಿದ್ದರು. ಆ ಬಳಿಕ ತಮ್ಮ ಚೊಚ್ಚಲ ಟಿ20 ಪಂದ್ಯದಲ್ಲಿ 3 ವಿಕೆಟ್ ಪಡೆದಿದ್ದರು. ಇದೀಗ ತಮ್ಮ ಚೊಚ್ಚಲ ಏಕದಿನ ಪಂದ್ಯದಲ್ಲೂ 3 ವಿಕೆಟ್ ಪಡೆದಿದ್ದಾರೆ. ಆದಾಗ್ಯೂ, ರಾಣಾ ತಮ್ಮ ಚೊಚ್ಚಲ ಏಕದಿನ ಪಂದ್ಯದಲ್ಲೂ ಒಂದು ಬೇಡದ ದಾಖಲೆಯನ್ನು ತನ್ನ ಖಾತೆಗೆ ಹಾಕಿಕೊಂಡಿದ್ದಾರೆ. ವಾಸ್ತವವಾಗಿ ಹರ್ಷಿತ್ ರಾಣಾ ಇಂಗ್ಲೆಂಡ್ ವಿರುದ್ಧ ಬೌಲ್ ಮಾಡಿದ ಮೊದಲ ಓವರ್‌ನಲ್ಲಿ 11 ರನ್‌ಗಳನ್ನು ಬಿಟ್ಟುಕೊಟ್ಟರು. ಇದಾದ ನಂತರ ಎರಡನೇ ಓವರ್‌ನಲ್ಲಿ ಒಂದೇ ಒಂದು ರನ್ ನೀಡಿದರು. ಆದರೆ ಮೂರನೇ ಓವರ್‌ನಲ್ಲಿ ರಾಣಾ ಭಾರಿ ದುಬಾರಿ ಎನಿಸಿಕೊಂಡರು. ಹರ್ಷಿತ್ ರಾಣಾ ಬೌಲ್ ಮಾಡಿದ ಈ ಓವರ್‌ನಲ್ಲಿ ಫಿಲ್ ಸಾಲ್ಟ್ ಬೌಂಡರಿಗಳ ಮಳೆಗರೆದರು. ಹರ್ಷಿತ್ ರಾಣಾ ಬೌಲ್ ಮಾಡಿದ ಈ ಓವರ್‌ನಲ್ಲಿ ಇಂಗ್ಲೆಂಡ್ ಆರಂಭಿಕ ಆಟಗಾರ ಫಿಲ್ ಸಾಲ್ಟ್ ಮೂರು ಸಿಕ್ಸರ್ ಮತ್ತು ಎರಡು ಬೌಂಡರಿಗಳ ಸಹಿತ ಒಟ್ಟು 26 ರನ್ ಕಲೆಹಾಕಿದರು. ಇದರೊಂದಿಗೆ ರಾಣಾ ತಮ್ಮ ಚೊಚ್ಚಲ ಏಕದಿನ ಪಂದ್ಯದಲ್ಲಿ ಒಂದೇ ಓವರ್‌ನಲ್ಲಿ ಅತಿ ಹೆಚ್ಚು ರನ್ ನೀಡಿದ ಭಾರತೀಯ ಬೌಲರ್ ಎನಿಸಿಕೊಂಡರು.

# 36ನೇ ಸೆಂಚುರಿಯೊಂದಿಗೆ ಹಲವು ದಾಖಲೆಗಳನ್ನ ಬ್ರೇಕ್ ಮಾಡಿದ ಸ್ಮಿತ್



**ಶ್ರೀಲಂಕಾ ವಿರುದ್ಧ ಬ್ಯಾಕ್ ಟು ಬ್ಯಾಕ್ ಶತಕ!**

ಆಸ್ಟ್ರೇಲಿಯಾ ಸ್ಟಾರ್ ಬ್ಯಾಟರ್, ಹಂಗಾಮಿ ನಾಯಕ ಸ್ಟೀವ್ ಸ್ಮಿತ್ ಟೆಸ್ಟ್‌ನಲ್ಲಿ ತಮ್ಮ ಅದ್ಭುತ ಪ್ರದರ್ಶನ 36 ಶತಕವನ್ನು ದಾಖಲಿಸಿದರು. ಶ್ರೀಲಂಕಾದೊಂದಿಗೆ ನಡೆಯುತ್ತಿರುವ ಎರಡನೇ ಟೆಸ್ಟ್‌ನಲ್ಲಿ ಸ್ಮಿತ್ ಶತಕ ಸಿಡಿಸಿ ದಿಗ್ಗಜರ ದಾಖಲೆ ಸರಿಗಟ್ಟಿದರು. ಸ್ಮಿತ್ ಬೌಂಡರಿಯೊಂದಿಗೆ ಶತಕದ ಗಡಿಯನ್ನು ತಲುಪಿದರು. ಶ್ರೀಲಂಕಾ ಪ್ರವಾಸದಲ್ಲಿ ಸ್ಮಿತ್ ಬಾರಿಸಿದ ಸತತ ಎರಡನೇ ಶತಕ ಇದು. ಈ ಎರಡು ಪಂದ್ಯಗಳ ಸರಣಿಯ ಮೊದಲ ಪಂದ್ಯದಲ್ಲಿ ಸ್ಮಿತ್ ಶತಕ ಗಳಿಸಿದ್ದರು.

ಈ ಶತಕದೊಂದಿಗೆ, ಸ್ಮಿತ್ ಇಂಗ್ಲೆಂಡ್‌ನ ಸ್ಟಾರ್ ಬ್ಯಾಟ್ಸ್‌ಮನ್ ಜೋ ರೂಟ್ ಅವರ ದಾಖಲೆಯನ್ನು ಸರಿಗಟ್ಟಿದರು. ರೂಟ್ ಮತ್ತು ಸ್ಮಿತ್ ಟೆಸ್ಟ್‌ನಲ್ಲಿ ತಲಾ 36 ಶತಕಗಳನ್ನು ಗಳಿಸಿದ್ದಾರೆ. ಫ್ಯಾಬ್ ಫೋರ್ ಎಂದು ಕರೆಯಲ್ಪಡುವ ಬ್ಯಾಟ್ಸ್‌ಮನ್‌ಗಳಲ್ಲಿ ಸ್ಮಿತ್ ಮತ್ತು ರೂಟ್ ಪ್ರಸ್ತುತ ಅತಿ ಹೆಚ್ಚು ಟೆಸ್ಟ್ ಶತಕಗಳನ್ನು ಗಳಿಸಿದ ದಾಖಲೆಯನ್ನು ಹೊಂದಿದ್ದಾರೆ. ಈ ಶತಕದೊಂದಿಗೆ, ಸ್ಮಿತ್ ಇಂಗ್ಲೆಂಡ್‌ನ ಸ್ಟಾರ್ ಬ್ಯಾಟ್ಸ್‌ಮನ್ ಜೋ ರೂಟ್ ಅವರ ದಾಖಲೆಯನ್ನು ಸರಿಗಟ್ಟಿದರು. ರೂಟ್ ಮತ್ತು ಸ್ಮಿತ್ ಟೆಸ್ಟ್‌ನಲ್ಲಿ ತಲಾ 36 ಶತಕಗಳನ್ನು ಗಳಿಸಿದ್ದಾರೆ. ಫ್ಯಾಬ್ ಫೋರ್ ಎಂದು ಕರೆಯಲ್ಪಡುವ ಬ್ಯಾಟ್ಸ್‌ಮನ್‌ಗಳಲ್ಲಿ ಸ್ಮಿತ್ ಮತ್ತು ರೂಟ್ ಪ್ರಸ್ತುತ ಅತಿ ಹೆಚ್ಚು ಟೆಸ್ಟ್ ಶತಕಗಳನ್ನು ಗಳಿಸಿದ ದಾಖಲೆಯನ್ನು ಹೊಂದಿದ್ದಾರೆ. ಸ್ಮಿತ್ ಮತ್ತು ರೂಟ್ ನಂತರದ ಸ್ಥಾನದಲ್ಲಿ ಕೇನ್ ವಿಲಿಯಮ್ಸನ್ 33 ಶತಕ ಗಳೊಂದಿಗೆ ನಂತರದ ಸ್ಥಾನದಲ್ಲಿದ್ದರೆ, ವಿರಾಟ್ ಕೊಹ್ಲಿ 30 ಶತಕ ಗಳೊಂದಿಗೆ ನಂತರದ ಸ್ಥಾನದಲ್ಲಿದ್ದಾರೆ.

# 3ನೇ ಬಾರಿಗೆ ಫೈನಲ್‌ಗೇರಿದ ಸನ್‌ರೈಸರ್ಸ್ ತಂಡ




ದಕ್ಷಿಣ ಆಫ್ರಿಕಾದ 20 ಲೀಗ್‌ನ ಎರಡನೇ ಕ್ವಾಲಿಫೈಯರ್‌ನಲ್ಲಿ ಕಾವ್ಯಾ ಮಾರನ್ ಒಡೆತನದ ಸನ್‌ರೈಸರ್ಸ್ ಈಸ್ಟರ್ನ್ ಕೇಪ್ ತಂಡವು ಪಾರ್ಲ್ ರಾಯಲ್ಸ್ ತಂಡವನ್ನು 8 ವಿಕೆಟ್‌ಗಳಿಂದ ಸೋಲಿಸಿ ಸತತ ಮೂರನೇ ಬಾರಿಗೆ ಫೈನಲ್ ಪಂದ್ಯಕ್ಕೆ ಅರ್ಹತೆ ಪಡೆದುಕೊಂಡಿದೆ.ಇದೀಗ ಸನ್‌ರೈಸರ್ಸ್, ಫೆಬ್ರವರಿ 8 ರಂದು ಎಂಐ ಕೇಪ್‌ಟೌನ್ ತಂಡವನ್ನು ಎದುರಿಸಲಿದೆ. ದಕ್ಷಿಣ ಆಫ್ರಿಕಾದಲ್ಲಿ ನಡೆಯುತ್ತಿರುವ ಎಸ್‌ಎ20 ಲೀಗ್ ಅಂತಿಮ ಹಂತಕ್ಕೆ ಬಂದು ನಿಂತಿದೆ. ಈ ಲೀಗ್‌ನಲ್ಲಿ ಕಾವ್ಯಾ ಮಾರನ್ ಒಡೆತನದ ಸನ್‌ರೈಸರ್ಸ್ ಈಸ್ಟರ್ನ್ ಕೇಪ್ ತಂಡ ಸತತ ಮೂರನೇ ಬಾರಿಗೆ ಫೈನಲ್ ಗೇರುವಲ್ಲಿ ಯಶಸ್ವಿಯಾಗಿದೆ. ನಿನ್ನೆ ನಡೆದ ಎರಡನೇ ಕ್ವಾಲಿಫೈಯರ್‌ನಲ್ಲಿ ಪಾರ್ಲ್ ರಾಯಲ್ಸ್ ತಂಡವನ್ನು ಎಂಟು ವಿಕೆಟ್‌ಗಳಿಂದ ಸೋಲಿಸಿದ ಸನ್‌ರೈಸರ್ಸ್ ಈಸ್ಟರ್ನ್ ಕೇಪ್ ತಂಡ ಇದೀಗ ಫೈನಲ್ ಪಂದ್ಯದಲ್ಲಿ ಅಂಬಾನಿ ಒಡೆತನದ ಎಂಐ ಕೇಪ್‌ಟೌನ್ ತಂಡವನ್ನು ಎದುರಿಸಲಿದೆ. ಈ ಪಂದ್ಯ ಫೆಬ್ರವರಿ 8 ರಂದು ಅಂದರೆ ನಾಳೆ ನಡೆಯಲಿದೆ. ಎರಡನೇ ಕ್ವಾಲಿಫೈಯರ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಪಾರ್ಲ್ ರಾಯಲ್ಸ್ ತಂಡ 20 ಓವರ್‌ಗಳಲ್ಲಿ 4 ವಿಕೆಟ್‌ಗಳ ನಷ್ಟಕ್ಕೆ 175 ರನ್ ಗಳಿಸಿತು. ಇದಕ್ಕೆ ಉತ್ತರವಾಗಿ, ಸನ್‌ರೈಸರ್ಸ್ ಈಸ್ಟರ್ನ್ ಕೇಪ್ ತಂಡವು 19.2 ಓವರ್‌ಗಳಲ್ಲಿ 2 ವಿಕೆಟ್‌ಗಳ ನಷ್ಟಕ್ಕೆ 176 ರನ್‌ಗಳ ಗುರಿಯನ್ನು ತಲುಪಿ 8 ವಿಕೆಟ್‌ಗಳಿಂದ ಪಂದ್ಯವನ್ನು ಗೆದ್ದುಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ರಾಯಲ್ಸ್ ಪರ ರೂಬಿನ್ ಹರ್ಮನ್ 53 ಎಸೆತಗಳಲ್ಲಿ ಎಂಟು ಬೌಂಡರಿ ಮತ್ತು ಮೂರು ಸಿಕ್ಸರ್‌ಗಳ ಸಹಾಯದಿಂದ ಅಜೇಯ 81 ರನ್ ಗಳಿಸಿದರೆ, ತಂಡದ ಯುವ ಆರಂಭಿಕ ಆಟಗಾರ ಲುವಾನ್-ಡ್ರೆ ಪ್ರಿಟೋರಿಯಸ್ ಜೊತೆಗೆ ಎರಡನೇ ವಿಕೆಟ್‌ಗೆ 64 ಎಸೆತಗಳಲ್ಲಿ 99 ರನ್‌ಗಳ ಜೊತೆಯಾಟ ಕೂಡ ನಡೆಸಿದರು.

## 2ನೇ ಏಕದಿನ ಪಂದ್ಯಕ್ಕೂ
# ಮುನ್ನ ಸಿಹಿಸುದ್ದಿ



ಭಾರತ ತಂಡ ಇಂಗ್ಲೆಂಡ್ ವಿರುದ್ಧದ ಮೊದಲ ಏಕದಿನ ಪಂದ್ಯವನ್ನು ಗೆದ್ದಿದ್ದು, ಇದೀಗ ಫೆಬ್ರವರಿ 9 ರಂದು ಕಟಕ್‌ನಲ್ಲಿ ನಡೆಯುವ ಎರಡನೇ ಪಂದ್ಯದಲ್ಲಿ ಸರಣಿ ಗೆಲ್ಲುವ ಗುರಿಯಲ್ಲಿದೆ. ಮೊದಲ ಪಂದ್ಯದಿಂದ ಗಾಯದಿಂದ ಹೊರಗಿದ್ದ ವಿರಾಟ್ ಕೊಹ್ಲಿ ಎರಡನೇ ಪಂದ್ಯಕ್ಕೆ ಫಿಟ್ ಆಗಿದ್ದಾರೆ. ಕೊಹ್ಲಿ ಅವರ ವಾಪಸಾತಿಯಿಂದಾಗಿ ಯುವ ಆಟಗಾರ ಯಶಸ್ವಿ ಜೈಸ್ವಾಲ್ ತಂಡದಿಂದ ಹೊರಬೀಳುವ ಸಾಧ್ಯತೆಯಿದೆ.

ಇಂಗ್ಲೆಂಡ್ ವಿರುದ್ಧದ ಮೊದಲ ಏಕದಿನ ಪಂದ್ಯವನ್ನು 4 ವಿಕೆಟ್‌ಗಳಿಂದ ಗೆದ್ದುಕೊಂಡಿರುವ ಟೀಂ ಇಂಡಿಯಾ ಇದೀಗ ಫೆಬ್ರವರಿ 9 ರಂದು ಕಟಕ್‌ನಲ್ಲಿ ನಡೆಯಲಿರುವ ಎರಡನೇ ಏಕದಿನ ಪಂದ್ಯವನ್ನು ಗೆದ್ದು ಸರಣಿಯನ್ನು ತನ್ನದಾಗಿಸಿಕೊಳ್ಳಲು ಎದುರು ನೋಡುತ್ತಿದೆ. ಇತ್ತ ಇಂಗ್ಲೆಂಡ್ ಕೂಡ ಈ ಪಂದ್ಯವನ್ನು ಗೆಲ್ಲುವ ಮೂಲಕ ಸರಣಿಯನ್ನು 1-1 ಅಂತರದಿಂದ ಸಮಬಲಗೊಳಿಸಬೇಕೆಂದು ಬಯಸುತ್ತಿದೆ. ಈ ನಡುವೆ ಟೀಂ ಇಂಡಿಯಾಕ್ಕೆ ಕೊಂಚ ಸಮಾಧಾನಕರ ಸುದ್ದಿ ಸಿಕ್ಕಿದ್ದು, ಇಂಜುರಿಯಿಂದಾಗಿ ಮೊದಲ ಪಂದ್ಯದಿಂದ ಹೊರಗುಳಿದಿದ್ದ ವಿರಾಟ್ ಕೊಹ್ಲಿ, ಎರಡನೇ ಪಂದ್ಯಕ್ಕೆ ಸಂಪೂರ್ಣ ಫಿಟ್ ಆಗಿದ್ದು, ತಂಡದಲ್ಲಿ ಆಡುವುದು ಖಚಿತ ಎಂದು ವರದಿಯಾಗಿದೆ. ವಾಸ್ತವವಾಗಿ ನಾಗ್ಪುರ ಏಕದಿನ ಪಂದ್ಯಕ್ಕೂ ಮುನ್ನ ಅಭ್ಯಾಸದ ವೇಳೆ ವಿರಾಟ್ ಕೊಹ್ಲಿ ಮೊಣಕಾಲಿಗೆ ಇಂಜುರಿಯಾಗಿದೆ ಎಂಬ ಮಾಹಿತಿ ಹೊರಬಿದ್ದಿತ್ತು. ಆ ಬಳಿಕ ಪಂದ್ಯದಿಂದ ಹೊರಗುಳಿದಿದ್ದ ಕೊಹ್ಲಿ ಅವರ ಕಾಲಿಗೆ ಬ್ಯಾಂಡೇಜ್ ಸುತ್ತಿರುವುದು ಕೂಡ ಫೋಟೋ ಹಾಗೂ ವಿಡಿಯೋ ಮೂಲಕ ವೈರಲ್ ಆಗಿತ್ತು. ಮೊದಲ ಪಂದ್ಯದ ಟಾಸ್ ವೇಳೆ ಈ ಬಗ್ಗೆ ಮಾತನಾಡಿದ್ದ ನಾಯಕ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಬಲಗಾಲಿನ ನೋವಿನಿಂದ ಬಳಲುತ್ತಿದ್ದು, ಅವರಿಗೆ ಮೊದಲ ಏಕದಿನ ಪಂದ್ಯದಿಂದ ವಿಶ್ರಾಂತಿ ನೀಡಲಾಗಿದೆ ಎಂದಿದ್ದರು.

**ಕೊಹ್ಲಿಗೆ ಈ ಸರಣಿ ಬಹಳ ಅವಶ್ಯಕ**

ವರದಿಯ ಪ್ರಕಾರ, ಪ್ರಸ್ತುತ ಕೊಹ್ಲಿ ಸಂಪೂರ್ಣವಾಗಿ ಚೇತರಿಸಿಕೊಂಡಿದ್ದು ಎರಡನೇ ಏಕದಿನ ಪಂದ್ಯಕ್ಕೆ ಲಭ್ಯರಾಗಲಿದ್ದಾರೆ ಎಂದು ತಿಳಿದುಬಂದಿದೆ. ಚಾಂಪಿಯನ್ಸ್ ಟ್ರೋಫಿ ಇನ್ನು ಕೆಲವೇ ದಿನಗಳಲ್ಲಿ ಆರಂಭವಾಗುವುದರಿಂದ ಕೊಹ್ಲಿ ಎರಡನೇ ಏಕದಿನ ಪಂದ್ಯವನ್ನು ಆಡುವುದು ಅತ್ಯವಶ್ಯಕವಾಗಿದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966